may do so or if they want them to be sent to their residence or rooms, I will arrange that also. I want that they should be taken delivery of early because the discussion may take place on this subject at an early date.

Sri M. V. KRISHNAPPA.—We undertake to deliver them at their residence ; otherwise, they will require a peon to carry them.

Sri M. V. RAMA RAO (Minister for Law).—Sir, I beg to laya copy of Notification No. LAW 1 CCF 65 dated 9th February 1965 (Remission of fees payable under the Mysore Court Fees and Suits Valuation Act, 1958) as required under sub-section (2) of section 70 of the Mysore Court Fees and Suits Valuation Act, 1958.

Sri R. M. PATIL (Minister for Home).—Sir, I beg to lay a copy of Notification No. HD 73 TMT 64 dated 31st August 1964 (Exemption from Tax Payable) as required under sub-section (2) of section 16 of the Mysore Motor Vehicles Taxation Act, 1958.

Sri RAMAKRISHNA HEGDE (Minister for Development, Panchayati Raj and Co-operation).—Sir, I beg to lay a copy of Notification No. DRL 9 BTX 63 dated 15th January 1965 (The Mysore Taluk Boards (Manner of levy and collection of cess) Rules, 1964) as required under section 246 of the Mysore Village Panchayats and Local Boards Act, 1959.

MYSORE TENANCY LAWS (AMENDMENT) BILL, 1965.

Introduction.

Sri M. V. KRISHNAPPA (Minister for Revenue).—I beg to introduce the Mysore Tenancy Laws (Amendment) Bill, 1965.

Mr. SPEAKER.—The Mysore Tenancy Laws (Amendment) Bill, 1965, is introduced.

Motion to consider.

Sri M. V. KRISHNAPPA.—I beg to move :

" That the Mysore Tenancy Laws (Amendment) Bill, 1965, be taken into consideration."

Mr. SPEAKER.—Motion moved :

" That the Mysore Tenancy Laws (Amendment) Bill, 1965, be taken into consideration."

Sri M. V. KRISHNAPPA.—Sir, temporary protection was given from eviction to tenants. The Land Reforms Act could not be introduced because of certain defects in it. We had to get the approval of the House for extension of the temporary protection and that protection expires on 31st March this year. So we thought it better

(SRI M. V. KRISHNAPPA)

to get another year's extension of this protection. I can, however, assure the House that there is no need of continuing this protection for a full period of one more year because we have already prepared the amendments to the Land Reforms Act and we intend to introduce them in this House within a day or two and by the end of this Session we want to see that these amendments are passed in both the Houses and we get the assent of the President. We propose to introduce Land Reforms on the 1st July this year.

Our friends may ask us why we have delayed in introducing land reforms. That has been answered more than once in this august House. The reasons are well-known. We were saying as if it was a prediction that this law will be defective as soon as the Supreme Court struck down certain sections of the Kerala Agrarian Act. But our friends were doubting that we were deliberately delaying the introduction of land reforms. When Madras started introducing the land reforms, as we expected and as we had predicted, the entire Act was struck down by the Supreme Court. Thereafter, as is known to everyone, Parliament had to pass the 17th amendment to the Constitution. That was in the month of September last. Till then no State Government, however earnest it was, could have brought the land reforms into force. That is the main reason why the land reforms in Mysore State could not be enforced before the passing of the 17th Amendment to the Constitution in the September session of Parliament. After that session of Parliament this is the first session we are meeting and we have prepared the necessary amendments to the Land Reforms Act and we intend to get them passed in this session and bring the Act into force on 1st July this year.

There were a few minor amendments to the Act suggested by the Government of India and the Planning Commission. We had discussion with them on those points and we have arrived at unanimous decisions and even these minor amendments will be incorporated in the amending Bill and passed in this session.

[MR. DEPUTY SPEAKER in the Chair]

†ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ, ಮಾನ್ಯ ಕಂದಾಯ ಶಾಖೆಯ ಮಂತ್ರಿಗಳು ಮೈಸೂರು ರಾಜ್ಯದ ಗೇಣಿ ಶಾಸನಕ್ಕೆ ಸಂಬಂಧಪಟ್ಟ ತಿದ್ದುಪಡಿಯ ವಿಧೇಯಕವನ್ನು ಈ ಮಾನ್ಯ ಸಭೆಯಮುಂದೆ ಮಂಡಿಸುತ್ತಾ ಇದರಲ್ಲಿ ಚರ್ಚೆಮಾಡುವುದು ಏನಿದೆ, ಎರಡು ಗಂಟೆಯ ಕಾಲವನ್ನು ಇದಕ್ಕೆ ಏತಕ್ಕೆ ಕೊಟ್ಟಿದ್ದಾರೆ ಎಂದು ಆಶ್ಚರ್ಯವನ್ನು ವ್ಯಕ್ತಪಡಿಸಿದರು. ನಿಜ, ಈ ವಿಷಯದಲ್ಲಿ ಚರ್ಚೆಮಾಡುವುದು ಏನೂ ಇಲ್ಲ. ಆದರೆ ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತರುವ ವಿಷಯದಲ್ಲಿ ಎಷ್ಟು ಉತ್ಸುಕತೆಯನ್ನು ತೋರಿದ್ದರು, ಮತ್ತು ಎಷ್ಟು ಪ್ರಾಮಾಣಿಕತೆಯನ್ನು ಹೊಂದಿದ್ದರೂ ಆ ವಿಷಯದಲ್ಲಿ ಜನತೆಗೆ ಏನು ಭರವಸೆಯನ್ನು ಕೊಟ್ಟಿದ್ದರೋ ಅದನ್ನು ಉಳಿಸಿಕೊಳ್ಳುವ ಬಗ್ಗೆ ಸರ್ಕಾರ ಎಷ್ಟುದೂರ ಸಾಗಿದೆ ಎಂಬ ಪ್ರಶ್ನೆಯನ್ನು ನಾವು ಬಹಳ ವಿಷಾದದಿಂದ ಚರ್ಚೆ ಮಾಡಬೇಕಾಗಿದೆ. ಈ ತಿದ್ದುಪಡಿ ಈ ಮಾನ್ಯ ಸಭೆಯ ಮುಂದೆ ನಾಲ್ಕನೆಯ ಸಲ ಬರುತ್ತಿದೆ. 1956ನೆಯ ಇಸವಿಯಲ್ಲಿ ಈ ರಾಜ್ಯ ವಿಸ್ತಾರವಾಗಿ ಕರ್ನಾಟಕ ರಾಜ್ಯ ಆಯಿತು. ಮೊದಲು ಮುಂಬೈನಲ್ಲಿ ಬೇರೆ ಗೇಣಿ ಶಾಸನ ಇತ್ತು. ಹೈದರಾಬಾದ್ ಕರ್ನಾಟಕದಲ್ಲಿ ಬೇರೆ

ಗೇಣಿ ಶಾಸನ ಇತ್ತು. ಕೊಡಗಿನಲ್ಲಿ ಬೇರೆ ಗೇಣಿಶಾಸನ ಇತ್ತು. ಬಳ್ಳಾರಿ ಮಂಗಳೂರು ಈ ಪ್ರದೇಶದಲ್ಲಿ ಬೇರೆ ಗೇಣಿ ಶಾಸನ ಇತ್ತು. ಮತ್ತು ಹಳೆಯ ಮೈಸೂರಿನಲ್ಲಿ ಬೇರೆ ಗೇಣಿಶಾಸನ ಇತ್ತು. ಇವುಗಳನ್ನೆಲ್ಲಾ ಕ್ರೋಢೀಕರಿಸಿ ಭೂಸುಧಾರಣೆಯ ಕಾನೂನನ್ನು ಜಾರಿಗೆ ತರುವವರೆಗೆ ಒಂದು ಏಕರೂಪವಾದ ಗೇಣಿಶಾಸನವನ್ನು ಜಾರಿಗೆ ತರುತ್ತೇವೆ ಎಂದು ಹೇಳಿ ಆಗಿನ ಕಾಲದ ಸರ್ಕಾರ ಭರವಸೆಯನ್ನು ಕೊಟ್ಟಿತ್ತು. ಅದರ ಪ್ರಕಾರ ಹಿಂದೆ ಇದ್ದ ಮಂತ್ರಿಮಂಡಲ ಹೋಗಿ ಮತ್ತೊಂದು ಮಂತ್ರಿಮಂಡಲ ಬಂತು. ಆಗ ಶ್ರೀಮಾನ್ ಜತ್ತಿಯವರ ಅಧ್ಯಕ್ಷತೆಯಲ್ಲಿ ಭೂಸುಧಾರಣಾ ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿಯವರು ಸರ್ಕಾರಕ್ಕೆ ತಮ್ಮ ವರದಿಯನ್ನು ಕೊಟ್ಟರು. ಅನಂತರ ಶ್ರೀಮಾನ್ ಜತ್ತಿಯವರೇ ಮುಖ್ಯ ಮಂತ್ರಿಗಳಾಗಿ ಸುಮಾರು 4 ವರ್ಷಗಳ ಕಾಲ ರಾಜ್ಯಭಾರವನ್ನು ಮಾಡಿದರು. ಇಷ್ಟೆಲ್ಲಾ ಆದಮೇಲೆ ಕೇಂದ್ರಸರ್ಕಾರದಿಂದ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಇಲ್ಲಿಗೆ ಬಂದು ಇಲ್ಲಿ ಕಂದಾಯ ಮಂತ್ರಿಗಳಾಗಿ ಅವರು ರೈತರ ಹಿತರಕ್ಷಣೆಯನ್ನು ಮಾಡತಕ್ಕಂಥ ಮಸೂದೆಯನ್ನು ಈಗ ಈ ಸಭೆಯಮುಂದೆ ಮಂಡಿಸುತ್ತಿದ್ದಾರೆ. ಈ ತಿದ್ದುಪಡಿ ಮಸೂದೆ ಈ ಮಾನ್ಯ ಸಭೆಯಮುಂದೆ ನಾಲ್ಕನೆಯ ಬಾರಿ ಬರುತ್ತಿದೆ. ರಾಷ್ಟ್ರದ ಸಮಸ್ಯೆಯಾಗಿರತಕ್ಕ ಈ ಭೂಸಮಸ್ಯೆಯನ್ನು ಸರ್ಕಾರದವರು ಬಗೆಹರಿಸದೆ ವಿಫಲರಾಗಿರುವುದರಿಂದ ಇವೊತ್ತು ಆಹಾರಧಾನ್ಯಗಳ ಸಮಸ್ಯೆ, ಆಹಾರಧಾನ್ಯದ ಉತ್ಪಾದನೆ ಕುಂಠಿತವಾಗಿದೆ. ಮತ್ತು ರೈತರ ಅಭಿವೃದ್ಧಿಯ ಕೆಲಸಕಾರ್ಯಗಳು ಕುಂಠಿತವಾಗಿವೆ ಎನ್ನುವ ವಿಷಯದಲ್ಲಿ ಬಹುಶಃ ಯಾರಿಗೂ ಭಿನ್ನಾಭಿಪ್ರಾಯ ಇರಲಾರದು. ಯೋಜನಾ ಆಯೋಗದವರು ಮೇಲಿಂದಮೇಲೆ ಭೂಸುಧಾರಣೆಯ ಕಾನೂನನ್ನು ಮೊದಲು ಜಾರಿಗೆ ತರಬೇಕೆಂದು ಒತ್ತಾಯ ಮಾಡಿದರು. ಮಧ್ಯವರ್ತಿಜನಗಳನ್ನು ತೊಡೆದುಹಾಕಬೇಕು, ಯಾರು ಭೂಮಿಯನ್ನು ಉಳುಮೆ ಮಾಡುತ್ತಾನೆಯೋ ಅವನೇ ಭೂಮಿಯ ಒಡೆಯನಾಗಬೇಕು. ಇದನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕು; ಇಲ್ಲದಿದ್ದರೆ ಆಹಾರ ಧಾನ್ಯದ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲ ಎಂದು ಅನೇಕ ಸಾರ್ತಿ ರಾಜ್ಯಸರ್ಕಾರದವರಿಗೆ ಆದೇಶವನ್ನು ಕೊಟ್ಟಿದ್ದಾರೆ. ಮತ್ತು ಅವರ ಯೋಜನೆಗಳಲ್ಲಿ, ಒಂದು ಎರಡು, ಮೂರನೆ ಯೋಜನೆಗಳ ಪ್ರತಿಗಳಲ್ಲಿ ಬರೆದಿದ್ದಾರೆ. ಈಗಾಗಲೆ ನಾವು ಜಮೀನುದಾರಿ ಪದ್ಧತಿಯನ್ನು ತೊಡೆದು ಹಾಕಿದ್ದೇವೆ, ನಮ್ಮ ಎಲ್ಲ ರಾಜ್ಯಗಳಲ್ಲೂ ಭೂಸುಧಾರಣೆ ತಂದಿದ್ದೇವೆ, ಮೈಸೂರಿನಲ್ಲಿ ಕಾನೂನು ಆಗಿಬಿಟ್ಟಿದೆ ಎಂದು ಅವರ ವರದಿಯಲ್ಲಿ ಹೇಳಿಕೊಂಡಿದ್ದಾರೆ. ನಿಜ. ಕಾನೂನನ್ನು ಮಾಡಿ, ಕಾನೂನಿನ ಕಡತಕ್ಕೆ ಸೇರಿಸಿ ಇಟ್ಟಿರುವುದು ನಿಜ. ಆದರೆ ವಾಸ್ತವವಾಗಿ 1956ನೇ ಇಸವಿಯಿಂದ ರಾಜ್ಯದಲ್ಲಿ ಗೇಣೀದಾರರ ಸ್ಥಿತಿ ನೋಡಿದರೆ, ಎಷ್ಟು ಚಿಂತಾಜನಕವಾಗಿದೆಯೆಂದರೆ, ಈ ರಾಜ್ಯದಲ್ಲಿ ಸರಕಾರ, ಕಾನೂನು ಕಾಯಿದೆ ಇಲ್ಲವೊ ಅನ್ನಿಸುತ್ತದೆ. ದೊಡ್ಡವನು, ದೊಣ್ಣೆ ಇದ್ದವನು, ತನ್ನ ಅಧಿಕಾರವನ್ನು ತಾನೇ ಚಲಾಯಿಸುತ್ತಿರುವುದನ್ನು ಹಳ್ಳಿಗಳಲ್ಲಿ ನೋಡುತ್ತಾ ಇದ್ದೇವೆ. ಈ ಒಂದು ತಿದ್ದುಪಡಿಯನ್ನು ಮಾಡಿ, ಏನು ರೈತರನ್ನು ಭೂಮಿಯಿಂದ ಉಚ್ಚಾಟನೆ ಮಾಡಬಾರದು ಎಂಬ ಸದುದ್ದೇಶವನ್ನು ಈ ಮನೆ ವರ್ಷೆ ವರ್ಷೆ ವ್ಯಕ್ತಪಡಿಸುತ್ತಿದೆಯೋ, ಆ ಸದುದ್ದೇಶ ಎಷ್ಟರಮಟ್ಟಿಗೆ ಗೇಣಿ ರೈತರನ್ನು ಕಾಪಾಡುತ್ತದೆ ಅನ್ನುವುದನ್ನು ನಾವು ವಿಚಾರಮಾಡಬೇಕು.

ಸ್ವಾಮಿ, ಈ ವಿಷಯದಲ್ಲಿ ಶ್ರೀಮಾನ್ ಕೃಷ್ಣಪ್ಪನವರಿಗೆ ಕಳಕಳಿ ಇದ್ದಿದ್ದರೆ, ಉಚ್ಚ, ಶ್ರೇಷ್ಠ ನ್ಯಾಯಾಲಯ ಈ ತಕರಾರು ಎತ್ತಿಹಿಡಿದ ಒಂದು ವಾರದಲ್ಲಿ ವಿಧಾನಸಭೆಯನ್ನು ಸೇರಿಸಿ ತಿದ್ದುಪಡಿ ತರಬಹುದಾಗಿತ್ತು. ಏಕೆಂದರೆ, ಅವರಿಗೆ ಗೊತ್ತಿತ್ತು 1965ರ ಮಾರ್ಚಿ 31ನೇ ತಾರೀಖು ಈ ಪ್ರೊಟೆಕ್ಷನ್ ತಿದ್ದುಪಡಿ ಮುಕ್ತಾಯವಾಗುತ್ತೆ. ಮುಂದಿನ ಬಜೆಟ್ ಅಧಿವೇಶನದಲ್ಲಿ ಕಾನೂನು ತಿದ್ದುಪಡಿ ಮಾಡುವುದು ಶಕ್ಯವಿಲ್ಲ ಎಂದು. ಈ ವಿಳಂಬದಿಂದ ಅನಾಹುತ, ಅಪಾಯವಾಗುತ್ತದೆಂದು ಈಗಾಗಲೇ ರೈತರು ಅಪಾಯಕ್ಕೆ ಒಳಗಾಗಿದ್ದಾರೆಂದು ಅವರು ಮನಗಂಡಿದ್ದರೆ, ಅವರು ಈ ಕೆಲಸವನ್ನು ಮಾಡಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಇವತ್ತು ಮಾರ್ಚಿ ತಿಂಗಳು ಮುಗಿಯುತ್ತಾ ಬರುತ್ತಿರುವುದರಿಂದ, ಈ ತಿದ್ದುಪಡಿಯನ್ನು ಮಾಡಬೇಕೆಂದು ಈ ಸಭೆಯ ಮುಂದೆ ಬಂದಿದ್ದಾರೆ. ಬರುವಾಗ ನಮಗೆ ಆಶ್ವಾಸನೆ ಕೊಡುತ್ತಾರೆ. ಈ ಸಭೆಯ ಮಂದೆ ಮಂಡಿಸುವಾಗ ಆದಷ್ಟು ಬೇಗ ಕಾನೂನನ್ನು ಮಾಡಿ ಜುಲೈ ತಿಂಗಳಿಗೆ ಈ ಸುಧಾರಣೆಯನ್ನು ಕಾರ್ಯಗತಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಇಂಥ ಎಷ್ಟೋ ಭರವಸೆಗಳನ್ನು ಕೇಳಿ ಕೇಳಿ ನಮ್ಮ ಕಿವಿಗಳು ಕಪ್ಪಾಗಿ ಹೋಗಿವೆ. ಈ ತಿದ್ದುಪಡಿಯಲ್ಲಿ ನಾನು ಮುಂದೆ ಓದುವ ತಿದ್ದುಪಡಿಯನ್ನು ನೋಡಿದರೆ ದೇಶದ ಜನ ಎಷ್ಟು ನಗುತ್ತಾರೆ, ಹಾಸ್ಯ ಮಾಡುತ್ತಾರೆ ಅನ್ನುವುದು ಗೊತ್ತಾಗುತ್ತದೆ :—

5. (1) (*a*) :

in sub-section (1), for the words and figures "during the calendar year 1957 or 1958 or 1959 or 1960 or 1961 or 1962 or

(ಶ್ರೀ ಎಸ್. ಗೋಪಾಲ ಗೌಡ)

1963 or 1964 or 1965 shall be deemed to be a tenancy for a further period ending on the thirty-first day of March 1965..."

ಇದಕ್ಕಿಂತ ಅವಹೇಳನಕರವಾದ ಸಾಕ್ಷಿ, ಈ ಸರಕಾರದ ಅಸಮರ್ಥತೆ, ಭೂಸುಧಾರಣೆ ಬಗ್ಗೆ ಸರಕಾರ ಬಗೆದಿರತಕ್ಕಂಥ ದ್ರೋಹ ನೋಡಬೇಕೆಂದರೆ, ಇದಕ್ಕಿಂತ ಹೆಚ್ಚಿನ ಸಾಕ್ಷಿ ಬೇಡ ಎಂದು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ತಾವೇ ಯೋಚನೆ ಮಾಡಿ : 1947ನೆ ಇಸವಿ ಆಗಸ್ಟು ತಿಂಗಳು 15ನೆ ತಾರೀಖು ರಾತ್ರಿ 12 ಗಂಟೆಗೆ ಏನು ಸ್ವಾತಂತ್ರ್ಯ ಬಂದಿತು, ಆ ಶೂನ್ಯ ಗಳಿಗೆಯಲ್ಲಿ ಇಂಥ ಒಂದು ಮಸೂದೆ ಬರಬೇಕಾಗಿತ್ತು; ಮಧ್ಯವರ್ತಿಗಳನ್ನು ರದ್ದು ಮಾಡಬೇಕಾಗಿತ್ತು. ಇದು ಒಂದು ಗ್ರಾಮದ, ರಾಜ್ಯದ, ಒಂದು ಪ್ರಾಂತ್ಯದ ಸಮಸ್ಯೆ ಆಗಿಲ್ಲ, ಇದು ಇಡೀ ದೇಶದ ಸಮಸ್ಯೆ. ಇವತ್ತು ಸ್ವಾತಂತ್ರ್ಯ ಬಂದ ಮಾತ್ರಕ್ಕೆ ಜಮೀನುದಾರರ ಬಂಧನದಿಂದ ರೈತರು ಮುಕ್ತರಾಗಲಿಲ್ಲ. ಈ ಸರಂಜಾಮಿಶಾಹಿಗಳು ಈ ಕಾಂಗ್ರೆಸು ಅಧಿಕಾರದಿಂದ ಸವಲತ್ತುಗಳನ್ನು ಪಡೆದುಕೊಂಡು ಭದ್ರವಾಗಿದ್ದಾರೆ. ಇವತ್ತು ಹಳ್ಳಿಗಳಲ್ಲಿ ರೈತನನ್ನು, ಬೇಸಾಯಗಾರರನ್ನು ಗ್ರಾಮದಿಂದ ಸಂಪೂರ್ಣವಾಗಿ ತಳ್ಳಿ ಹಾಕಿದ್ದಾರೆ—ಬರೀ ಜಮೀನಿನಿಂದ ಅಲ್ಲ; ಗ್ರಾಮದಿಂದಲೇ ರೈತರನ್ನು ಉಚ್ಚಾಟನೆ ಮಾಡತಕ್ಕಂಥ ಶಕ್ತಿಯನ್ನು ಅವರು ಪಡದುಕೊಂಡಿದ್ದಾರೆ. ಸರಕಾರ ಕೊಡುವ ಸವಲತ್ತುಗಳನ್ನೆಲ್ಲಾ ಜಮೀನುದಾರರುಗಳು ಪಡೆದಿದ್ದಾರೆ: ಇವತ್ತು ಪಂಪು ಸೆಟ್ಟುಗಳನ್ನು ಕೊಡುವುದಾಗಲಿ, ಸಹಕಾರ ಸಂಸ್ಥೆಗಳಿಂದ ಸಾಲ ಪಡೆಯುವುದಾಗಲಿ, ಬೀಜಗಳನ್ನು ಪಡೆಯುವುದಾಗಲಿ, ಗೊಬ್ಬರವನ್ನು ಪಡೆಯುವುದಾಗಲಿ, ಯಾವುದೇ ಒಂದು ಸವಲತ್ತನ್ನು, ಯೋಜನೆಯ ಅಭಿವೃದ್ಧಿ ಕಾರ್ಯಗಳನ್ನು ಅವರಿಗೆ ಮೀಸಲು ಇಟ್ಟು ಕೊಟ್ಟಿದ್ದಾರೆ. ಅವನ್ನೆಲ್ಲಾ ಸಾಮಾನ್ಯವಾಗಿ ಜಮೀನುದಾರರೆ ಪಡೆದುಕೊಂಡಿದ್ದಾರೆ; ಗೇಣಿದಾರರಿಗೆ ಏನು ಸವಲತ್ತೂ ಬಂದಿಲ್ಲ. ಇವತ್ತು ಮಾನ್ಯ ಸಭೆಯಲ್ಲಿ ಒಂದು ಪ್ರಶ್ನೆ ಬಂದಿತ್ತು: ಅದೇನೆಂದರೆ, ಗೇಣಿದಾರರಿಗೆ ಪಂಪ ಸೆಟ್ಟುಗಳನ್ನು ಯಾವ ಆಧಾರದ ಮೇಲೆ ಕೊಡಬೇಕು, ಗೇಣಿದಾರರಿಗೆ ಸಾಲ ಕೊಡಬೇಕಾದರೆ ಏನು ಆಧಾರದ ಮೇಲೆ ಕೊಡಬೇಕು ಅನ್ನುವುದು. ಇವತ್ತು ಯಾವ ರೀತಿಯಿಂದಲೂ ಸಾಲ ಮತ್ತು ಸರಕಾರದ ಸಹಾಯವನ್ನು ಪಡೆದುಕೊಳ್ಳುವುದಕ್ಕೆ ಅಶಕ್ತವಾಗಿರತಕ್ಕಂಥ ಆ ಒಬ್ಬ ಪ್ರಾಣಿ ಏನಿದ್ದಾನೆ, ಗೇಣಿ ಉಳಿಮೆ ಮಾಡತಕ್ಕಂಥ ಮನುಷ್ಯ ಏನಿದ್ದಾನೆ ಅವನು ಎತ್ತು, ಕತ್ತೆಗಳಿಗಿಂತ ಕಡೆಯಾಗಿ ದುಡಿಯುತ್ತಾನೆ. ಇಂಥ ಒಂದು ಮೂಲವಾದ ಸುಧಾರಣೆಯನ್ನು ತರುವುದಕ್ಕೆ ಕಾಂಗ್ರೆಸ್ಸು ಸರಕಾರಗಳಿಗೆ ಬಹುಶಃ ಮನಸ್ಸು ಇಲ್ಲ ಅನ್ನುವುದು ಈಗಾಗಲೇ ಸುಸ್ಪಷ್ಟವಾಗಿದೆ. ಅನೇಕ ನಿರ್ಣಯಗಳನ್ನು ಮಾಡಿದರು. ಸಮಾಜವಾದಿ ಸಮಾಜದ ಮಾದರಿ ಸರಕಾರ ಮಾಡುತ್ತೇವೆಂದು ಹೇಳಿದಿರಿ. ನಾಗಪುರದಲ್ಲಿ ಸಹಕಾರ ಬೇಸಾಯವನ್ನು ಮಾಡುತ್ತೇವೆಂದು ನಿರ್ಣಯ ಮಾಡಿದ್ದೀರಿ. ಜನರನ್ನು ಓಟಿಗಾಗಿ ಒಲಿಸಿಕೊಳ್ಳುವುದಕ್ಕೆ, ಅವರ ಪ್ರೀತಿಯನ್ನು ಸಂಪಾದಿಸುವುದಕ್ಕೆ ಏನೇನೋ ನಿರ್ಣಯ ಮಾಡಿದಿರಿ. ಈ ಭೂಸಮಸ್ಯೆಯನ್ನು ನೀವು ಬಗೆಹರಿಸುವುದರ ಮೊದಲು ಅದು ತಾನಾಗಿಯೇ ಬಗೆಹರಿಯುತ್ತಿದೆ ಎಂದು ಸರ್ಕಾರಕ್ಕೆ ಹೇಳುತ್ತೇನೆ. ಗೇಣೀದಾರ ತನ್ನ ಸಾಲದಿಂದ ಮುಕ್ತಾಯವಾಗುವುದಕ್ಕೆ ಸಾಧ್ಯವಾಗದೆ, ಏರಿದ ದರಗಳಲ್ಲಿ ಗೇಣಿ ಕೊಡುವುದಕ್ಕೆ ಸಾಧ್ಯವಾಗದೆ, ಜೀವನವನ್ನು ಮಾಡುವುದಕ್ಕೆ ಸಾಧ್ಯವಾಗದೆ ತಾನಾಗಿಯೆ ಭೂಮಿಯನ್ನು ಸರೆಂಡರ್ ಮಾಡಿ, ಜಮೀನನ್ನು ಬಿಟ್ಟು ಹೋಗುತ್ತಾ ಇದ್ದಾನೆ. ಅಂಥ ಸಹಸ್ರಾರು ಉದಾಹರಣೆಗಳನ್ನು ನಾನು ಕೊಡಬಲ್ಲೆ. ಅವನು ಹಳ್ಳಿ ಬಿಟ್ಟು ದೇಶಾಂತರ ಹೋಗುತ್ತಾ ಇದ್ದಾನೆ: ಪೇಟೆಗಳಲ್ಲಿ ಚೀಲ ಹೊರುತ್ತಿದ್ದಾನೆ; ಹೋಟೇಲುಗಳಲ್ಲಿ ಲೋಟ ತೊಳೆಯುತ್ತಾ ಭಿಕಾರಿಯಾಗಿದ್ದಾನೆ. ಈ ಕಾಂಗ್ರೆಸ್ ಸರಕಾರ ಬಂದ 16-17 ವರ್ಷಗಳಲ್ಲಿ ಭಿಕಾರಿಯಾಗಿದ್ದಾನೆ. ಭಿಕಾರಿಗಳು ಹೆಚ್ಚು ಸಂಖ್ಯೆಯಲ್ಲಿ ಆಗುತ್ತಾ ಇದ್ದಾರೆ; ಈ ಭೂಸುಧಾರಣೆ ಸ್ವಾತಂತ್ರ್ಯ ಬಂದನಂತರದಲ್ಲಿ ತಕ್ಷಣ ಜಾರಿಗೆ ಬರದಿದ್ದರಿಂದ. ಸ್ವಾಮಿ, ಈ ಗೇಣಿ ಸಮಸ್ಯೆ ಅಷ್ಟು ದೊಡ್ಡ ಸಮಸ್ಯೆ ಅಲ್ಲ ಎಂದು ಕೂಡ ಕೆಲವು ಸಲ ಹೇಳಿದ್ದಾರೆ, ಏಕೆಂದರೆ ಕೆಲವು ಜನ ಮಾತ್ರ ಗೇಣೀ ಮಾಡುತ್ತಾರೆ ಅಂತ. ವಾಸ್ತವವಾಗಿ ಈ ಮಾತು ನಿಜವಲ್ಲ. ಸಣ್ಣ ಹಿಡುವಳಿದಾರರು ಮೈಸೂರು ರಾಜ್ಯದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಇರದಿರಬಹದು; ಆದರೂ ಸಾಕಷ್ಟು ಸಂಖ್ಯೆಯಲ್ಲಿ ಗೇಣಿ ಮಾಡತಕ್ಕಂಥ ಜನರಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಿತಿಯನ್ನು ನೋಡಿದರೆ ಅದನ್ನು ಮಾನ್ಯ ಭಾಸ್ಕರ ಶೆಟ್ಟರು ಮತ್ತು ಇತರರು ಹೇಳುವುದಕ್ಕೆ ಸಾಧ್ಯ. ಇವತ್ತು ಕಾನೂನು ಏನಿದೆ? ಐದು ವರ್ಷಕ್ಕೆ ಕಡಮೆ ಇಲ್ಲದೆ ಯಾರು ಟೆನನ್ಸಿ ಅನುಭವಿಸಿರುತ್ತಾರೊ, ಆ ಜಮೀನನ್ನು ಅವರಿಗೆ ಖಾಯಂ ಮಾಡಬೇಕೆಂದು ಕಾನೂನಿನಲ್ಲಿ ಇದೆ. ಇವತ್ತು ಚಾಲೂ ಗೇಣಿ ಪದ್ಧತಿ ಇದೆ. ನಾನು ಮಾನ್ಯ ಕೃಷ್ಣಪ್ಪನವರಲ್ಲಿ ನಮ್ರತೆಯಿಂದ ಪ್ರಶ್ನೆ ಮಾಡುತ್ತೇನೆ: ಎಷ್ಟು ಸಾವಿರ ಎಕರೆ ಜಮೀನಿನ ಮೇನೇಜಮೆಂಟನ್ನು ಈ ರೀತಿ ಈ ವರ್ಷ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

2-30 P.M.

ಎಷ್ಟು ಸಾವಿರ ಎಕರೆಗಳು ನಿಮ್ಮ ಮ್ಯಾನೇಜುಮೆಂಟಿಗೆ ಬಂದಿವೆ? ಎಷ್ಟು ಸಾವಿರ ಜನ ರೈತರು ಸರೆಂಡರ್ ಮಾಡಿಕೊಂಡು ಬಂದಿದ್ದಾರೆ? ಈಗಿರುವ ಕಾನೂನಿನಂತೆ ಎಷ್ಟರಮಟ್ಟಿಗೆ ಅದನ್ನು ಕಾರ್ಯಗತ ಮಾಡಲಾಗಿದೆ, ತಾಲ್ಲೂಕುಗಳಲ್ಲಿ ಎಷ್ಟು ಕೇಸುಗಳು ಇನ್ನೂ ಪೆಂಡಿಂಗ್‌ನಲ್ಲಿವೆ? ಹೀಗೆ ಇದೊಂದು ಬರೀ ಕಾಲಹರಣ ಮಾಡಿಕೊಂಡು ಬರತಕ್ಕಂತಹ ಹೊಸ ಮಾರ್ಗವಾಗಿದೆ. ಅಲ್ಲದೆ ಅಮೆರಿಕಾ ದೇಶದ ಹೊಸ ಬೇಸಾಯ ಪದ್ಧತಿಯನ್ನು ಇಲ್ಲಿಯೂ ಜಾರಿಗೆ ತರಬೇಕೆಂದು ಮತ್ತು ಅದಕ್ಕೆ ಪ್ರೋತ್ಸಾಹ ಕೊಡಬೇಕೆನ್ನುವ ಉದ್ದೇಶ ತಮಗೆ ಇದೆ ಎಂದು ನನಗನಿಸುತ್ತಿದೆ. ಈ ಜೀವನ್ಮರಣ ಹೋರಾಟದಲ್ಲಿ ಬಡ ಗೇಣಿದಾರನು ಬೆಳೆದ ಬೆಳೆಯಲ್ಲಿ ಅರ್ಧ ಭಾಗವನ್ನು ಜಮೀನುದಾರನಿಗೆ ಕೊಟ್ಟು ಮತ್ತು ತನ್ನ ಜೀವನಕ್ಕಾಗಿ ಮಾಡಿಕೊಂಡ ಸಾಲ ಸೋಲಗಳನ್ನು ತೀರಿಸಿಕೊಂಡು ಸುಖವಾಗಿ ಬಾಳುವುದಕ್ಕೆ ಈಗಿರುವ ಸ್ಥಿತಿಯಲ್ಲಿ ಸಾಧ್ಯವಿಲ್ಲ. ಈ ಒತ್ತಡದಿಂದ ಪಾರಾಗುವುದಕ್ಕಾಗಿ ರೈತ ಒಂದಲ್ಲ ಒಂದು ರೀತಿಯಿಂದ ಹೊರಕ್ಕೆ ಹೋಗುತ್ತಿದ್ದಾನೆ. ಕಾನೂನು ರೀತಿಯಿಂದ ತಾವೇನೋ ಕನ್‌ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್ ಎಂದು ಮಾಡಿದ್ದೇವೆಂದು ಹೇಳಿಕೊಂಡು ರೈತನನ್ನು ಬಹಳ ಹೀನ ಸ್ಥಿತಿಗೆ ತಂದು ಅವನನ್ನು ತಳ್ಳಿ ಅಥವಾ ಬಿಟ್ಟು ಅವನಿಗೆ ಯಾವ ರಕ್ಷಣೆಯನ್ನೂ ಕೊಡದೇ ಅವನು ಭೂಮಿಯನ್ನು ಬಿಟ್ಟು ಹೋಗುವ ಹಾಗೆ ಮಾಡುತ್ತಿದ್ದೀರಿ. ಸಾಮಾನ್ಯವಾಗಿ ಅವನು ಬದುಕುವ ಸ್ಥಿತಿಯಲ್ಲಿಲ್ಲ. ಅಲ್ಲದೆ ಅನೇಕ ರೈತರಿಗೆ ಅನೇಕ ರೀತಿಯ ಕಿರುಕುಳಗಳಿಂದಾಗಿ ಸ್ಥಳವನ್ನು ಬಿಟ್ಟು ಹೋಗುತ್ತಿರುವುದನ್ನು ನೋಡುತ್ತಿದ್ದೇನೆ. ತಾವು ಬೇಕಾದರೆ ನನ್ನೊಡನೆ ಬನ್ನಿ. ಶಿವಮೊಗ್ಗ, ತೀರ್ಥಹಳ್ಳಿ, ಹೊಸನಗರ, ಸಾಗರ, ಸೊರಬ ಈ ತಾಲ್ಲೂಕುಗಳಲ್ಲಿ ಏನೇನಾಗಿದೆ ಎನ್ನುವುದನ್ನು ತಮಗೆ ತೋರಿಸುತ್ತೇನೆ. ಇವೊತ್ತು ಗೇಣಿಗಳನ್ನು ರೈತ ಬೆಳೆದ ದವಸದಲ್ಲಿ ಕಾನೂನಿನಂತೆ ನಾಲ್ಕನೇ ಒಂದು ಅಂಶದಷ್ಟು ಗೇಣಿಯನ್ನು ಯಾರೂ ಕೊಡುತ್ತಿಲ್ಲ. ಮತ್ತು ಜಮೀನುದಾರರು ತೆಗೆದುಕೊಳ್ಳುತ್ತಲ್ಲೂ ಇಲ್ಲ. ಹಿಂದೆ ಇದ್ದಂತೆ 50 ಸೇರು ಖಂಡುಗದಂತೆಯೇ ಗೇಣಿಯನ್ನು ಅಳೆಸಿಕೊಳ್ಳುತ್ತಿದ್ದಾರೆ. ಇವೊತ್ತು ಕೂಡ ಐದು ವರ್ಷದ ಗೇಣಿಗಿಂತ ಹಿಂದೆ ಪಡೆದ ಯಾವ ಗೇಣಿದಾರನನ್ನೂ ಬಿಡಿಸಕೂಡದು ಎಂದು ಇದ್ದರೂ ಕೂಡ ಯಾರೂ ಆದರಂತೆ ಮಾಡುತ್ತಿಲ್ಲ. ಅಲ್ಲದೆ ಗುತ್ತಿಗೆಗಾಗಿ ಸುಳ್ಳು ಲೆಕ್ಕವನ್ನು ಬರೆದು ಇನ್ನೂ ಗೇಣಿ ಮೂರು ವರ್ಷ ಬಾಕಿ ಇದೆ ಎಂದು ಬರೆಸಿಕೊಂಡು ಆ ರೈತನನ್ನು ಕೋರ್ಟಿಗೆ ಅಲೆಸೀ ಅಲೇಸಿ ಅವನನ್ನು ಹಣ್ಣು ಮಾಡಿ ಗ್ರಾಮವನ್ನು ಬಿಟ್ಟು ಹೋಗುವಂತೆ ಮಾಡುತ್ತಿದ್ದಾರೆ. ಹೀಗೆ ಮಾಡಿದರೆ ಗೇಣಿದಾರರಿಗೆ ರಕ್ಷಣೆ ಕೊಟ್ಟಂತಾಗುತ್ತದೆಯೇ? ಜಮೀನುದಾರರಿಗೆ ರಕ್ಷಣೆ ಕೋಡಬೇಕೆನ್ನುವ ಉದ್ದೇಶದಿಂದ ಇಂತಹ ಕಾನೂನುಗಳನ್ನು ನಮ್ಮ ಮುಂದೆ ತರುತ್ತಿದ್ದಾರೆಯೇ ವಿನಾ ಇದರಿಂದ ಗೇಣಿದಾರರಿಗೆ ಏನೂ ರಕ್ಷಣೆ ಸಿಗುತ್ತಿಲ್ಲ. ಇವೊತ್ತಿಗೂ ಕೂಡ ತಾವು ಕೋರ್ಟುಗಳಲ್ಲಿ ನೋಡಬಹುದು ಎಷ್ಟೋ ನೂರಾರು ಕೇಸುಗಳು ಜಮೀನುದಾರರುಗಳಿಗೂ ಗೇಣಿದಾರರುಗಳಿಗೂ ನಡೆಯುತ್ತಿದ್ದು ಸ್ಟೇ ಆರ್ಡರನ್ನು ತರಿಸಿಕೊಂಡು ಜಮೀನುದಾರರುಗಳು ಗೇಣಿದಾರರನ್ನು ಓಡಿಸುತ್ತಿದ್ದಾರೆ. ಸೊರಬ ತಾಲ್ಲೂಕು ಒಂದರಲ್ಲೇ ಇವೊತ್ತು ಸುಮಾರು 50 ರಿಂದ 500 ಎಕರೆಯಷ್ಟು ಭೂಮಿಯಲ್ಲಿ ಏನನ್ನು ಬೆಳೆಯದೆ ಜಮೀನುದಾರರುಗಳು ಹಾಗೆ ಪಾಳು ಬಿಟ್ಟಿದ್ದಾರೆ. ಈ ಸಮಸ್ಯೆಯಲ್ಲಿ ಏನೋ ಒಂದುತರಹದ ತೊಂದರೆ ಇದೆ, ನಾಳೆ ಇದನ್ನು ಸರಿ ಮಾಡೋಣ ಎಂದು ಹೇಳುತ್ತಲೇಬರುತ್ತಿದ್ದಾರೆ. ಎಷ್ಟೋ ಸಹಸ್ರ ಸಂಸಾರಗಳು ಗೇಣಿದಾರರುಗಳಾಗಿ ಜಮೀನುಧಾರರುಗಳ ಕೈಗೆ ಸಿಕ್ಕಿಕೊಂಡು ಎಷ್ಟು ವರ್ಷಗಳಿಂದ ನರಳುತ್ತಿದ್ದಾರೆ ಎನ್ನುವುದನ್ನು ತಾವು ಮನಗಾಣಬೇಕು.

ಸ್ವಾಮಿ 1947 ನೆ ಇಸವಿಯಲ್ಲಿ ನೀವು ಏನಾದರೂ ಭೂಸುಧಾರಣೆಯನ್ನು ಜಾರಿಗೆ ತಂದಿದ್ದರೆ ಇವೊತ್ತು ನೀವು 15 ವರ್ಷಗಳ ಗೇಣಿಯನ್ನು ಸರಕಾರಕ್ಕೆ ಕೊಡಬೇಕು ಹಾಗೆ ಕೊಟ್ಟಲ್ಲಿ ಆ ಗೇಣಿದಾರನೆ ಜಮೀನು ಮಾಲೀಕನಾಗುತ್ತಿದ್ದ. ಗೇಣಿದಾರನಿಂದ ಜಮೀನನ್ನು ಕಿತ್ತುಕೊಳ್ಳುವ ಹಾಗಿರಲಿಲ್ಲ. ಆದರೆ ಈಗ ಮಿನಿಮಂ 20 ವರ್ಷಗಳಷ್ಟು ಗೇಣಿಕೊಡಿ ಎಂದು ಹೇಳಬಹುದು. ಅದಕ್ಕಾಗಿ ನೀವೇನೋ ಇಲ್ಲಿ ತಿದ್ದುಪಡಿಗಳನ್ನು ತರಬಹುದು. ಆ ತರಹ ತರುತ್ತೀರೋ ಏನೋ ನನಗೆ ಗೊತ್ತಿಲ್ಲ. ಸರಕಾರ ಸುಮ್ಮನೆ ಕಾಲಹರಣ ಮಾಡುತ್ತಹೊದರೆ ಗೇಣಿದಾರರು ಗೇಣಿಯ ಹಕ್ಕನ್ನು ಳಿಸಿಕೊಂಡು ಬದುಕಲು ಸಾಧ್ಯವಿಲ್ಲ. ಇನ್ನೂ ಕೆಲವು ಸಂದರ್ಭಗಳಲ್ಲಿ ಹೆಚ್ಚಿನ ಹಣವನ್ನು ಪರಿಹಾರ ರೂಪವಾಗಿ ಗೇಣಿದಾರರಿಗೆ ಕೊಡಬೇಕಾಗಿ ಬರುತ್ತದೆ. ಸರಕಾರ ಈ ಹದಿನೇಳು ವರ್ಷಗಳಲ್ಲಿ ಅವನ ರಕ್ಷಣೆಯನ್ನು ಹಾಳು ಮಾಡಿದ್ದಾರೆ. ಸುಮ್ಮನೆ ಭೂಸುಧಾರಣೆ ಮಾಡುತ್ತೇವೆಂದು ಇಲ್ಲಿ ಮಾತನಾಡುತ್ತಿದ್ದಾರೆ. ಗೇಣಿದಾರನಿಗೆ ಅನುಕೂಲ ಮಾಡಬೇಕೆಂದು ಈ ತಿದ್ದುಪಡಿ ತಂದಿದ್ದೇವೆ

(ಶ್ರೀ ಎಸ್. ಗೋಪಾಲ ಗೌಡ)

ಎಂದು ಸರಕಾರದವರು ಇಲ್ಲಿ ಹೇಳಬಹುದು, ವರ್ಷೇ ವರ್ಷ ಈ ರೀತಿ ತೇಪೆ ಹಾಕುವ ಕೆಲಸ ಮಾಡುತ್ತ ಬಂದಿದ್ದಾರೆ. ಪ್ಲಾನಿಂಗು ಕಮಿಷನ್ನಿಗೆ ಕೇಂದ್ರ ಸರಕಾರಕ್ಕೆ ಬರೆದು ನಾವು ಭೂಸುಧಾರಣೆಯನ್ನು ಜಾರಿಗೆ ತಂದಿದ್ದೇವೆಂದು ಹೇಳಿದ್ದಾರೆ. ಈ ಸಂರ್ಭದಲ್ಲಿ ಒಂದು ಮಾತನ್ನು ಇಲ್ಲಿ ಹೇಳುತ್ತೇನೆ. ಇನಾಂ ರದ್ದಿಯಾತಿ ಕಾನೂನನ್ನು ಪಾಸು ಮಾಡಿ ಎಷ್ಟು ವರ್ಷವಾಯಿತು ? ಅದು ಯಾವರೀತಿಯಾಗಿ ಕಾರ್ಯಗತವಾಗುತ್ತಿದೆ ? ಎಷ್ಟು ಸಿಬ್ಬಂದಿಯನ್ನು ಇದಕ್ಕಾಗಿ ನೇಮಕ ಮಾಡಲಾಗಿದೆ ? ಎಷ್ಟು ಗ್ರಾಮಗಳಲ್ಲಿ ಸರ್ವೆ ಕೆಲಸಗಳಾಗುವುದು ಇನ್ನೂ ಬಾಕಿ ಇದೆ ? ಗ್ರಾಮಗಳಲ್ಲಿರುವ ಇನಾಂತಿ ಭೂಮಿಗಳನ್ನು ಇಲ್ಲದಂತೆ ಯಾವಾಗ ಮುಕ್ತಾಯ ಮಾಡುತ್ತೀರಿ ? ಎನ್ನುವುದನ್ನಾರೂ ಇಲ್ಲಿ ಸುಸ್ಪಷ್ಟವಾಗಿ ಹೇಳಬಲ್ಲಿರಾ ? ಮರಣದಿಂದ ಈ ಜಗತನ್ನು ಜನ ಬಿಟ್ಟ ಮೇಲೆ ಇದು ಮುಕ್ತಾಯವಾಗಬೇಕು. ಇದು ಜೀವನ್ಮುಕ್ತ ಸಮಸ್ಯೆ ಆಗಿದೆ. ಇನ್ನು ಇಪ್ಪತ್ತು ವರ್ಷಗಳಲ್ಲಾದರೂ ಈ ದೇಶದಲ್ಲಿ ಇನಾಂ ರದ್ದಿಯಾತಿ, ಸಂಪೂರ್ಣವಾಗಿ ಮುಗಿದು ಹೊಗುತ್ತದೆ ಎನ್ನುವ ಖಾತರಿಯೂ ಇಲ್ಲ. ಸ್ವಾಮಿ, ಒಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ತಾವು ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಎಂದು ಬರೀ ಪೇಪರಿನಲ್ಲಿಟ್ಟುಕೊಂಡಿದ್ದೀರಿ. ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಮಲ್ಲಪ್ಪನವರು ಬಂಡವಾಳಶಾಹಿ ಮಾದರಿಯ ಸಮಾಜವನ್ನು ಮಾಡಬೇಕೆಂದು ಬಂಡವಾಳ ಹಾಕುವವರನ್ನು ಮುಂದೆ ಬನ್ನಿ ಎಂದು ಕರೆಯುತ್ತಿದ್ದಾರೆ ಮತ್ತು ಅವರಿಗೆ ಎಲ್ಲ ಮೇಟೀರಿಯಲ್ಸುಗಳೂ ನಮ್ಮಲ್ಲಿವೆ ಎಂದು ಹೇಳುತ್ತಿದ್ದಾರೆ ಅವರಿಗೆ ಎಲ್ಲಿಂದ ಸಿಮೆಂಟನ್ನು ತಂದು ಒದಗಿಸಿ ಕೊಡುತ್ತೀರಿ ? ಈ ಉದ್ಯಮಕ್ಕಾಗಿ ಎಲ್ಲಿಂದ ಜನರನ್ನು ತರುತ್ತೀರಿ ? ಖಾಸಗೀ ಕ್ಷೇತ್ರಗಳು ರಾಜ್ಯದಲ್ಲಿ ಬೆಳೆದರೆ ಪರಿಣಾಮದಲ್ಲಿ ನಮ್ಮ ದೇಶದಲ್ಲ ಯಾರು ಉಳಿಯುವವರು ? ಇದಕ್ಕಾಗಿ ಬಂಡವಾಳಶಾಹಿ ಸಮಾಜವನ್ನು ಮಾಡಬೇಕೆಂದು ನಿರ್ಣಯಗಳನ್ನು ಮಾಡುತ್ತಿದ್ದೇವೆಂದು ಅವರು ಹೇಳುತ್ತಿದ್ದಾರೆ. ಇವೊತ್ತು ನಮ್ಮ ಶಿವಮೊಗ್ಗ ಜಿಲ್ಲೆಯಲ್ಲ ಒಂದು ಸಕ್ಕರೆ ಕಾರ್ಖಾನೆಯನ್ನು ತೆರೆದು ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಅಮೇರಿಕಾ ಮಾದರಿಯ ಬೇಸಾಯವನ್ನು ಜಾರಿಗೆ ತರಬೇಕೆಂದು ಮಾಡುತ್ತಿದ್ದಾರೆ. ಇಲ್ಲಿನ ಸಕ್ಕರೆ ಕಾರ್ಖಾನೆಯ ಉದಾಹರಣೆಯನ್ನು ನೋಡುವುದಾದರೆ, ಇಲ್ಲಿ ಕಬ್ಬನ್ನು ಒದಗಿಸುವುದಕ್ಕಾಗಿ 5, 000 ಎಕ್ಕರೆಗಳಷ್ಟು ಭೂಮಿಯನ್ನು ಕೊಟ್ಟಿದ್ದಾರೆ. ಇಲ್ಲಿ ಕೆಲಸ ಮಾಡುವವರು ಅಲ್ಲಿರುವ ಗ್ರಾಮಾಂತರ ಜನರಲ್ಲಿ ಎಲ್ಲೆಲ್ಲಿಂದಲೋ ಬಂದಿರುವ ತಮಿಳು ಜನರು ಕಾಮರಾಜರಂತಹ ಜನರು. ಇವೊತ್ತು ಶರಾವತಿಯಿಂದ ಭದ್ರಾ ಚಾನಲ್ಸ್ ಆಸರೆಯಲ್ಲಿ ಬೇಸಾಯ ಮಾಡುವ ಸುಮಾರು 3,000 ಎಕರೆಗಳಷ್ಟು ಭೂಮಿಯಲ್ಲಿ ಕೆಲಸ ಮಾಡುವ ಜನರಲ್ಲಾ ಹೊರಗಿನಿಂದ ಬಂದವರು. ಅವರುಗಳು ಕಬ್ಬನ್ನು ಬೆಳೆದು ಸಕ್ಕರೆ ಕಾರ್ಖಾನೆಗೆ ಒದಗಿಸಿ ಕೊಡಬೇಕು. ಅದೇ ರೀತಿ ಇವೊತ್ತು ಶಿವಮೊಗ್ಗದ ಸುತ್ತಮುತ್ತಲಿನ ಜನರೆಲ್ಲ ತಮ್ಮ ಭೂಮಿಯನ್ನೆಲ್ಲಾ ಬಿಟ್ಟು ಅಲ್ಲಿನ ರೈತರೆಲ್ಲರನ್ನೂ ನಿರ್ನಾಮವಾಗುವ ಹಾಗೆ ಮಾಡಿದ್ದಾರ. ಸಕ್ಕರ ಕಾರ್ಖಾನೆಯಲ್ಲಿ ಕೆಲಸ ಮಾಡುವ ಜನರೆಲ್ಲ ಹೊರಗಿನಿಂದ ಬಂದ ತಮಿಳು ಜನ. ಇಲ್ಲಿರುವ ರೈತರು ಬೆಳೆದು ಕಡಿಮೆ ಬೆಲೆಗೆ ಮಾರಬೇಕು ಮತ್ತು ಅಲ್ಲಿರುವ ಜಮೀನೆಲ್ಲಾ ಕಾಡುಗಳೊಳಗೆ. ಸೂಮಾರು 15-20 ಮೈಲಗಳಷ್ಟು ದೂರ ಕಾಡುಗಳಲ್ಲಿ ಹೋಗಿ ಕಬ್ಬನ್ನು ಬೆಳೆಸಿ ಸಕ್ಕರ ಕಾರ್ಖಾನೆಗೆ ಒದಗಿಸಿ ಕೊಡುತಿರುವಂತಹ ಜನರು ಇವೊತ್ತು ಅಲ್ಲಿರುವವರು! ತಮಿಳು ಜನರು, ಮದರಾಸು ಕಡೆಯಿಂದ ಬಂದವರು. ಕಳೆದ ಹತ್ತು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆ ಒಂದರಲ್ಲೇ ಸುಮಾರು ನಾಲ್ಕು ಲಕ್ಷದಷ್ಟು ತಮಿಳರು ಹೊರಗಿನಿಂದ ಬಂದು ಅಲ್ಲಿರುವ 6—7 ಲಕ್ಷ ಜನಸಂಖ್ಯೆ ಇದ್ದದ್ದು ಇವೊತ್ತು 10—11 ಲಕ್ಷ ಜನಸಂಖ್ಯೆ ಇದೆ. ಶಿವಮೊಗ್ಗ ಜಿಲ್ಲೆಯಲ್ಲಿ ಇಂದು ಕೂಲಿ ಮಾಡುವಜನರೆಲ್ಲಾ ಮದರಾಸು ಕಡೆಯ ತಮಿಳು ಜನರಾಗಿದ್ದಾರೆ. ನೀವು ಶರಾವತಿ ಬಯಲಿನಿಂದ ಹಿಡಿದು ಭದ್ರಾ ಚಾನಲ್ಲುವರೆಗೆ ಎಲ್ಲಿಬೇಕಾದರೂ ಹೋಗಿ ನೋಡಬಹುದು. ಅಲ್ಲೆಲ್ಲಾ ತಮಿಳುಜನರೇ ಇದ್ದಾರೆ. ಇದರ ಪರಿಣಾಮವೇನಾಗುತ್ತದೋ ಇವೊತ್ತೇ ಹೇಳುವುದಕ್ಕಾಗುವುದಿಲ್ಲ. ಇದರಿಂದ ಜಮೀನನ್ನು ಕಳೆದುಕೊಂಡು ಸಹಸ್ರಾರು ಜನರು ಗೇಣಿದಾರರುಗಳಿಂದ ಭೂಮಿಯನ್ನು ಕಿತ್ತುಕೊಳ್ಳುತ್ತಿದ್ದಾರೆ. ಅಲ್ಲದೆ ಇವೊತ್ತು ಹೊರಗಿನಿಂದ ಬಂದ ಈ ಜನಕ್ಕೆ ಅವರು ಎಲ್ಲೆಲ್ಲಿ ಬೇಸಾಯ ಮಾಡುತಿದ್ದಾರೋ ಅವರಿಗೇ ಪಂಪುಸೆಟ್ಟುಗಳನ್ನು ಕೊಡುತ್ತಿದ್ದಾರೆ. ಅವರಿಗೆ ಸಹಸ್ರಾರು ರೂಪಾಯಿಗಳಷ್ಟು ಸಾಲವನ್ನು ಕೋಅಪರೇಟೀವ್ ಸೊಸೈಟಿಗಳಿಂದ ಕೊಡುತ್ತಿದ್ದಾರೆ ಮತ್ತು ಎಲ್ಲ ಸಹಾಯಗಳನ್ನೂ ಕೊಡುತ್ತಾರೆ. ಸರಕಾರದವರು ಬೇಸಾಯದಿಂದ ಹೆಚ್ಚು ಬೆಳೆ ಬರುತ್ತದೆ ಎಂದು ಭಾವಿಸಿದಂತಿದೆ. ಆದರೆ ಹಾಗೆ ಆಗುತ್ತಿಲ್ಲ ಎಂಬುದನ್ನು ಇಂದು ನಾವು ಕಾಣುತ್ತಿದ್ದೇವೆ. ಬೇಸಾಯವನ್ನೇ ನಂಬಿಕೊಂಡು ಹಳ್ಳಿಗಳಲ್ಲಿ ವಾಸ ಮಾಡಿದಂಥವರನ್ನು ಕ್ರಮೇಣ ಈ ಉದ್ಯಮದಿಂದ ಹೊರಗೆ ಹಾಕುತ್ತಿದ್ದೀರಿ. ಇಂಥ ಕ್ರಮ ಜಾರಿಗೆ ತರಲು ಎಲ್ಲ ರೀತಿಯಿಂದ ಪ್ರಯತ್ನ ಮಾಡುತ್ತಿರುವ ಅನುಮಾನ ಬರುತ್ತದೆ. ಪ್ರಜಾಪ್ರಭುತ್ವದಲ್ಲಿ

ಜನ ಕಳೆದ 17 ವರ್ಷದಿಂದ ನಂಬಿಕೆ ಇಟ್ಟಿದಾರೆ. ಪ್ರಜಾಪ್ರಭುತ್ವದಲ್ಲಿ ಅಸೆಂಬ್ಲಿ ಮತ್ತು ಲೋಕ ಸಭೆಯಲ್ಲಿ ನಮ್ಮ ಪ್ರತಿನಿಧಿಗಳು ಅಲ್ಲಿ ಕುಳಿತು ನಮ್ಮ ಸಮಸ್ಯೆ ಬಗೆಹರಿಸಲು ಸೂಕ್ತ ಕಾನೂನು ರಚನೆ ಮಾಡುತ್ತಾರೆ ಎಂದು ಜನ ಏನು ಆಶೆ ಇಟ್ಟುಕೊಂಡಿದ್ದರೊ ಅದು ಇವತ್ತು ಸಂಪೂರ್ಣವಾಗಿ ಭಗ್ನವಾಗಿದೆ, ಜನತೆಗೆ ನಿರಾಶೆಯಾಗಿದೆ. ಕಾನೂನಿನಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಸರಕಾರ ಮಂದಗಮನದಿಂದ ಪ್ರತಿಗಾಮೀ ಧೋರಣೆಯಿಂದ ಕಾಲಹರಣ ಮಾಡುತ್ತಿರುವುದರಿಂದ ಅದರ ಪರಿಣಾಮವಾಗಿ ಮುಂದೆ ಏನಾಗುತ್ತದೆ ಎಂದರೆ ಸರ್ವಾಧಿಕಾರೀ ಆಡಳಿತ ಬರುತ್ತದೆ, ರಕ್ತ ಕ್ರಾಂತಿಯಾಗಬೇಕಾಗಿದೆ ಎನ್ನುವ ಸ್ಥಿತಿ ಬಂದಿದೆ. ಈ ರೀತಿ ಕಾಲ ಹರಣ ಮಾಡುವುದರಿಂದ ಸಮಸ್ಯೆಗಳು ಬಗೆಹರಿಯುವುದಿಲ್ಲ. ಈಸಮಸ್ಯೆ ಇನ್ನಷ್ಟು ತೊಡಕು ಆಗುತ್ತದೆ. ಗೇಣಿದಾರರ ಪರಿಸ್ಥಿತಿ ಕೆಡುತ್ತದೆ. ಕಳೆದ ಎಂಟು ವರ್ಷಗಳಲ್ಲಿ ಏನು ಸುಧಾರಣೆ ತಂದಿದ್ದೀರಿ ? ಸಿದ್ದಾಪೂರ ದಲ್ಲಿ ಒಂದು ರೀತಿ ಕಂದಾಯ ವಸೂಲಿ ಇದ್ದರೆ, ಅಲ್ಲಿಂದ ಸುಮಾರು ಮೂರುಮೈಲಿ ಅಂತರ ದಲ್ಲಿರುವ ಸಾಗರ ತಾಲ್ಲೂಕಿನ ಹಳ್ಳಿಗಳಲ್ಲಿ ಇನ್ನೊಂದು ರೀತಿ ಇದೆ. ಇದು ನ್ಯಾಯವೇ ? ದೇಶಕ್ಕೆ ಸ್ವಾತಂತ್ರ್ಯ ಬಂದು ಹದಿನೇಳು ವರ್ಷವಾಯಿತು, ಭೂಸುಧಾರಣೆಯಾಗಿಲ್ಲ. ಇಂದು ರೈತನ ಸ್ಥಿತಿ ಬದುಕಿ ಸತ್ತ ಹಾಗೆ ಆಗಿದೆ. ಇದು ಬಹಳ ಶೋಚನೀಯವಾದುದು. ಈಗ ಈ ತಿದ್ದುಪಡಿ ಮಸೂದೆ ತರುವ ಉದ್ದೇಶ ಚೆನ್ನಾಗಿಲ್ಲ ಎಂದು ಹೇಳಲು ಬಯಸುತ್ತೇನೆ. ಇವತ್ತಿನ ದಿವಸ ಉಳುಮೆ ಮಾಡತಕ್ಕ ರೈತರು ಈ ರಾಜ್ಯದಲ್ಲಿ ಎನು ಇದ್ದಾರೆಯೋ ಅವರಿಗೆ ಈ ಹಣದಲ್ಲಿ ಪೂರ್ಣವಾಗಿ ಜಮೀನು ಕೊಟ್ಟು ಬಿಡುವುದಕ್ಕೆ ಅವನೇ ಉಳುಮೆ ಮಾಡುತ್ತಾನೆ ಎಂಬುದಕ್ಕೆ ಪಕ್ಕಾ ರಿಕಾರ್ಡ್ ತಯಾರ್ಮಾಡಬೇಕು. ಹಳೇ ಮೈಸೂರು ಪ್ರದೇಶದಲ್ಲಿ ಸರಿಯಾದ ರಿಕಾರ್ಡ್ ಇಲ್ಲ. ಯಾರು ಉಳುಮೆ ಮಾಡುತ್ತಾರೆ ಎನ್ನುವುದಕ್ಕೆ ರಿಜಿಸ್ಟರ್ ಬರೆಯಲಿಲ್ಲ. ಇಂಥ ರಿಜಿಸ್ಟರ್ ಬರೆಸಬೇಕೆಂದು ಸರಕಾರ ಸಹಸ್ರಾರು ರೂಪಾಯಿ ಖರ್ಚುಮಾಡಿ ಫಾರ್ಮ್ಸ್ ಪ್ರಿಂಟ್ ಮಾಡಿಸಿದ್ದಾಯಿತು. ಇದರ ಬಗ್ಗೆ ಕೋರ್ಟಿನ ಗಲಾಟೆ ನಡೆದ ಮೂಲಕ ರಿಜಿಸ್ಟರ್ ಬರೆಯುವ ಕೆಲಸ ನಿಂತು ಹೋಯಿತು. ಪಹಣಿ ಸರಿಯಾಗಿ ಇಲ್ಲ. ರೈತ ಮೊದಲಿನಿಂದಲೂ ಉಳುಮೆ ಮಾಡುತ್ತಾ ಬಂದಿದ್ದರೂ ಕೂಡ ಜಮೀನುದಾರರು ತಾವೇ ಸ್ವಂತ ಸಾಗುವಳಿ ಮಾಡುತ್ತೇವೆ ಎಂದು ಬರೆಯಿಸಿದ್ದಾರೆ. ಇಂದು ಕೂಡ ಹೆಸರು ಖಾತೆಯಲ್ಲಿ ಬರೆಸಬಹುದು. ಇಂಥ ಪರಿಸ್ಥಿತಿ ಇಂದು ಇದೆ. ಹಣವಿದ್ದ ಜಮೀನುದಾರರು ಕೋರ್ಟು ಕಚೇರಿಗಳಿಗೆ ಹೋಗಿ ನ್ಯಾಯಾಲಯದಲ್ಲಿ ಇಂತಹ ಪಹಣಿಯ ಆಧಾರದ ಮೇಲೆ ಜಮೀನುದಾರರ ಕೈವಾಡದಿಂದ ಅವರಿಗೆ ನ್ಯಾಯ ದೊರಕಿಸುತ್ತಿದ್ದಾರೆ. ಇನಾಮುದಾರರು ಕೋರ್ಟಿನಲ್ಲಿ ನ್ಯಾಯ ಪಡೆಯಲು ಹೀಗೆ ಪ್ರಯತ್ನ ಮಾಡುತ್ತಿದ್ದಾರೆ. ಸರಕಾರ ಕೊಡುವ ಕಾಂಪೇನ್‌ಸೇಷನ್ ಅವರೇ ಪಡೆಯುತ್ತಿದ್ದಾರೆ. ಉಳುಮೆ ಮಾಡತಕ್ಕ ರೈತನಿಗೆ ಏನೂ ಕೊಟ್ಟಿಲ್ಲ. ಅವನಿಗೆ ಏನೂ ಉಪಯೋಗವಾಗಿಲ್ಲ. ಉಳುಮೆ ಮಾಡತಕ್ಕಂಥ ರೈತರ ಹೆಸರು ಬರೆದಿರುವ ಒಂದು ಪಕ್ಕಾ ರಿಜಿಸ್ಟರ್ ಮಾಡದೇ ಹೋದರೆ ಭೂಸುಧಾರಣೆ ತಂದು ಏನು ಉಪಯೋಗವಾಗುತ್ತದೆ ? ಹಳೇ ಮೈಸೂರಿನಲ್ಲಿ ನಂಬತಕ್ಕಂಥ ಪಕ್ಕಾ ರಿಕಾರ್ಡು ಇಲ್ಲ. ಗೇಣಿ ಮಾಡುವವರು ಯಾರು ಎಂಬುದಕ್ಕೆ ಸರಿಯಾದ ರಿಕಾರ್ಡು ಇಲ್ಲ. ಉಳುಮೆ ಮಾಡತಕ್ಕಂಥ ರೈತನ ಹತ್ತಿರ ಯಾವ ಕರಾರು ಪತ್ರ ಇಲ್ಲ, ರಶೀತಿ ಇಲ್ಲ ಎಷ್ಟು ಗೇಣಿ ಕೊಡುತ್ತಾನೆ ಎಂಬುದಕ್ಕೆ ದಾಖಲೆ ಇಲ್ಲ. ಪಹಣಿಯಲ್ಲಿ ಉಳುಮೆ ಮಾಡತಕ್ಕವನ ಹೆಸರು ಬರೆಯುವುದಿಲ್ಲ. ಅದನ್ನು ಯಾರೂ ಕೇಳುವವರೇ ಇಲ್ಲ. ಆದುದರಿಂದ ಮೊದಲು ಒಂದು ಪಕ್ಕಾ ಆಧಾರ ನಿರ್ಮಾಣ ಮಾಡಬೇಕಾಗಿದೆ. ಒಂದು ಲ್ಯಾಂಡ್ ಕಮೀಷನ್ ರಚನೆ ಮಾಡಿ ವಾಸ್ತವಾಂಶ ಏನಿದೆ ಎಂಬುದನ್ನು ತಿಳಿದುಕೊಂಡು ನಿಜವಾದ ಗೇಣಿದಾರನು ಯಾರು ಎನುವುದನ್ನು ತಿಳಿದುಕೊಳ್ಳಬೇಕಾಗಿದೆ. ಜೀತದ ಆಳಾಗಿ ದುಡಿಯತಕ್ಕಂಥವನಿಗೆ ಪರಿಹಾರ ದೊರೆಯಬೇಕು. ಇಲ್ಲದಿದ್ದರೆ ಇಂಥ ತಿದ್ದುಪಡಿ ಮಾಡುವುದರಲ್ಲಿ ಅರ್ಥವಿಲ್ಲ. ರಾಜಕೀಯ ಸಂತ್ರಸ್ತರಿಗೆ ಎರಡು ಮೂರು ಹತ್ತು ಎಕರೆ ಭೂಮಿ ಕೊಟ್ಟಿದ್ದೀರಿ. ಬರೀ ಬೇಡಿಕೆ ಬಂದವರಿಗೆ ಜಮೀನು ಕೊಟ್ಟಿದ್ದೀರಿ. ಉಳುಮೆ ಮಾಡಿ ದುಡಿಯತಕ್ಕಂಥ ರೈತನಿಗೆ ಜಮೀನು ಕೊಡಬೇಕು. ಉಳುಮೆ ಮಾಡತಕ್ಕಂಥ ರೈತನ ಹೆಸರನ್ನು ಖಾತೆಯಲ್ಲಿ ಹಾಕಲು ಪ್ರಯತ್ನ ಮಾಡಬೇಕಾಗಿದೆ. 1947ನೇ ಇಸವಿಯಿಂದ ಭೂಸುಧಾರಣೆ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಇದುವರೆಗೆ ಮಾಡಿಲ್ಲ. ಇಂಥ ತಿದ್ದುಪಡಿ ಕಾನೂನು ತರುವುದು ಅಂದರೆ ಅದು ಭೂಸುಧಾರಣೆಯಾಗಲಾರದು. ಇದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಈ ದಿವಸ ಯಾರೂ ಸರಿಯಾಗಿ ಗೇಣಿಯನ್ನು ಕೊಡುತ್ತಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಇಷ್ಟು ತಡವಾಗಿದ್ದರೂ ಚಿಂತೆಯಿಲ್ಲ ಈಗಲಾದರೂ ಇವರು ಒಂದು ಹೆಜ್ಜೆಯನ್ನು ಮುಂದಿಡದೆ ಹೋದರೆ, ಇಂಥ ಮಸೂದೆಗಳಿಂದೇನೂ ಪ್ರಯೋಜನ ಇಲ್ಲ. ಅದಕ್ಕಾಗಿ ನಾನು ಹೇಳುವುದೇನೆಂದರೆ ಇಂಥ ಒಂದು ಹೊಸ ಸುಧಾರಣೆಯನ್ನು ಜಾರಿಗೆ ತರುವಾಗ ಹಿಂದಿನಿಂದ ನಡೆದು ಬಂದಿರತಕ್ಕ ಈ ಗೇಣಿ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕೆಂದು ಹೇಳುತ್ತೇನೆ. ಅಷ್ಟೇ ಅಲ್ಲದೆ ಇಲ್ಲಿಯವರೆಗೂ ಗೇಣೀದಾರರು ಏನು ಒಂದು ಗೇಣಿ

(ಶ್ರೀ ಎಸ್. ಗೋಪಾಲಗೌಡ)

ಅಥವಾ ಪಾಲು ಅಥವಾ ಕೋರು ಎಂದು ಕೊಡುತ್ತಿದ್ದರೋ ಅದನ್ನು ಸಂಪೂರ್ಣವಾಗಿ ತೊಡೆದು ಹಾಕತಕ್ಕಂಥ ಒಂದು ತಿದ್ದುಪಡಿಯನ್ನು ತರಬೇಕೆಂದು ಹೇಳುತ್ತೇನೆ.

ಇನ್ನು ಸ್ವಾಮಿ, ಆಡಳಿತ ಪಕ್ಷದವರು ತಮ್ಮಲ್ಲಿ ಸಂಖ್ಯಾಬಲವಿದೆ ಎಂದು ಹೇಳಿ ನಾವೇನು ಮಾಡಿದರೂ ಅದು ನಡೆಯುತ್ತದೆ, ಆದ್ದರಿಂದ ತಮ್ಮ ಪಾರ್ಟಿಯಲ್ಲಿ ಏನು ತೀರ್ಮಾನವಾಗುತ್ತದೆಯೋ ಅದನ್ನೇ ಇಲ್ಲಿಯೂ ಜಾರಿಗೆ ತರಬೇಕೆಂದು ಹಟ ಹಿಡಿಯುವುದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಆದಾಗ್ಯೂ ನಾನು ಇಲ್ಲಿ ಒಂದು ಮಾತನ್ನು ಹೇಳಲೇ ಬೇಕಾಗಿದೆ. ಈಗತಾನೆ ಮಾನ್ಯ ಮಂತ್ರಿಗಳು ಈ ಅಧಿವೇಶನ ಮುಗಿಯುವುದರೊಳಗಾಗಿಯೇ ಈ ಭೂಸುಧಾರಣೆಯನ್ನು ಜಾರಿಗೆ ತರತಕ್ಕ ಬಗ್ಗೆ ಪ್ರಯತ್ನ ಮಾಡುವುದಾಗಿ ಈಗತಾನೆ ಹೇಳಿದ್ದಾರೆ. ಆದರೆ ಇಷ್ಟನ್ನಾದರೂ ಮಾಡುವುದಕ್ಕೆ ಅವರಿಗೆ ಒಂದು ಅವಕಾಶ ಸಿಕ್ಕಲಿ ಅವರಿಗೊಂದು ಧೈರ್ಯ ಬರಲಿ ಎಂಬುದಾಗಿ ನಾನು ಹಾರೈಸುತ್ತೇನೆ. ಆದರೆ ಸರ್ಕಾರದವರು ತಮ್ಮ ಒಂದು ಈ ಅಧಿವೇಶನದ ಗಂಡಾಂತರವನ್ನು ಮಾರ್ಚಿ ತಿಂಗಳಲ್ಲಿ ಕಳೆದುಕೊಂಡನಂತರ ಅವರು ನಮ್ಮ ಕೈಗೆ ಇನ್ನಾರು ತಿಂಗಳುಕಾಲ ಸಿಕ್ಕುವುದಿಲ್ಲ. ಅವರಿಗಾಗಿ ನಾವು ದಾರಿಯಲ್ಲಿ ಕಾದು ಕುಳಿತುಕೊಳ್ಳ ಬೇಕಾಗುವುದು. ಅಂದರೆ ಅವರಿಗೆ ನಮ್ಮ ನಿವೇದನೆಗಳನ್ನು ಹೇಳಿಕೊಳ್ಳುವುದಕ್ಕೆ ಈ ವಿಚಾರದಲ್ಲಿ ಹೆಚ್ಚಿಗೆ ಮಾತನಾಡಲು ನಮಗೆ ಅಯವ್ಯಯದ ಅಧಿವೇಶನದಲ್ಲಿ ಕಾಲವಕಾಶ ಸಿಕ್ಕುವುದಿಲ್ಲ. ಆ ಒಂದು ನೆಪದಲ್ಲಿ ಇದನ್ನು ಸರ್ಕಾರದವರು ಜಾರಿಗೆ ತರದಿರತಕ್ಕ ಸಂಶಯವೂ ಕೂಡ ಇದೆ, ಅದಕ್ಕಾಗಿ ನಾವು ಅವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದು ಇಷ್ಟೆ: ಹಿಂದೆ ಶ್ರೀ ಕಡಿದಾಳರಿದ್ದಾಗಲೂ ಅವರು ಇದೇ ವಿಚಾರದಲ್ಲಿ ಮಾತನಾಡುತ್ತ—ಇದ್ದಾಗ ನಾವು ಈ ಕಾನೂನನ್ನು ಮದ್ರಾಸಿನ ಕೊಳ್ಳೇಗಾಲ, ದಕ್ಷಿಣ ಕನ್ನಡ ಜಿಲ್ಲೆ ಇಷ್ಟನ್ನು ಬಿಟ್ಟು ರಾಜ್ಯದ ಇನ್ನುಳಿದ ಪ್ರದೇಶಗಳಿಗೆ ಜಾರಿಗೆ ಕೊಡಬೇಕೆಂದು ಒತ್ತಾಯ ಮಾಡಿದ್ದೆವು. ಆದರೆ ಆಗಿನಿಂದಲೂ ಸರ್ಕಾರದವರು ಒಂದು ಕುಂಟು ನೆಪವನ್ನು ಹೇಳಿ ಕೊಂಡು ಇದನ್ನು ಇಲ್ಲಿಯವರೆಗೂ ತಳ್ಳಿಕೊಂಡೇ ಬಂದಿದ್ದಾರೆ. ಸರ್ಕಾರದವರಿಗೆ ರೈತನ ವಿಚಾರ ದಲ್ಲಿ ಅಂಥ ಒಂದು ಮಮತೆ ಪ್ರಾಮಾಣಿಕವಾಗಿಯೂ ಇರುವುದಾದರೆ ಈ ಗೇಣಿದಾರರಿಗೆ ಈಗಲಾದರೂ ಸರ್ಕಾರದವರು ಸಾಕಷ್ಟು ಉಳುವುದಕ್ಕೆ ಜಮೀನನ್ನೂ ಮತ್ತು ಆತನಿಗೆ ಬೇಕಾಗತಕ್ಕ ಇತರೇ ಬೀಜ ಗೊಬ್ಬರ ನೀರಾವರಿ ಸೌಕರ್ಯಗಳನ್ನೂ ಒದಗಿಸಿಕೊಟ್ಟು ಆತನನ್ನೂ ಒಬ್ಬ ಮನುಷ್ಯನನ್ನಾಗಿ ಮಾಡಬೇಕೆಂಬ ಉದ್ದೇಶವಿದ್ದರೆ, ಇದನ್ನು ಇಲ್ಲಿಯವರೆಗೂ ತಡಮಾಡಿದ್ದರೂ ಚಿಂತೆಯಿಲ್ಲ, ಇವರಿಗೆ ಕೊಡುವುದಕ್ಕೆ ಇನ್ನೂ ಸಾಕಷ್ಟು ಜಮೀನಿದೆ ಯಾರೂ ಹಿಂದೆ ಹೇಳುತ್ತಿದ್ದ ಹಾಗೆ ಅದನ್ನು ಸುತ್ತಿ ಕೊಂಡು ಹೋಗಿಲ್ಲ, ಈ ವಿಚಾರದಲ್ಲಿ ಈ ಪಕ್ಷ ಆಡಳಿತದಲ್ಲಿರುವಾಗಲೇ ಜಮೀನನ್ನು ಪುನರ್ವಿತರಣೆ ಮಾಡಿ ಉಳತಕ್ಕ ರೈತನಿಗೆ ಸಾಕಷ್ಟು ಜಮೀನನ್ನು ಕೊಟ್ಟು ಇದನ್ನು ಮೂಲಬದಲಾವಣೆ ಮಾಡತಕ್ಕ ಬಗ್ಗೆ ಸರ್ಕಾರ ಮನಸ್ಸು ಮಾಡಬೇಕೆಂದು ಹೇಳುತ್ತೇನೆ. ಇಲ್ಲವಾದರೆ ಮುಂದೆ ಮುಂದೆ ಪರಿಸ್ಥಿತಿ ಬಹಳ ಹದಗೆಡತಕ್ಕ ಸನ್ನಿವೇಶಗಳುಂಟು. ಈಗಾಗಲೇ ಶ್ರೀ ಆರ್. ಎಂ. ಪಾಟೀಲರ ಶಿಬ್ಬಂದಿಯ ಪ್ರದರ್ಶನ ಯಾವ ಕಣದಲ್ಲಿ ನೋಡಲಿ ಇದ್ದೇ ಇದೆ. ಎಲ್ಲ ಒಕ್ಕುವುದಿದ್ದರೆ ಅಲ್ಲಿ ಪೋಲೀಸಿನವರು ಅಲ್ಲಿ ಒಂದು ಸ್ಟೇ ಆರ್ಡರು ಎಲ್ಲಿ ಕೊಯ್ಯುವುದಿದೆ ಅಲ್ಲಿ ಪೋಲೀಸಿನವರು ಅಲ್ಲಿ ಒಂದು ಸ್ಟೇ ಆರ್ಡರು. ಆದರೆ ದೇಶ ಇಷ್ಟೊಂದು ಪೋಲೀಸು ಆಡಳಿತವಿರತಕ್ಕ ರಾಜ್ಯವಾಗಬಾರದು. ಇಷ್ಟೇ ಅಲ್ಲ, ಜನರು ಇನ್ನೂ ಬೇರೆ ರೀತಿಯಲ್ಲಿ ಪ್ರಕೋಪಕ್ಕೀಳಬಹುದು. ಎಲ್ಲಿ ನೋಡಲೀ ಜನರಲ್ಲಿ ನಿರಾಶಾಭಾವನೆ ಉಂಟಾಗಿದೆ. ಈ ದಿವಸ ಹಳ್ಳಿ ಹಳ್ಳಿಯಲ್ಲೂ ಗೇಣೀದಾರರಿಗೂ ಜಮೀನುದಾರರಿಗೂ ತೀವ್ರವಾದ ದುರ್ಘಟನೆಗಳಾಗುತ್ತಿವೆ, ಇದಕ್ಕೆ ಹೆಚ್ಚಿನ ಅವಕಾಶ ಕೊಡಬಾರದು. ಈ ದೃಷ್ಟಿಯಿಂದಲಾದರೂ ಸರ್ಕಾರದವರು ಇದನ್ನು ಅತಿಜಾಗ್ರತೆಯಾಗಿ ಜಾರಿಗೆ ತರಬೇಕೆಂದು ಹೇಳುತ್ತೇನೆ ಸರ್ಕಾರದವರು ತರತಕ್ಕ ಕಾನೂನು ರೈತನ ಉದ್ಧಾರದ ಕಾನೂನಾಗಿರಬೇಕು. ದೇಶದಲ್ಲಿರತಕ್ಕ ಭೂರಹಿತ ವರ್ಗವನ್ನು ನಿರ್ಮೂಲಮಾಡಬೇಕು. ಇದನ್ನು ಅತಿ ತ್ವರಿತವಾಗಿ ಜಾರಿಗೆ ತರಬೇಕೆಂದು ಮತ್ತೊಮ್ಮೆ ಕೇಳಿ ಕೊಂಡು ರೈತನಿಗೆ ರಕ್ಷಣೆ ಕೊಡಶಕ್ಕಂಥ ಈ ತಿದ್ದುಪಡಿ ಮಸೂದೆಯನ್ನು ನಾನು ತೀವ್ರವಾಗಿ ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೆ ಈ ತಿದ್ದುಪಡಿ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಸರ್ಕಾರದವರು ಮೇಲಿಂದ ಮೇಲೆ ಇಂಥ ತಿದ್ದುಪಡಿ ಕಾನೂನು ಗಳನ್ನು ತರುವುದರಿಂದ ಗೇಣಿದಾರನಿಗೂ ಜಮೀನ್ದಾರನಿಗೂ ತುಂಬಾ ಜಗಳಗಳಾಗುತ್ತಿವೆ ಮುಂಬೈರಾಜ್ಯದಲ್ಲಿದ್ದ ಕರ್ನಾಟಕ ಪ್ರದೇಶದಲ್ಲಿ ಹಿಂದೆ ಅಲ್ಲಿ ಮಾಡಿದ್ದ ತಿದ್ದುಪಡಿ ಕಾನೂನಿನ, ದೆಶೆಯಿಂದ ಸ್ವಲ್ಪ ಅನುಕೂಲವಿತ್ತು. ಆದರೆ ಈಗ ಅದೂ ಸಹ ಇಲ್ಲಿಗೆ ಬಂದ ಮೇಲೆ ನಿಂತು ಹೋಗಿದೆ ಅಲ್ಲಿಯೂ ತುಂಬಾ ತೊಂದರೆಗಳಾಗುತ್ತಿವೆ. ಮುಂಬೈ ಪ್ರದೇಶದಲ್ಲಿ ಹಿಂದೆ ಇದ್ದ

ಕಾನೂನಿನಲ್ಲಿ ಏನೇನು ಲೋಪದೋಷಗಳಿದ್ದವು ಎಂಬುದನ್ನು ಆ ಸರ್ಕಾರದವರು ಬೇಗ ಕಂಡುಕೊಂಡು ಅವುಗಳಿಗೊಂದು ಪರಿಹಾರವನ್ನು ಕಲ್ಪಿಸಿದ್ದರು. ಆದರೆ ಇಲ್ಲಿ ಮೈಸೂರಿನಲ್ಲಿ ಆ ಲೋಪದೋಷ ಗಳನ್ನೆಲ್ಲಾ ಹಾಗೇ ಮುಂದುವರಿಸಿಕೊಂಡು ಬಂದಿದ್ದಾರೆ. ಆದರೆ ಇಲ್ಲಿ ಕೊಟ್ಟಿರತಕ್ಕ ಮೈಮೊ ರಾಂಡಂನಲ್ಲಿ 1965 ನೇ ಮಾರ್ಚಿ 31 ನೇ ತಾರೀಖಿನೊಳಗಾಗಿ ಭೂಸುಧಾರಣೆಯ ಕಾನೂನನ್ನು ಜಾರಿಗೆ ತರತಕ್ಕ ಭರವಸೆ ಇಲ್ಲವೆಂದು ಹೇಳಿದ್ದಾರೆ. ಆದರೆ ಕಾಲಕಳೆದಷ್ಟೂ ಜಮೀನನ್ನು ಗೇಣಿ ದಾರನಿಗೆ ಬಿಡಿಸಿಕೊಡುವುದಕ್ಕಾಗದೆ ಇರತಕ್ಕಂಥ ಪರಿಸ್ಥಿತಿಯೂ ಬೇರೆ ಇದೆ. ಹೀಗಾಗಿ ರೈತಾಪಿ ಕಸುಬನ್ನು ಅವಲಂಬಿಸಿರತಕ್ಕ ವ್ಯಕ್ತಿಗೆ ಇಂದು ಬಹಳ ಅನ್ಯಾಯವಾಗತಕ್ಕ ಪರಿಸ್ಥಿತಿ ಉಂಟಾಗಿದೆ. ಗೇಣೀದಾರರಿಗೆ ಜಮೀನ್‌ದಾರರು 3-4 ರೀತಿಯಲ್ಲಿ ತೊಂದರೆ ಕೊಡುತ್ತಾ ಬಂದಿದ್ದಾರೆ. ಇದನ್ನೆಲ್ಲಾ ಸರ್ಕಾರದವರು ಮುಂದಾಲೋಚನೆ ಮಾಡಿ ಇದನ್ನು ತಡಗಟ್ಟುತಕ್ಕ ಪ್ರಯತ್ನ ಮಾಡ ಬೇಕಾಗಿತ್ತು. ಅದನ್ನು ಇಲ್ಲಿಯವರೆಗೂ ಇವರು ಮಾಡಿಲ್ಲ. ಮಾಡಬೇಕಾದ್ದನ್ನು ಮಾಡದೇ ಮೇಲಿಂದಮೇಲೆ ಇಂಥ ತಿದ್ದುಪಡಿಗಳನ್ನು ತರತಕ್ಕದ್ದು ಅವರಿಗೆ ಯೋಗ್ಯವಲ್ಲ. ಇದರಿಂದ ಮುಂದೆ ರೈತಾಪಿವರ್ಗದಲ್ಲಿರತಕ್ಕ ಜನರಿಗೆ ತುಂಬಾ ತೊಂದರೆಯಾಗತಕ್ಕ ಪ್ರಮೇಯಗಳಿವೆ. ಅವಕ್ಕೆ ಅವಕಾಶ ಕೊಡಬಾರದು ಆ ದೃಷ್ಟಿಯಿಂದ ನಾನು ಈ ತಿದ್ದುಪಡಿ ಮಸೂದೆಯನ್ನು ವಿರೋಧಿಸ ಬೇಕಾಗಿದೆ. ಮುಂದಕ್ಕಾದರೂ ಸರ್ಕಾರದವರು ಮೂಲ ಭೂಸುಧಾರಣೆಯ ಶಾಸನವನ್ನು ಶ್ರೀ ಗೋಪಾಲಗೌಡರು ಹೇಳಿದ ಹಾಗೆ ಆದಷ್ಟುಬೇಗ ಜಾರಿಗೆ ತಾರದಿದ್ದರೆ ಅದರಿಂದ ಬಹಳ ಅನರ್ಥಗಳಾಗುತ್ತವೆಂದು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟು ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಸಭೆ ಈಗ ಎದ್ದು ಅರ್ಧಗಂಟೆಯನಂತರ ಮತ್ತೆ ಸೇರುತ್ತದೆ.

The House adjourned for recess at Three of the Clock and re-assembled at Thirty-five Minutes past Three of the Clock.

[MR. DEPUTY SPEAKER in the Chair]

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ಕಂದಾಯ ಸಚಿವರು ಈ ಟೆನೆನ್ಸಿ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಲು ಎರಡು ಗಂಟೆ ಕಾಲವೇಕೆ ಬೇಕು ? ಬಹಳ ಸಣ್ಣ ತಿದ್ದುಪಡಿ ಮಾತ ಮಾಡಲಾಗಿದೆ ಎಂದು ಅವರ ಧಾಟಿಯಲ್ಲಿ ಹೇಳಿದರು. ಅವರನ್ನು ನಾನು ಕೇಳುತ್ತೇನೆ ಇದೇರೀತಿ ತಾವು ತಿದ್ದುಪಡಿಗಳನ್ನು ಮಾಡುತ್ತಾ ಹೋದರೆ ಅಕಸ್ಮಾತ್ ಅವೇನಾದರೂ ಲಾ ಕೋರ್ಟಿನ ಮುಂದೆ ಹೋದರೆ ಏನಾಗುತ್ತದೆ ಗೊತ್ತೆ ಎಂದು. ಇದೊಂದು ಸಲ ಹೈಕೋರ್ಟಿಗೆ ಹೋಗಿ ಕೋರ್ಟಿನವರು ಅಬ್‌ಸರ್ವೇಷನ್ ಮಾಡಿದ್ದಾರೆ. ಏನೆಂದರೆ ಈ ರೀತಿ ತಿದ್ದುಪಡಿಗಳನ್ನು ಅನೇಕ ಸಾರಿ ತರುವುದು ಯಾವುದೇ ಸುವ್ಯವಸ್ಥಿತವಾದ ಯಾವುದೇ ಒಂದು ನಾಗರಿಕ ಸರಕಾರಕ್ಕೆ ಮರ್ಯಾದೆ ತರುವುದಲ್ಲ ಎಂದು. ಇದು ನಾಲ್ಕನೆಯ ತಿದ್ದುಪಡಿ. ಭೂಸುಧಾರಣೆ ವಿಚಾರದಲ್ಲಿ ನೀವು ಹೇಳಿದ್ದನ್ನೇ ಹೇಳುತ್ತಿದ್ದೀರಿ, ಮಾಡಿದ್ದನ್ನೇ ಮಾಡುತ್ತಿದ್ದೀರಿ ಎಂದು ಹಿಂದೆಯೇ ಬಿನ್ನವಿಸಿ ಕೊಂಡೆ. ಜತ್ತಿ ಸಮಿತಿಯವರು ರಾಜ್ಯಾದ್ಯಂತ ಸಂಚಾರಮಾಡಿ ಒಂದು ವರದಿಯನ್ನು ಕೊಟ್ಟಮೇಲೆ ಅದು ಚರ್ಚೆಯಾದಮೇಲೆ ಅದಕ್ಕೆ ಸಂಬಂಧಪಟ್ಟ ಬಿಲ್ಲನ್ನು ತರಬೇಕಾದರೆ ರಾಜ್ಯಾಂಗದ 17 ನೆಯ ಆರ್ಟಿಕಲ್ ತಿದ್ದುಪಡಿಯಾಗಬೇಕು, ಅದಾದ ಹೊರತು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಕಂದಾಯ ಸಚಿವರು ಈ ದಿವಸ ಹೇಳುವುದನ್ನು ನೋಡಿದರೆ ವ್ಯವಸಾಯಗಾರರನ್ನು ಅವರು ಅಲಕ್ಷಮಾಡಿ ಅಕ್ಷಮ್ಯ ಅಪರಾಧ ಮಾಡಿದ್ದಾರೆ ಎಂದು ವಿಧಿಯಿಲ್ಲದೆ ಹೇಳಬೇಕಾಗಿದೆ. ಸ್ವಾಮಿ, ಭೂಸುಧಾರಣೆ ಜಾರಿಗೆ ತರುವಷ್ಟರಲ್ಲಿ ಉಳಿಯುವ ಭೂಮಿಯೆಷ್ಟು ಎಂದು ನೋಡಿದರೆ ವ್ಯಸನ ವಾಗುತ್ತದೆ. 1963-64 ನೆಯ ಸಾಲಿನ ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ 1964ನೇ ಜುಲೈ ಒಂದರಂದು ಭೂಸುಧಾರಣೆಯನ್ನು ಜಾರಿಗೆ ತರುವುದಾಗಿ ಹೇಳಿದ್ದರು, ಅದು ಪ್ರೊಸೀ ಡಿಂಗ್ಸಿನಲ್ಲಿದೆ. ಈ ದಿವಸ 1965 ನೇ ಇಸವಿ ಜುಲೈ ಒಂದರಂದು ಜಾರಿಗೆ ತರುವುದಾಗಿಯೂ ರಾಜ್ಯಾಂಗ ತಿದ್ದುಪಡಿಯಾದಮೇಲೆ ತಿದ್ದುಪಡಿಮಾಡಿ ತರುವುದಾಗಿಯೂ ಹೇಳುತ್ತಿದ್ದಾರೆ. ನಾನಾದರೂ ಹೇಳುವುದು ಈ ದಿವಸ ರೈತರ ವಿಷಯದಲ್ಲಿ ಅಭಿಮಾನವಿಲ್ಲ, ಡೆನ್ಮಾರ್ಕಿಗೆ ಹೋಗಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಹಸುಗಳನ್ನು ತರುತ್ತೇವೆ ಎಂದು ಮುಂತಾಗಿ ಅನೇಕ ವಿಷಯಗಳನ್ನು ಹೇಳುತ್ತಿದ್ದಾರೆ. ಆದರೆ ಭೂಸುಧಾರಣೆ ಮಾಡುವುದಕ್ಕೆ, ಭೂಮಿಯನ್ನು ಬಡವರಿಗೆ ಹಂಚುವುದಕ್ಕೆ ರೈತರಿಗೆ ರಕ್ಷಣೆ ಕೊಡುವುದಕ್ಕೆ ಸ್ವಲ್ಪ ಹಿಂದೇಟು ಹಾಕುತ್ತಿದ್ದಾರೆ.

ಈ ಭೂಸುಧಾರಣೆಯನ್ನು ಏಕೆ ಜಾರಿಗೆ ತರುವುದಿಲ್ಲವೆಂದರೆ, ಯಾರೋ ಕೆಲವರಿಗೆ 800 ಎಕರೆ, 900 ಎಕರೆ ಜಮೀನು ಇರುವವರಿಗೆ ಅನುಕೂಲ ಮಾಡಬೇಕು ಎನ್ನುವ ಉದ್ದೇಶದಿಂದ ತರುತ್ತಿಲ್ಲ ಎನ್ನುವ ವಿಷಯ ಒಂದು ಕಾಲದಲ್ಲಿ ನನ್ನ ಕಿವಿಗೆ ಬಿದ್ದುದನ್ನು ಈ ಸಭೆಯಲ್ಲಿ ತಿಳಿಸಿದ್ದಾಗ ಆ ರೀತಿ ಏನೂ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತರದೆ ಈ ತರಹ ತಿದ್ದುಪಡಿಗಳನ್ನು ಗೇಣಿ ಶಾಸನಕ್ಕೆ ಪದೇ ಪದೇ ತೆಗೆದುಕೊಂಡು ಬರುತ್ತಿದ್ದಾರೆ. ಇವತ್ತು ನಮ್ಮಲ್ಲಿ ಸಾಕಷ್ಟು ಆಹಾರವಿಲ್ಲ, ಆಹಾರವನ್ನು ಬೆಳೆಯಬೇಕು ಎಂದು ಹೇಳುವಾಗ ಕೆರೆ ಅಂಗಳಗಳು, ನಾಲೆಗಳ ದಂಡೆಗಳು, ಅಮೃತಮಹಲ್ ಕಾವಲುಗಳು, ಈಚಲು ವನಗಳು ಇವನ್ನೆಲ್ಲ ಜನರಿಗೆ ಕೊಟ್ಟಿರಿ. ಆದರೂ ಕೂಡ ಆಹಾರವನ್ನು ಹೆಚ್ಚು ಬೆಳೆಯುವುದಕ್ಕಾಗಿಲ್ಲ. ನಮ್ಮಲ್ಲಿರುವ ಆಹಾರ ಆರು ತಿಂಗಳಿಗೆ ಆಗುತ್ತದೆ, ನಾಲ್ಕೈದು ಲಕ್ಷ ಟನ್ ಆಹಾರ ಧಾನ್ಯಗಳನ್ನು ಹೊರಗಿನಿಂದ ತರಿಸಬೇಕು ಎಂದು ಹೇಳುತ್ತೀರಿ. ಹಾಗಾದರೆ ಸರ್ಕಾದಿಂದ ಕೊಟ್ಟ ಭೂಮಿ ಯಾರಿಗೆ ಸಿಕ್ಕಿತು ? ಆ ಭೂಮಿಯನ್ನೆಲ್ಲ ಶ್ರೀಮಂತರಿಗೆ ಕೊಟ್ಟರು. ಪಟ್ಟಣದಲ್ಲಿರುವವರಿಗೆ ಕೊಟ್ಟರು. ಇದರಿಂದ ಹೆಚ್ಚು ಆಹಾರ ಬೆಳೆಯುವದಕ್ಕೆ ಸಾಧ್ಯವಾಗಿಲ್ಲ.

ಮಾನ್ಯ ಕಡಿದಾಳ್ ಮಂಜಪ್ಪನವರು ಕಂದಾಯ ಸಚಿವರಾಗಿದ್ದಾಗ ಭೂಮಿಯ ದಾಹ ಹೆಚ್ಚಾಗಿದೆ, ಉಳುವವನಿಗೆ ಭೂಮಿಯನ್ನು ಕೊಡಬೇಕು, ಬಡವನಿಗೆ ರಕ್ಷಣೆ ಸಿಕ್ಕಬೇಕು, ವ್ಯವಸಾಯಗಾರನಿಗೆ ರಕ್ಷಣೆ ಸಿಕ್ಕಬೇಕು, ನನ್ನ ಜೀವನದ ಕೊನೆಯ ಉಸಿರು ಇರುವ ತನಕ ಇದಕ್ಕಾಗಿ ದುಡಿಯುತ್ತೇನೆಂದು ತಮ್ಮದೇ ಆದ ಶೈಲಿಯಲ್ಲಿ ಈ ಸಭೆಗೆ ವಾಗ್ದಾನ ಮಾಡಿದ್ದಾರೆ. ಈಗ ಅವರು ಮಾನ್ಯ ಸದಸ್ಯರಾಗಿ ಇಲ್ಲಿ ಕುಳಿತಿದ್ದಾರೆ. ಸರ್ಕಾರದ ಪಕ್ಷದಲ್ಲಿ ಅವರು ಇದ್ದಾರೆ. ಈ ಸರ್ಕಾರಕ್ಕೆ ಭೂಸುಧಾರಣೆಯನ್ನು ಜಾರಿಗೆ ಕೊಡುವುದಕ್ಕೆ ಶಕ್ತಿ ಇಲ್ಲ; ಆ ಪಕ್ಷಕ್ಕೆ ಶಕ್ತಿ ಇಲ್ಲ. ಮಾನ್ಯ ಸದಸ್ಯರು ಸರ್ಕಾರದ ಪಕ್ಷದಲ್ಲಿದ್ದುಕೊಂಡೂ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕಾಗಲಿಲ್ಲವಲ್ಲ ಎಂದು ಆ ಮಾನ್ಯ ಸದಸ್ಯರನ್ನು ಅಧ್ಯಕ್ಷರ ಮೂಲಕ ಸಮ್ರತೆಯಿಂದ ಕೇಳಿಕೊಳ್ಳುತ್ತೇನೆ. ಇನ್ನಾದರೂ ಏನಾದರೂ ಮಾಡುವುದಕ್ಕೆ ಶಕ್ತಿ ಇದ್ದರೆ, ನಿಮ್ಮ ಪಕ್ಷದ ಸರ್ಕಾರಕ್ಕೆ ಬುದ್ಧಿವಾದ ಹೇಳುವುದಕ್ಕೆ ಶಕ್ತಿ ಇದ್ದರೆ, ಜನತೆಯ ಕಲ್ಯಾಣಕ್ಕಾಗಿ ಭೂಸುಧಾರಣೆಯನ್ನು ಜಾರಿಗೆ ತರಬೇಕು ಎಂದು ಇದ್ದರೆ, ಮಾನ್ಯ ಸದಸ್ಯರು ಸರ್ಕಾರದಿಂದ ಈ ಬಗ್ಗೆ ಒಂದು ಆಶ್ವಾಸನೆಯನ್ನು ಕೊಡಿಸಬೇಕು ಎಂದು ಮಾನ್ಯ ಕಡಿದಾಳ್ ಮಂಜಪ್ಪನವರನ್ನು ಕೇಳಿಕೊಳ್ಳುತ್ತೇನೆ ಮತ್ತು ಅಂಥ ಒಂದು ಆಶ್ವಾಸನೆಯನ್ನು ಕೊಡಬೇಕೆಂದು ಮಾನ್ಯ ರೆವೆನ್ಯೂ ಮಂತ್ರಿಯವರನ್ನೂ ಕೇಳಿಕೊಳ್ಳುತ್ತೇನೆ.

ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ ರೀಸನ್ಸ್‌ನಲ್ಲಿ ಹೇಳಿರುವುದನ್ನು ನೋಡಿದೆ. ಹಸಿದವನಿಗೆ ಒಳ್ಳೆಯ ಮಾತನಾಡಿದರೆ ಅವನಿಗೆ ಹೊಟ್ಟೆ ತುಂಬಿದಂತಾಯಿತೇ ? ಬಾಯಾರಿದವನಿಗೆ ಒಳ್ಳೆಯ ಮಾತನಾಡುವುದರಿಂದ ಅವನ ಬಾಯಾರಿಕೆ ನೀಗಿದಂತೆ ಆಯಿತೆ ? ಬಡವನ ಕಷ್ಟವನ್ನು ನೋಡಿ ಮರುಗಿದರೆ ಅವನಕಷ್ಟ ಪರಿಹಾರ ಆಗುವುದೇ ? ಎಂದಿಗೂ ಇಲ್ಲ. ಈಗ ಸರ್ಕಾರದವರು ತರತಕ್ಕ ತಿದ್ದುಪಡಿಗಳನ್ನು ನೋಡಿದರೆ ಅದರಿಂದ ಶ್ರೀಮಂತರಿಗೆ ಅನುಕೂಲವಾಗುತ್ತದೆ. ಅವರು ತರತಕ್ಕ ತಿದ್ದುಪಡಿಗಳೆಲ್ಲ ದೊಡ್ಡ ದೊಡ್ಡ ಜಮೀನ್ದಾರನಿಗೆ ಅನುಕೂಲವಾಗುವಂತೆ ಇವೆ. ಅದರಿಂದ ಬಡವನಿಗೆ ಏನೂ ಅನುಕೂಲವಾಗುವುದಿಲ್ಲ ಎಂದು ನನ್ನ ಅಭಿಪ್ರಾಯ. ಗರ್ಭದಲ್ಲಿರುವ ಕೂಸಿನಿಂದ ಹಿಡಿದು ಮದುವೆಯಾಗಿ ಗಂಡನ ಮನೆಗೆ ಹೋಗಿರುವವರಿಗೆ ಮಕ್ಕಳು ಮೊಮ್ಮಕ್ಕಳು ಇವರಿಗೆಲ್ಲ ಜಮೀನಿನಲ್ಲಿ ಭಾಗಮಾಡಿ ಛಿದ್ರ ಛಿದ್ರ ಮಾಡಿದ್ದಾರೆ. ಇವರಿಂದ ರಾಜ್ಯದಲ್ಲಿ ಉಳುವವನಿಗೆ ಹಂಚುವುದಕ್ಕೆ ಭೂಮಿ ಸಿಕ್ಕದ ಹಾಗೆ ಆಗಿದೆ.

ರಷ್ಯ, ಅಮೆರಿಕ, ಮತ್ತು ಇತರ ದೇಶಗಳಿಗೆ ಹೋಗಿ ಆಹಾರದ ಕೊರತೆಯನ್ನು ನೀಗುವುದಕ್ಕೆ ಅಲ್ಲಿಂದ ಆಹಾರವನ್ನು ತರುವ ಪ್ರಯತ್ನ ಮಾಡಬೇಡಿ. ರಾಜ್ಯದಲ್ಲಿ ಭೂಸುಧಾರಣೆಯನ್ನು ತರುವುದಿಲ್ಲ ಯಾರು ಎಷ್ಟು ಜಮೀನುಬೇಕಾದರೂ ಇಟ್ಟುಕೊಳ್ಳಿ, ಆದರೆ ಮೆಕಾನೈಜ ಮಾಡಿ ಹೆಚ್ಚಿಗೆ ಆಹಾರವನ್ನು ಬೆಳೆಯಿರಿ ಎಂದು ಹೇಳಿ, ಇಲ್ಲದೆ ಇದ್ದರೆ ಭೂಮಿಯನ್ನು ಯಾವನು ಉಳುತ್ತಾನೆಯೋ ಅವನಿಗೆ ಭೂಮಿಯನ್ನು ಕೊಡಿ. 17 ವರ್ಷಗಳ ಕಾಲ ಜನರಿಗೆ ಇಲ್ಲವೆ ಇರತಕ್ಕ ಆಶ್ವಾಸನೆಯನ್ನು ಕೊಟ್ಟು, ತಮ್ಮ ಅಧಿಕಾರ, ಅಧಿಕಾರಷಾಹಿ ರೂಢಮೂಲವಾಗಿ ಬೇರೂರಬೇಕು ಎಂದು ಇರುವುದಾದರೆ ಇದು ನಿಜವಾಗಿಯೂ ಕೂಡ ಸರ್ಕಾರವನ್ನು ನಡೆಸತಕ್ಕವರಿಗಾಗಲೀ

ಆ ಪಕ್ಷದವರಿಗಾಗಲೀ ಕೀರ್ತಿಯನ್ನು ತರತಕ್ಕದ್ದಲ್ಲ ಎಂದು ಹೇಳುತ್ತೇನೆ. ಈ ರೀತಿ ಮಾಡಿದರೆ ಬಡವರ, ಭೂಹೀನರ ಶಾಪ ತಮಗೆ ತಟ್ಟುತ್ತದೆ ಎಂದು ಹೇಳುತ್ತಿದ್ದೇನೆ.

ಸ್ವಾಮಿ, ನನ್ನ ತಾಲ್ಲೂಕಾದ ಸಿರಾದಲ್ಲಿ 23,000 ಎಕರೆ ಜಮೀನನ್ನು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ. ಈ ರಾಜ್ಯದಲ್ಲಿ ಎಲ್ಲಿ ಹೋದರೂ ಕೂಡ ಈ ರೀತಿಯ ಬಗರ್ ಹುಕುಂ ಸಾಗುವಳಿ ನಡೆಯುತ್ತಿದೆ. ಲಕ್ಷಾಂತರ ಎಕರೆ ಭೂಮಿಯನ್ನು ರೈತನಿಗೆ ಕೊಡಬೇಕೆಂದು ಭೂಸುಧಾರಣೆ ಜಾರಿಗೆ ತರಬೇಕೆಂದು ಏನು ಮಾಡಿದಿರೋ ಆ ಭೂಮಿ ಇವತ್ತು ಬಗರ್ ಹುಕುಂ ಸಾಗುವಳಿಯಲ್ಲಿದೆ. ಹೀಗಿರಬೇಕಾದರೆ ಏನು ಕಾನೂನು ಮಾಡುತ್ತೀರಿ, ಭೂಸುಧಾರಣೆಯನ್ನು ಹೇಗೆ ಜಾರಿಗೆ ತರುತ್ತೀರಿ ಎಂದು ಕೇಳುತ್ತೇನೆ. ಭೂಮಿ ಯಾವನ ಸ್ವಾಧೀನದಲ್ಲಿದೆಯೋ, ಯಾವನು ಉಳುಮೆ ಮಾಡುತ್ತಾನೆಯೋ ಅವನಿಗೇ ಜಮೀನನ್ನು ಕೊಡಬೇಕೆಂದು ಹೇಳುತ್ತಾರೆ. ಐದು ವರ್ಷಕಾಲ ಯಾರು ಬಗರ್ ಹುಕುಂ ಸಾಗುವಳಿ ಮಾಡಿರುತ್ತಾರೆಯೋ, ಯಾರು ತಕರಾರು ತಃಖ್ತೆಯನ್ನು ಕೊಟ್ಟಿರುತ್ತಾರೆಯೋ, ಯಾರು ಜುಲ್ಮಾನೆಯನ್ನು ಕೊಟ್ಟಿರುತ್ತಾರೆಯೋ ಆ ಭೂಮಿಯನ್ನು ಅವರಿಗೇ ಕೊಡಬೇಕೆಂದು ಒಂದು ಆಜ್ಞೆಯನ್ನು ಹಿಂದೆ ಕಡಿದಾಳ್ ಮಂಜಪ್ಪನವರು ಮತ್ತು ಎಂ. ಪಿ. ಪಾಟೀಲರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಮಾಡಿದರು. 10ವರ್ಷ, 15ವರ್ಷ, 20ವರ್ಷ ಕಾಲ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಫಾಯಿದೆ ಹೊಂದುತ್ತಿದ್ದಾರೆ. ಶ್ರೀಮಂತರು, ಪುಂಡರು, ಗೂಂಡಾಗಳು ಇಂಥವರ ಕೈಯಲ್ಲಿ ಜಮೀನು ಹೋಗುತ್ತಿದೆ. ಸಿರಾ ತಾಲ್ಲೂಕಿನಲ್ಲಿ ಪುಂಡರು ಮತ್ತು ಪೋಕರಿಗಳ ಕೈಯಲ್ಲಿ 14ಸಾವಿರ ಎಕರೆ ಭೂಮಿ ಇದೆ. ಅವರೆಲ್ಲ ಪಟ್ಟಣದಲ್ಲಿದ್ದುಕೊಂಡು ಬೇರೆ ಬೇರೆ ಜನಗಳ ಕೈಯಲ್ಲಿ ಸಾಗುವಳಿ ಮಾಡಿಸಿ ಅದರಿಂದ ಲಾಭ ಪಡೆಯುತ್ತಿದ್ದಾರೆ.

ಕಾಡನ್ನು ಕತ್ತರಿಸಿ ಸುಮಾರು 700 ಎಕರೆ ಜಮೀನನ್ನು ಆಂಧ್ರ ಪ್ರಾಂತದಿಂದ ಬಂದ ಜನ ಸಾಗುವಳಿ ಮಾಡುತ್ತಿದ್ದಾರೆ. ಅದೇ ನಮ್ಮ ಮನೆಯ ಪಕ್ಕದಲ್ಲಿರುವ ಜನರಿಗೆ ಒಂದು ಎಕರೆ ಭೂಮಿಯೂ ಇಲ್ಲ. ಅವರನ್ನು ಎವಿಕ್ಟ್ ಮಾಡಬೇಕೆಂದು ಒಬ್ಬ ಮಂತ್ರಿಯವರು ಆರ್ಡರ್ ಮಾಡಿದರೆ ಇನ್ನೊಬ್ಬರು ಅದಕ್ಕೆ ಸ್ಟೇ ಆರ್ಡರ್ ಕೊಡುತ್ತಾರೆ. ಸರ್ಕಾರದಲ್ಲಿ ಇವತ್ತು ಎಷ್ಟು ಭೂಮಿ ಹಂಚುವುದಕ್ಕೆ ಉಳಿದಿದೆ? ಭೂಸುಧಾರಣೆಯಲ್ಲಿ ಈಗ ಮಹತ್ವವಿಲ್ಲದಂತಾಗಿದೆ. ಟೆನೆನ್ಸಿ ಲಾಸ್ಕ್ರ್ಯಾಪ ಮಾಡಿ, ಭೂ ಸುಧಾರಣೆಯನ್ನು ಕೈಬಿಡಿ, ದೇಶದ ಆಡಳಿತವನ್ನೂ ಕೈಬಿಡಿ ಎಂದು ಹೇಳುತ್ತೇನೆ. 2 ಸಾವಿರ 3 ಸಾವಿರ ಎಕರೆ ಜಮೀನಿರುವವರು ಭೂಮಾಲೀಕ ಎಂದು ಬೋರ್ಡುಗಳನ್ನು ಹಾಕಿಕೊಳ್ಳಲಿ. ಮಂಜುನಾಥ ಎಸ್ಟೇಟ್, ದುದ್ದ ಎಸ್ಟೇಟ್, ಆಲೂರು ಹನುಮಂತಪ್ಪ ಎಸ್ಟೇಟ್ ಎಂದು ಬೋರ್ಡುಗಳನ್ನು ಹಾಕಿಕೊಳ್ಳಲಿ. ಮೈಸೂರು ಸಂಸ್ಥಾನದ ಮಾಜಿ ಚೀಫ್ ಇಂಜಿನಿಯರೊಬ್ಬರು 40 ಎಕರೆ ಜಮೀನನ್ನು ಐದು ಲಕ್ಷ ರೂಪಾಯಿಗೆ ಖರೀದಿ ಮಾಡಿ ಮುಂದಿನ ಊರಿಗೆ ಹೋಗಲು ಪ್ರಯತ್ನ ಮಾಡುತ್ತಿದ್ದಾರೆ. ಹೀಗಾದರೆ ಎಲ್ಲಿದೆ ಸ್ವಾಮಿ ಭೂಮಿ? ನಿಮ್ಮಲ್ಲಿ ಗೋಮಾಳವಿದೆಯೋ, ಭೂಮಿ ಎಲ್ಲಿದೆ ಎಂದು ಕೇಳುತ್ತೇನೆ. ನೀವು ಏನು ತಿದ್ದುಪಡಿಯನ್ನು ಮಾಡಿದರೂ ಕೂಡ ಅದನ್ನು ಅಂಗೀಕಾರ ಮಾಡಿದ ನಾಲ್ಕೈದು ತಿಂಗಳಲ್ಲಿ ಹೈಕೋರ್ಟಿಗೆ ಹೋಗುತ್ತದೆ. ಅಲ್ಲಿ ಅದನ್ನು ತಳ್ಳಿ ಹಾಕುತ್ತಾರೆ.

ಇಂಥ ತಿದ್ದುಪಡಿಯನ್ನು ತರುವಾಗ ಅದರ ದುಷ್ಪರಿಣಾಮವೇನು, ಸತ್ಪರಿಣಾಮವೇನು, ಯಾರಿಗೆ ಅದರಿಂದ ಹೊರೆಯಾಗುತ್ತದೆ, ಯಾರಿಗೆ ಕೀರ್ತಿ ಬರುತ್ತದೆ ಎಂದು ಯೋಚನೆ ಮಾಡಬೇಕು. ಈ ರಾಜ್ಯದಲ್ಲಿ ಭೂಮಿಯ ಹಂಚಿಕೆಯ ವಿಷಯ ಬರೀ ಕೃಷ್ಣಪ್ಪನವರ ಒಬ್ಬರ ಭಾಗಕ್ಕೇ ಸೇರಿದ್ದಲ್ಲ. 17 ವರ್ಷಗಳಿಂದ ಕಂದಾಯ ಖಾತೆಯನ್ನು ಹಿಡಿದಿದ್ದು ಜಮೀನು ಹಂಚಿದ್ದಾರಲ್ಲ ಅವರಿಗೆಲ್ಲ ಈ ಪಾಪದ ಹೊರೆ ಬರುತ್ತದೆ. ಏಕೆಂದರೆ ಶ್ರೀಮಾನ್ ಕೃಷ್ಣಪ್ಪನವರಿಗೇ ಆಗಲೀ ಅಥವಾ ಶ್ರೀಮಾನ್ ಕಡಿದಾಳ್ ಮಂಜಪ್ಪನವರಿಗೇ ಆಗಲೀ ಅಥವಾ ಹಿಂದೆ ಇದ್ದಂಥ ಶ್ರೀಮಾನ್ ಸಿದ್ದಯ್ಯನವರಿಗೇ ಆಗಲೀ ಈ ವಿಷಯಗಳು ಅಷ್ಟಾಗಿ ತಿಳಿಯದೇ ಇರಲಿಲ್ಲ. ಈಗ ಇವರು 17 ವರ್ಷಗಳಿಂದಲೂ ಮಾಡುತ್ತಿರುವ ರಾಜ್ಯಾಡಳಿತದಲ್ಲಿ ಎತ್ತಿ ಹಿಡಿದಿರುವಷ್ಟು ಅಧ್ಯಾಯನ ಆಗ ಇತ್ತು ಎಂಬುದಾಗಿ ಹೇಳುವುದಕ್ಕಾಗುವುದಿಲ್ಲ. ಈಗ ಕಂದಾಯ ಖಾತೆಯಂತೂ ಖಂಡಿತ ಸರಿಯಾಗಿಲ್ಲ. ಇನ್ನು ಇವರ ಕೈಕೆಳಗೆ ಕೆಲಸಮಾಡತಕ್ಕ ಅಧಿಕಾರಿಗಳೋ ಏನೂ ಸರಿಯಾಗಿಲ್ಲ. ಈಗಿನ ತಹಸೀಲ್‌ದಾರ್, ಡೆಪ್ಯುಟಿ ಕಮಿಷನರ್, ಹಾಗೂ ರೆವಿನ್ಯೂ ಇನ್‌ಸ್ಪೆಕ್ಟರ್ ಅವರಿಗೆ ಅನ್‌ಆತರೈಜ್ಡ್ ಕಲ್ಟಿವೇಷನ್ ಎಂದರೇನು ಎಂಬುದು ಚೆನ್ನಾಗಿ ಗೊತ್ತಿದೆ. ಆದರೂ ಬೇಕಾದಷ್ಟು ತಕರಾರುತಃಖ್ತೆಗಳು ಇದ್ದುವು. ಶ್ರೀಮಾನ್ ಆಲೂರು ಹನುಮಂತಪ್ಪನವರು ಇತ್ತೀಚೆಗೆ ಯಾವುದೋ ಒಂದು ಕೆರೆಯ ಹತ್ತಿರ ಸುಮಾರು 250 ಎಕರೆಗಳಷ್ಟು ಜಮಾನು ಅನ್‌ಆತರೈಜ್ಡ್ ಕಲ್ಟಿವೇಷನ್ ಆಗುತ್ತಿದ್ದರೂ ಅಲ್ಲಿ ಸುಮಾರು 300 ಎಕರೆಗಳಷ್ಟು ಜಮಾನಿಗೆ ಹೆಚ್ಚು ನೀರನ್ನು ಬಿಡಿ ಎಂಬುದಾಗಿ ಒಂದು ಆರ್ಡರ್ ಮಾಡಿದ್ದಾರೆ. These people do not know what is the atchkat. These

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

people do not know what is a development area and they do not know what is the land available, how these are disposed of and how they could take possession of these properties. What is the good of my crying here that this is not helpful to the State, that this is not good to the agriculturists......

ಇವರು ಇಲ್ಲಿ ಅಂಧಕಾಸುರರಾಗಿ ಕಾಣುತ್ತಿದ್ದಾರೆ. ಕಣ್ಣು ಇದ್ದರೂ ಕುರುಡರ ಹಾಗೆಯೂ, ಕಿವಿ ಇದ್ದರೂ ಕಿವುಡರ ಹಾಗೆಯೂ ಮತ್ತು ಕಾಲು ಇದ್ದರೂ ಕುಂಟರ ಹಾಗೆಯೂ ಇವರು ವರ್ತಿಸುತ್ತಿದ್ದಾರೆ. ಈಗ ಈ ಭೂಸುಧಾರಣೆಯನ್ನು ಏನಾದರೂ ಮಾಡಿ ಅತಿ ಜಾಗ್ರತೆಯಾಗಿ ಜಾರಿಗೆ ತರಬೇಕು. ಜುಲೈ 1ನೇ ತಾರೀಖಿನವರೆಗೆ ಏಕೆ ಕಾಯಬೇಕು ? ಈಗ ಪಂಚಾಯತಿ ರಾಜ್ಯದ ಮಸೂದೆಯ ಸೆಲೆಕ್ಟ್ ಕಮಿಟಿಯ ವರದಿಯ ಬಗ್ಗೆ ಇಲ್ಲಿ ಚರ್ಚೆಮಾಡಲು 14 ಘಂಟೆಗಳ ಕಾಲ ಇಟ್ಟಿದ್ದಾರೆ. ಭೂಸುಧಾರಣೆಗೋಸ್ಕರವಾಗಿ ಸುಮ್ಮನೆ ದೆಹಲಿಕಡೆಗೆ ಇವರು ಕೈ ತೋರಿಸುತ್ತಿದ್ದಾರೆ. ಜುಲೈ ಹೊತ್ತಿಗೆ ಇದನ್ನು ಜಾರಿಗೆ ತರುತ್ತೇವೆಂದು ಇಲ್ಲಿಗೂ ಅಲ್ಲಿಗೂ ತಾಳ ಹಾಕುತ್ತಿದ್ದಾರೆ. ಇವರು ಅಲ್ಲಿನ ಮಂತ್ರಿಗಳಲ್ಲಿ ಹೆಚ್ಚು ಪ್ರಭಾವ ಬೀರಿ ಇದಕ್ಕೆ ಸಂಬಂಧಪಟ್ಟ ತಿದ್ದುಪಡಿಗಳನ್ನು ಪಾಸ್ ಮಾಡಿಸಿ ಏಪ್ರಲ್ ಒಂದನೆಯ ತಾರೀಖಿನಿಂದಾಗಲೀ ಅಥವಾ 2ನೇ ತಾರೀಖಿನಿಂದಾಲೀ ಈ ಕಾನೂನನ್ನು ಜಾರಿಗೆ ತಂದರೆ ಖಂಡಿತವಾಗಿ ಇವರಿಗೆ ಹೆಚ್ಚಿನ ಕೀರ್ತಿ ಬರುತ್ತದೆ ಮತ್ತು ಇವರನ್ನು ಹೆತ್ತಿರ ತಕ್ಕ ಮೈಸೂರು ಮಾತೆಗೆ ಕೀರ್ತಿ ಉಂಟಾಗುತ್ತದೆ. ಹಿಂದೆ ಶ್ರೀಮಾನ್ ಸಿದ್ಧಯ್ಯನವರು ಯಾವುದೇ ಅರ್ಜಿ ಬಂದರೂ ಅದರ ಮೇಲೆ ಒಂದು ಮಾತನ್ನು ಯಾವಾಗಲೂ ಬರೆಯುತ್ತಿದ್ದರು. ಅದು ಈ ರೀತಿ ಇತ್ತು. May be done. May not be done. May be granted if the land is available ಇನ್ನು ಇವತ್ತಿನ ಧಾರಣೆಯ ಪರಿಸ್ಥಿತಿ, ಆಹಾರ ಪರಿಸ್ಥಿತಿ ತುಂಬಾ ಹದಗೆಟ್ಟಿದೆ. ಅದರಲ್ಲೂ ರೈತನಿಗೆ ವ್ಯವಸಾಯಕ್ಕನುಗುಣವಾಗಿರತಕ್ಕ ಕಷ್ಟಗಳನ್ನು ಪರಿಹಾರಮಾಡಬೇಕಾದರೆ ಇದುವರೆಗೂ ಎಲ್ಲ ವಿಚಾರಗಳನ್ನು ಈ ಬಗ್ಗೆ ಪರಿಶೀಲನೆ ಮಾಡಿದಂಥ ಹಾಗೂ ಅಚ್ಚುಕಟ್ಟಾದಂಥ ಈ ಭೂಸುಧಾರಣೆ ಕಾಯದೆಯನ್ನು ಜಾಗ್ರತೆಯಾಗಿ ಜಾರಿಗೆ ತರದೇ ಹೋದರೆ ಈಗಿನ ಸರ್ಕಾರಕ್ಕೂ, ಸರ್ಕಾರದಲ್ಲಿ ಕೆಲಸಮಾಡುವ ಅಧಿಕಾರಿಗಳಿಗೂ ಒಳ್ಳೆಯದಾಗುವುದಿಲ್ಲವೆಂದು ಹೇಳಿ ನಾನು ಈ ತಿದ್ದುಪಡಿಯನ್ನು ವಿರೋಧ ಮಾಡುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸ್ವಾಮಿ, ಈ ದಿನ 1965ನೇ ಮೈಸೂರು ಟೆನೆನ್ಸಿಲಾಸ್ ಅಮೆಂಡ್‌ಮೆಂಟ್ ಬಿಲ್ ಏನು ಈ ಸಭೆಯ ಮುಂದೆ ತಂದಿದ್ದಾರೆ ಅದನ್ನು ಅನಿವಾರ್ಯವಾಗಿ ಸಭೆ ಒಪ್ಪಲೇ ಬೇಕಾಗಿದೆ. ಇದಕ್ಕೆ ನಾವು ಒಪ್ಪದೇ ಹೋದರೆ ಇದರ ಪರಿಣಾಮ ಮತ್ತಷ್ಟು ರೈತರಿಗೆ ಕೆಟ್ಟದ್ದು ಆಗುತ್ತದೆ. ಈಗಾಗಲೇ ಈ ತಿದ್ದುಪಡಿ ಮಸೂದೆಯ ಮೇಲೆ ಶ್ರೀಮಾನ್ ಗೋಪಾಲ ಗೌಡರು ಮತ್ತು ಶ್ರೀಮಾನ್ ಮುಕ್ಕಣ್ಣಪ್ಪನವರು ಬಹಳ ಸವಿಸ್ತಾರವಾಗಿ ಕೆಲವಾರು ವಿಚಾರಗಳನ್ನು ಹೇಳಿದ್ದಾರೆ. ಅಲ್ಲದೆ ಸರ್ಕಾರ ಈ ವಿಷಯದಲ್ಲಿ ಎಷ್ಟು ವಿಫಲವಾಗಿದೆ, ಎಷ್ಟು ತಪ್ಪುಗಳನ್ನು ಮಾಡಿದೆ, ಎಷ್ಟು ಅರೆಮನಸ್ಸಿನಿಂದ ದೇಶದಲ್ಲಿ ಎಂತಹ ಅನಿರ್ದಿಷ್ಟವಾದ ಪರಿಸ್ಥಿತಿಯನ್ನು ತಂದೊಡ್ಡಿದೆ ಎಂಬುದನ್ನು ಸವಿಸ್ತಾರವಾಗಿ ತಿಳಿಸಿದ್ದಾರೆ. ಗೇಣಿ ಸಮಸ್ಯೆಯೊಂದು ಬೇರೆ ಪ್ರತ್ಯೇಕವಾದ ಸಮಸ್ಯೆಯಲ್ಲ. ಅದು ಭೂಸಮಸ್ಯೆಯ ಒಂದು ಅಂಶ ಮಾತ್ರ. ಸಮಗ್ರ ಭೂಸುಧಾರಣೆಗಳು ಜಾರಿಗೆ ಬಂದು ರಾಷ್ಟ್ರೀಯ ಸಮಸ್ಯೆಯಾಗಿರುವ ಭೂಸಮಸ್ಯೆ ಪರಿಹಾರವಾಗಿದೆ. ಆಹಾರ ಸಮಸ್ಯೆ ಖಂಡಿತವಾಗಿ ಬಗೆಹರಿಯುವುದಿಲ್ಲ. ಇದಾದಹೊರ್ತು ನಮ್ಮ ದೇಶದಲ್ಲಿ ಕೈಗಾರಿಕೆಗಳ ಬೆಳವಣಿಗೆ ಸಾಧ್ಯವಿಲ್ಲ. ಇದು ಮೂಲಭೂತ ಪ್ರಶ್ನೆ. ಇದನ್ನು ಮೊದಲು ಬಗೆಹರಿಸಬೇಕು. ಎಲ್ಲಾ ಪಕ್ಷದವರೂ ಇದನ್ನು ಒಪ್ಪಿಕೊಂಡಿದ್ದಾರೆ. ಕಾಲವಿಳಂಬಕ್ಕೆ ಕೆಲವು ಕುಂಟು ನೆಪಗಳನ್ನು ಕಂದಾಯ ಮಂತ್ರಿಗಳು ಆಗಾಗ್ಗೆ ತಿಳಿಸುತ್ತಿದ್ದಾರೆ. ಇದರಲ್ಲಿ ಎಷ್ಟರ ಮಟ್ಟಿಗೆ ನಿಜವಿದೆ ಎಂಬುದನ್ನು ನಾವು ಈಗ ನೋಡಬೇಕಾಗಿದೆ. ಈಗ ಈ ತಿದ್ದುಪಡಿ ಮಸೂದೆಯಲ್ಲಿ ಹೇಳಿರುವ ಹಾಗೆ ಒಂದು ವರ್ಷ ಮುಂದೂಡಬೇಕು ಎಂಬ ಪರಿಸ್ಥಿತಿ ನಿಜವಾಗಿ ಇದ್ದಪಕ್ಷದಲ್ಲಿ ನಾವು ಒಪ್ಪಿಕೊಳ್ಳೋಣ. ಹಿಂದೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ತಿಳಿಸಿದ ಹಾಗೆ ಈ ವಿಚಾರದಲ್ಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನಲ್ಲಿ ಏನೊಂದು ತೀರ್ಮಾನವಾಯಿತು ಅದು ಮೈಸೂರು ರಾಜ್ಯದ ಕೆಲವು ಜಿಲ್ಲೆಗಳಿಗೆ ಸಂಬಂಧಪಟ್ಟದ್ದು. ಬೇರೆ ಪ್ರದೇಶಗಳಲ್ಲಿ ಈ ಶಾಸನವನ್ನು ಜಾರಿಗೆ ತರುವುದರಲ್ಲಿ ಯಾವ ತೊಂದರೆಯೂ ಇರಲಿಲ್ಲ. ಆದರೆ ಈ ಕಾಂಗ್ರೆಸ್ ಸರ್ಕಾರಕ್ಕೆ ಇದನ್ನು ಜಾರಿಗೆ ತರುವುದಕ್ಕೆ ಮನಸ್ಸು ಇಲ್ಲದೇ ಇದ್ದುದರ ಕಾರಣವೇನು ? ಈ ರೀತಿ ತಿದ್ದುಪಡಿಯನ್ನು ತರುವ ನೆಪದಲ್ಲಿ ಕಾಲವಿಳಂಬ ದೇಶದಲ್ಲಿ ಏನು ಆಗುತ್ತಿದೆ ಅದು ಸರಿಯಲ್ಲ. ವರ್ಷಂಪ್ರತಿ ಇದಕ್ಕೆ

ಒಂದೊಂದು ತಿದ್ದುಪಡಿಯನ್ನು ತರುತ್ತಲೇ ಇದ್ದಾರೆ. ಇವರು ಸಂಚಾರ ಹೋದಾಗ ಭೂಸುಧಾರಣೆಗಳನ್ನು ತರುವುದಾಗಿ ಮಾಡುವ ಭಾಷಣಗಳ ಪರಿಣಾಮವೇನಾಗಿದೆ. ಭೂಮಾಲೀಕರು ಕಾನೂನಿನಿಂದ ತಪ್ಪಿಸಿಕೊಳ್ಳುವ ಉಪಾಯಗಳನ್ನು ಹುಡುಕುತ್ತಿದ್ದಾರೆ. ದೇಶದಲ್ಲಿ ಭೂಸುಧಾರಣೆಯಿಂದ ಯಾರಿಗೆ ಪ್ರಯೋಜನವಾಗಬೇಕೊ ಅವರಿಗೆ ಪ್ರಯೋಜನವಾಗುತ್ತಿಲ್ಲ. ಭೂಸ್ವಾಮಿಗಳಿಗೆ ಎಲ್ಲ ರೀತಿಯಲ್ಲಿ ಪ್ರಯೋಜನವಾಗುತ್ತಿದೆ. ಬಡ ರೈತರಿಗೆ ಯಾವ ಅನುಕೂಲವಾಗುತ್ತಿಲ್ಲ. ದೊಡ್ಡ ದೊಡ್ಡ ಭೂಮಾಲೀಕರು ಪ್ರತಿ ವರ್ಷ ಐನೂರು, ಆರುನೂರು, ಸಾವಿರ, ಎರಡುಸಾವಿರ ಮತ್ತು ಮೂರುಸಾವಿರ ಎಕರೆ ಭೂಮಿ ಇರುವವರು ಸಾವಿರಾರು ಎಕರೆಗಳಷ್ಟು ಜಮೀನನ್ನು ತಮ್ಮ ಹೆಂಡತಿ, ಮಕ್ಕಳು ಹಾಗೂ ಸೊಸೆ ಹೆಸರಿನಲ್ಲಾಗಲೀ ಈಗಾಗಲೇ ವಿಭಾಗ ಮಾಡಿಕೊಂಡಿದ್ದಾರೆ. ಆದ್ದರಿಂದ ಈ ಕಾನೂನು ಜಾರಿಗೆ ಬರುವವೇಳೆಗೆ ಬಡ ರೈತರಿಗೆ ಜಮೀನು ಹಂಚಲು ಸಾಧ್ಯವೆ ಎಂಬುದು ಅನುಮಾನಾಸ್ಪದವಾಗಿದೆ. ಅಲ್ಲದೆ ದೊಡ್ಡ ದೊಡ್ಡಭೂಸ್ವಾಮ್ಯವುಳ್ಳತಮ್ಮ ಜಮೀನುಗಳನ್ನು ಬಡ ರೈತರಿಗೆ ಮಾರಿ ಅವರಿಂದ ಆಧಾರ-ಭೋಗ್ಯ ಪತ್ರಗಳನ್ನು ಬರೆಸಿಕೊಂಡು ಹೆಚ್ಚಿನ ಹಣವನ್ನು ರೈತರಿಂದ ವಸೂಲು ಮಾಡಿಕೊಳ್ಳುತ್ತಿದ್ದಾರೆ. ಇದರಿಂದೇನು ಗೊತ್ತಾಗುತ್ತದೆ ಎಂದರೆ ಸರ್ಕಾರ ನಿಧಾನ ಮಾಡುತ್ತಾ ಇರುವುದಕ್ಕೆ ಏನೋ ಪ್ರಬಲವಾದ ಕಾರಣಗಳಿವೆ ಎಂಬುದು ತಿಳಿಯುತ್ತದೆ. ಭೂಸ್ವಾಮ್ಯಗಳ ಈ ಬಗ್ಗೆ ಏನೇನು ವ್ಯವಸ್ಥೆಮಾಡಬೇಕೋ ಅವನ್ನುಮಾಡಿಕೊಳ್ಳಲಿ, ಅವರ ಸೊಸೆ, ಮಕ್ಕಳ, ಹಾಗೂ ಮೊಮ್ಮಕ್ಕಳ ಹೆಸರಿನಲ್ಲಿ ಜಮೀನುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಲಿ, ಮತ್ತು ಜಮೀನುಗಳನ್ನು ಮಾರಿಬಂದ ಹಣವನ್ನು ಬ್ಯಾಂಕಿನಲ್ಲಿ ಇನ್‌ವೆಸ್ಟ್‌ಮಾಡಲಿ ಎಂಬಉದ್ದೇಶದಿಂದ ಸರ್ಕಾರಕ್ಕೆ ಈ ಕಾನೂನು ಜಾರಿಗೆ ತರುವುದು ನಿಧಾನವಾಗಿರಬಹುದೋ ಏನೋ ಎಂಬ ಸಂಶಯ ನನಗೆ ಬರುತ್ತಿದೆ. ಇದೆಲ್ಲಾ ಕಾರ್ಯಗಳು ಮುಗಿಯಲಿ, ಅದುವರೆಗೂ ಇದನ್ನು ಜಾರಿಗೆ ತರಬೇಡಿ ಎಂಬುದಾಗಿ ಅವರು ಇವರಿಗೆ ಹೇಳಿದ್ದಾರೋ ಏನೋ ಗೊತ್ತಿಲ್ಲ. ನಿಜವಾಗಿ ಇವರಿಗೆ ಇದರಿಂದ ಏನಾದರೂ ರೈತರಿಗೆ ಪ್ರಯೋಜನವಾಗಬೇಕೆಂಬ ಭಾವನೆ ಇದ್ದರೆ ಶ್ರೀಮಾನ್ ಗೋಪಾಲಗೌಡರು ಹೇಳಿದ ಹಾಗೆ ಟೆನೆನ್ಸಿ ರಿಜಿಸ್ಟರುಗಳು ಮತ್ತು ಪಹಣಿ ಲೆಕ್ಕಗಳು ಯಾವ ರೀತಿಯಲ್ಲಿ ಬರೆಯಲ್ಪಟ್ಟಿವೆ ಎಂಬುದನ್ನು ವಿಚಾರಮಾಡಿ ನೋಡಲಿ. ಈ ದಿವಸದಿಂದಲಾದರೂ ಸಂಬಂಧಪಟ್ಟ ಮಂತ್ರಿಗಳು ಕುಳಿತು ಅವರ ಇಲಾಖೆಯಲ್ಲಿರ ತಕ್ಕ ಅಧಿಕಾರಿಗಳು ಯಾವ ರೀತಿಯಲ್ಲಿ ಸರ್ಕಾರ ಮಾಡಿರುವ ತೀರ್ಮಾನಗಳನ್ನು ಜಾರಿಗೆ ತರುತ್ತಿದ್ದಾರೆಂಬುದನ್ನು ನೋಡಬಹುದು. ಶ್ರೀಮಾನ್ ಗೋಪಾಲ ಗೌಡರು ಹೇಳಿದ ಹಾಗೆ ಪಹಣಿಗಳಲ್ಲಿ ಯಾರ ಹೆಸರು ಬೇಕಾದರೂ ಬರೆಸಬಹುದು. ಅನೇಕ ಶ್ಯಾನುಬೋಗರು ರೈತರ ಹೆಸರುಗಳನ್ನೇ ಬರೆಯುತ್ತಿಲ್ಲ. ಅದನ್ನು ವರ್ಷಾನುಗಟ್ಟಲೆ ವಿಚಾರಮಾಡುವುದೇ ಇಲ್ಲ. ಎಷ್ಟೋ ಹಳ್ಳಿಗಳಲ್ಲಿ ನೂರಾರು ಜನ ಗೇಣಿ ರೈತರು ಇದ್ದರೂ ಟೆನೆನ್ಸಿ ರಿಜಿಸ್ಟ್ರೇಷನ್‌ಗಳಲ್ಲಿ ಅವರು ಹೆಸರುಗಳನ್ನೇ ಕಂಡುಹಿಡಿಯುವುದಕ್ಕಾಗುವುದಿಲ್ಲ. ಈ ತರಹ ಸುಳ್ಳು ದಾಖಲಾತಿಗಳನ್ನು ಸೃಷ್ಟಿಮಾಡುತ್ತಿದ್ದಾರೆ.

4-00 P.M.

ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅಲ್ಲಿ ಸರಿಯಾದಂತಹ ದಾಖಲಾತಿಗಳನ್ನು ಬರೆಯುವುದಕ್ಕೆ ಯಾವ ಸಿಬ್ಬಂದಿಯೂ ಕೂಡ ಇಲ್ಲ. ಆದ್ದರಿಂದ ಅದನ್ನು ಬರೆಯುವುದಕ್ಕೆ ಕೆಲವು ವಿಶೇಷ ಅಧಿಕಾರಿಗಳನ್ನು ನೇಮಕ ಮಾಡಬೇಕು. ಅವರು ಅಂಥಾ ದಾಖಲಾತಿಗಳನ್ನು ಇಡುವುದರಿಂದ ಈ ಮೂಲಭೂತವಾದ ಭೂಸುಧಾರಣಾ ಕಾನೂನು ಏನಿದೆ ಅದನ್ನು ಜಾರಿಗೆ ತರುವಾಗ ಅದರಿಂದ ಸಾಮಾನ್ಯ ಜನಗಳಿಗೆ ಪ್ರಯೋಜನವಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ನಿಷ್ಪಕ್ಷಪಾತವಾದ ಕಾಗದ ಪತ್ರಗಳನ್ನು ಇಡುವುದಕ್ಕೆ ವ್ಯವಸ್ಥೆಮಾಡಬೇಕು. ಈ ಭೂಸುಧಾರಣಾ ಕಾನೂನನ್ನು ಜಾರಿಗೆ ತರುವುದನ್ನು ನಿಧಾನಮಾಡುವುದರಿಂದ ಅನೇಕ ಜನ ರೈತರ ಹತ್ತಿರ ಸರಿಯಾದಂತಹ ದಾಖಲಾತಿಗಳು ಇಲ್ಲದೇ ಇರುವುದರಿಂದ ಅವರಿಗೆ ಅನಾನುಕೂಲವಾಗುತ್ತಿದೆ. ಈಗ ಇನಾಮ್ ಅಬಾಲಿಷನ್ ಆಕ್ಟ್ ಪ್ರಕಾರ ಯಾವುದಾದರೂ ಜಮೀನಿನ ಸಂಬಂಧದಲ್ಲಿ ಯಾರಾದರೂ ಟ್ರಿಬ್ಯುನಲ್‌ಗೆ ಅಪೀಲು ಹೋದರೆ ಅದನ್ನು ಎನ್‌ಕ್ವೈರಿ ಮಾಡುವುದಕ್ಕೆ ಅಧಿಕಾರ ಇದೆ. ಜನಗಳು ಕೋರ್ಟಿಗೆ ಹೋದಾಗ ಅಲ್ಲಿ ನಿಮ್ಮ ಹತ್ತಿರ ಆ ಜಮೀನಿಗೆ ಸಂಬಂಧಪಟ್ಟ ಡಾಕ್ಯುಮೆಂಟರಿ ಎವಿಡೆನ್ಸ್ ಏನಾದರೂ ಇದೆಯೋ ಎಂದು ಕೇಳುತ್ತಾರೆ. ಗೇಣಿದಾರ ಭೂಮಾಲೀಕನಿಗೆ ಗೇಣಿಯನ್ನು ಕೊಟ್ಟದ್ದಕ್ಕೆ ಅವನು ಗೇಣಿದಾರನಿಗೆ ಯಾವ ರಸೀತಿಯನ್ನು ಕೊಡುವುದಿಲ್ಲ. ಪಹಣಿಯಲ್ಲಿ ರೈತನ ಹೆಸರನ್ನು ಬರೆದಿರುವುದಿಲ್ಲ. ಟೆನೆನ್ಸಿ ರಿಜಿಸ್ಟರ್‌ನಲ್ಲಿಯೂ ರೈತನ ಹೆಸರನ್ನು ಬರೆಯುವುದಿಲ್ಲ. ಈ ರೀತಿ ಮಾಡಿದರೆ ಇದರಿಂದ ಯಾರಿಗೆ ಪ್ರಯೋಜನವಾಗುತ್ತದೆ? ದೇಶದಲ್ಲಿ ಸಾಮಾನ್ಯ ಜನಗಳಿಗೆ ಪ್ರಯೋಜನವಾಗುವಂತೆ ಭೂಸುಧಾರಣೆಯನ್ನು ಮಾಡಬೇಕೆಂದು ಸರ್ಕಾರದ ಧೋರಣೆ ಇದೆ.

(ಶ್ರೀ ಪಿ. ವೆಂಕಟಗಿರಿಯಪ್ಪ)

ಹೀಗಿರುವಾಗ ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತರುವುದರಲ್ಲಿ ನಾಟಕವಾಡುವುದನ್ನು ಬಿಟ್ಟು ಆದಷ್ಟು ಜಾಗ್ರತೆಯಾಗಿ ಇದನ್ನು ಜಾರಿಗೆ ತರಬೇಕು. ಈಗ ತಾನೆ ಮಾನ್ಯ ರೆವಿನ್ಯೂ ಸಚಿವರು ಹೇಳಿದರು ಭೂಸುಧಾರಣಾ ಕಾನೂನನ್ನು ಜುಲೈ ಒಂದನೆಯ ತಾರೀಖಿನಿಂದ ಜಾರಿಗೆ ತರುತ್ತೇವೆಂದು. ಆಗ ಈವನ್ನು ಜಾರಿಗೆ ತಂದರೆ ಸಾಲದು, ಇನ್ನೂ ಒಂದೆರಡು ತಿಂಗಳೊಳಗಾಗಿ ಭೂಸುಧಾರಣಾ ಕಾನೂನನ್ನು ಜಾರಿಗೆ ತರಬೇಕು. ಈಗ ಈ ದೇಶದಲ್ಲಿ ಟೆನೆನ್ಸಿ ರಿಜಿಸ್ಟರ್‌ಬರೆಸುವ ವಿಷಯದಲ್ಲಿ ಮತ್ತು ಪಹಣಿಯನ್ನು ಬರೆಸುವುದರಲ್ಲಿ ಸರ್ಕಾರದವರು ಒಂದು ಸರಿಯಾದಂತಹ ವ್ಯವಸ್ಥೆಯನ್ನು ಮಾಡಬೇಕು. ಆದ್ದರಿಂದ ಅದನ್ನು ಬರೆಸುವುದಕ್ಕೆ ವಿಶೇಷ ಅಧಿಕಾರಿಗಳನ್ನು ನೇಮಿಸಿ ಸರಿಯಾದಂತಹ ದಾಖಲಾತಿಗಳನ್ನು ತಯಾರುಮಾಡಬೇಕು. ಅದರಿಂದ ರೈತರಿಗೆ ಅನುಕೂಲವಾಗುವಂತೆ ಮಾಡಬೇಕು. ಈ ತಿದ್ದುಪಡಿ ಮಸೂದೆಯನ್ನು ಮಾನ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸುತ್ತಾ ಭೂಸುಧಾರಣಾ ಕಾನೂನನ್ನು ಜುಲೈ ಒಂದನೆಯ ತಾರೀಖಿನಿಂದ ಜಾರಿಗೆ ತರುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಅವರು ಈ ಕೊನೆಯ ಭರವಸೆಯನ್ನಾದರೂ ನಡೆಸಿಕೊಡಲಿ, ಈಗ ಜನತೆಗೆ ಏನೊಂದು ಅನ್ಯಾಯವಾಗುತ್ತಿದೆಯೋ ಅದು ಕೊನೆ ಆಗಲೀ ಸಾಮಾನ್ಯ ರೈತನಿಗೆ ಅನುಕೂಲವಾಗಲಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಟೆನೆನ್ಸಿ ರಿಜಿಸ್ಟರ್ ಮತ್ತು ಪಹಣಿ ಲೆಕ್ಕವನ್ನು ಬರೆಸುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಲೇಬೇಕು ಮತ್ತು ಆದಷ್ಟು ಜಾಗ್ರತೆ ಭೂಸುಧಾರಣಾ ಕಾನೂನನ್ನು ಜಾರಿಗೆ ತರಬೇಕು. ಆದಷ್ಟು ಜಾಗ್ರತೆ ಭೂಸಮಸ್ಯೆ ಪರಿಹಾರವಾಗಬೇಕು. ಭೂಸಮಸ್ಯೆ ಪರಿಹಾರವಾದ ಹೊರತು ಆಹಾರದ ಸಮಸ್ಯೆ ಪರಿಹಾರವಾಗುವುದಿಲ್ಲ. ಈಗ ಹದಿನೇಳು ವರ್ಷಗಳಿಂದ ಭೂಸುಧಾರಣೆಗಳನ್ನು ಜಾರಿಗೆ ತರದೆ ಕಾಲಹರಣ ಮಾಡಿ ವಿಳಂಬಮಾಡಿದ ಪಾಪವನ್ನು ಮುಂದುವರಿಸಬೇಡಿ, ಈ ಕಾನೂನನ್ನು ಜಾರಿಗೆ ತನ್ನಿ ಎಂದು ನಾನು ಮಾನ್ಯ ಕಂದಾಯಮಂತ್ರಿಗಳಲ್ಲಿ ಒತ್ತಾಯಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri KADIDAL MANJAPPA (Sringeri).—Mr. Speaker, Sir, it has become very necessary that we should pass this measure. Sri Muckannappa observed that this measure is likely to be struck down by the courts. I am not inclined to agree with him. Perhaps, he is confusing this measure with the other amendment passed last year which gives protection to tenants for a period of one year which is being renewed from year to year. So, this measure will not be unconstitutional and there is no fear that it would be struck by the courts.

With regard to the need for speedy implementation of the Land Reforms Act, I would like to make a few observations. Sir, nearly three decades ago, even before we attained independence, we formulated the policy that the tiller should become the owner of the land. We were committed to the land reforms policy and so also the major political parties in the country. But, due to various reasons, the implementation of this policy has been delayed.

Sri G. V. GOWDA (Palya).—What are those reasons Sir.

Sri KADIDAL MANJAPPA.—Sir, when a country launches a programme which affects the interests of the masses, there should be some care in implementing the programme. With regard to land reforms I should say, we are all to be blamed. The tenants in general are getting into a mood of frustration. We should not allow the masses to get into a mood of frustration; it is a bad sign. I do not personally blame the Revenue Minister; I have already stated that we are all to be blamed; the ruling party should be prepared to take the blame. I admit we have not been precise; we have not been as zealous as we ought to

have been in such matters. Therefore, I would like to appeal to my friend, the Revenue Minister, to take steps to implement at least the provisions relating to the Tenancy Land Reforms Act, as a first step. He was pleased to say on some occasion that it may not be legally correct to implement those provisions. I am a lawyer and I am sure there is nothing wrong in implementing those provisions which releate to tenancies and rent, etc.

Now, as it is, the different Tenancy Acts are administered by the revenue officers; in most cases, they are the Tahsildars and in some cases they are the aval-karkoons or the lower subordinate officers and the Assistant Commissioner. In Madras, I belive, it is the Assistant Commissioners that administer this law. Whatever it is, my experience shows that we cannot expect the revenue officers to bestow adequate attention to these matters and give just decisions due to various factors and the atmosphere prevailing in the country. Therefore, we were of the view, we who dealt with the Land Reforms Bill at the Select Committee stage, that the Act should be administrated not by the revenue officers, but by the judicial officers who are not generally subject to outside influences. Sir, what is happening to-day? In spite of our best efforts, there is not that zeal and enthusiasm among the officers to give relief to the poor and the down trodden. I know how the Inam Abolition Acts are being implemented. Now I am a lawyer; I know what is happening. The officers at the level of Tahsildars have no enthusiasm. I do not want to make a sweeping remark. Some of them at least lack integrity to deal with these matters justly. Therefore, it has become very necessary for us to entrust the task of adminstering some of these laws to the judicial officers and that should be done very quickly. On this occasion I would like to appeal to the Government of India and the Planning Commission that they should adopt a uniform policy with regard to legislations pertaining to land reforms. We know different States are being permitted to have their own different enactments. For instance in Madras there is no question of conferring occupancy rights on the tenants according to their Act. In other places, there is a scheme of conferring occupancy rights on the tenants. Unless the Government of India adopt a uniform policy on this vital question and unless they take active and take very serious steps to implement these reforms, I have no hesitation in saying that even with the lapse of 10 more years we will be where we are now. This is my confirmed opinion.

Mr. Muckannappa was pleased to say a few things about unauthorised occupation. I must admit that even when I was a Minister there was unauthorised occupation. Neither myself nor Krishnappa willingly permitted unauthorised occupation. In spite of our efforts, in some place some people resorted to unauthorised occupation. There are various *causes for* that kind of outlook on the part of those unauthorised occupants. Firstly, prior to 1947, unauthorised occupation was freely allowed in certain parts of the State, particularly in the Madras Area and nobody was required to take permission from the concerned authorities and the question of regularisation arose later on. So also in the old

(SRI KADIDAL MANJAPPA)

Mysore Area, prior to 1942, Government encouraged the 'Grow More Food' campaign and according to that campaign, people were encouraged to occupy land. It is only in recent years after the advent of Independence there is scarcity of lands, demand for lands and competition for lands and as a result people have resorted to unauthorised occupation. Mr. Muckannappa referred to a circular issued by me and Mr. M. P. Patil who was my predecessor in office. When Mr. M. P. Patil became the Revenue Minister issued a circular that anybody who has been in occupation of land for a year should get it. Later on, I issued a circular to the effect that if a person has continuously cultivated the land for a period of 6 years or more and if he is a landless person and if the land is otherwise available, the land should be confirmed to him. After observing the other formalities required by law. That was done with a view to put an end to unauthorised occuaption. In some cases we have to ruthlessly evict them ; in some cases it has become a human problem and we have to regularise the occupancies subject to availability of land and subject to the provisions of law relating to the grant of land. Therefore, with that object I issued the circular referred to above. Even now I would request my friend the Revenue Minister to take steps to regularise unauthorised occupation provided there is no difficulty. In other cases, I agree with my friend Sri Muckannappa that we should take drastic steps to put down unauthorised occupation. People cannot be allowed to occupy Government land as they please and take the law into their own hands. With these few observations, I would like to appeal once again to my friend the Revenue Minister to give effect to the provisions relating to tenancy aud rent in the Land Reforms Act and introduce the amendments quickly. Then, he must issue circulars to his officers in regard to the implementation of the Tenancy Acts which are now in force. There should not be delay and they should be just in deciding the cases. Thank you, Sir, for giving me an opportunity to speak on this Bill.

† ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ಈ ಮಾನ್ಯ ಸಭೆಯ ಮುಂದೆ ಈಗಾಗಲೆ ತಂದಿರುವ ಮೈಸೂರು ರಾಜ್ಯದ ಗೇಣಿ ಶಾಸನ ಕಾನೂನಿಗೆ ತಂದಿರುವ ತಿದ್ದುಪಡಿಯನ್ನು ನಾನಾದರೂ ವಿರೋಧಿಸುತ್ತೇನೆ. ಏಕೆಂದರೆ ಈ ತಿದ್ದುಪಡಿಯನ್ನು ಗೇಣಿದಾರರ ರಕ್ಷಣೆಗಾಗಿ ತಂದಿದ್ದರೂ, ಇದರಲ್ಲಿ ನಿಜವಾಗಿಯೂ ಗೇಣೀದಾರರ ರಕ್ಷಣೆಯಾಗುವುದಿಲ್ಲ. ಗೇಣೀದಾರರ ರಕ್ಷಣೆ ಮಾಡುತ್ತೇವೆಂದು ಹೇಳಿದುದರ ಪ್ರತಿಕ್ರಿಯೆಯನ್ನು ಸಾಧಾರಣವಾಗಿ 5 ವರ್ಷದಿಂದ ಆಳವಾಗಿ ಅಭ್ಯಾಸಮಾಡಿ ನಾನು ಹೇಳುತ್ತಾ ಇದ್ದೇನೆ. ಈ ತಿದ್ದುಪಡಿಯನ್ನು ನಮ್ಮ ಮಾನ್ಯ ಮಂತ್ರಿಗಳು ಈ ಸಭೆಯ ಮುಂದೆ ನಾಲ್ಕನೆಯ ಸಲ ತರುತ್ತಾ ಇದ್ದಾರೆ. ಹೋದ ಅಧಿವೇಶನದಲ್ಲಿ ಬರುವ ಬಜೆಟ್ ಅಧಿವೇಶನಕ್ಕೆ ಭೂಸುಧಾರಣೆ ಮಸೂದೆಯನ್ನು ಮಾನ್ಯ ಸಭೆಯ ಮುಂದೆ ತರುತ್ತೇವೆಂದು ಹೇಳಿದ್ದರು. ಆದರೆ ಈಗ ಪುನಃ ಜುಲೈನಲ್ಲಿ ಭೂಸುಧಾರಣೆ ಮಸೂದೆಯನ್ನು ಮಾನ್ಯ ಸಭೆಯ ಮುಂದೆ ಬರುತ್ತದೆಂದು ಹೇಳುತ್ತಾರೆ. ಈ ಮಸೂದೆ ಹಿಂದಕ್ಕೆ ಬೀಳುತ್ತಾ ಇರುವುದನ್ನು ನೋಡಿದರೆ, ಇದರಲ್ಲಿ ಏನೋ ಒಂದು ದುಷ್ಟ ಹಿತಾಸಕ್ತಿಗಳ ಕೈವಾಡ ಇದೆಯೆಂದು ನಾನಾದರೂ ಹೇಳಬಯಸುತ್ತೇನೆ. ಇದೊಂದು ಕಾನೂನಿನಲ್ಲೇ ಅಲ್ಲ, ಎಲ್ಲದರಲ್ಲಿಯೂ ಕಾಯಿದೆಯನ್ನು ಹಿಂದಕ್ಕೆ ಹಾಕುವುದು ಸರಕಾರಕ್ಕೆ ಒಂದು ಅಭ್ಯಾಸವಾಗಿಹೋಗಿದೆ. ಸುಮ್ಮನೆ 4–5 ತಿದ್ದುಪಡಿಗಳನ್ನು ತರುತ್ತಾರೆ. ಹಿಂದಿನ ಒಂದು ಗಾದೆ ಇದೆ, " ಬರುತ್ತದೆ, ಬರುತ್ತದೆ ಮಾರಿ " ಅಂತ. ಹಾಗೆ ಐದು ವರ್ಷಗಳಿಂದ, 1961ನೇ ಇಸವಿಯಿಂದ ಈ ಕಾನೂನು ಬರುತ್ತದೆ ಬರುತ್ತದೆ ಎಂದು ಈ ಮಾನ್ಯ ಸಭೆಯಲ್ಲಿ ಹೇಳಿ,

ಕಾನೂನು ಪ್ರಕಟಿಸಲ್ಪಟ್ಟ ಮೇಲೆ ಅದನ್ನು ಪ್ರತಿ ವರ್ಷ ಜಾರಿಗೆ ತರುತ್ತೇವೆ ಎಂದು ಹೇಳಿ, ಹಿಂದಕ್ಕೆ ಹಾಕಿದ್ದಾರೆ. ಈ ದೇಶದಲ್ಲಿ ಸಾಧಾರಣವಾಗಿ ಶೇಕಡ 75 ಕ್ಕಿಂತ ಜಾಸ್ತಿ ಚಾಲು ಗೇಣಿದಾರರಿರುತ್ತಾರೆ. ಅವರನ್ನು ಆದಷ್ಟು ಬೇಗ ಓಡಿಸಲಿಕ್ಕೆ ಇದರಿಂದ ಒಳ್ಳೆಯ ಅವಕಾಶವಿರುತ್ತದೆ. ಸರಕಾರ ಈ ತಿದ್ದುಪಡಿಗಳನ್ನು ಇನ್ನೂ ಹೆಚ್ಚು ಹೆಚ್ಚು ತರುತ್ತಾರೆಂದು ನನಗಾದರೂ ಕಾಣಿಸುತ್ತದೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಈ ಶಾಸನ ಜಾರಿಗೆ ಬರುತ್ತದೆ ಎಂದು ಹೇಳಿ ಕೆಲವು ಭೂ ಮಾಲೀಕರು, ಒಕ್ಕಲುಗಳಿಗೆ ಗೇಣಿಗೆ ಕೊಟ್ಟಿದ್ದ ಭೂಮಿಯನ್ನು ವಾಪಸು ಪಡೆದು ಅವರನ್ನು ಹೊಲದಿಂದ ಎಬ್ಬಿಸಿ ಓಡಿಸುತ್ತಿದ್ದಾರೆ. ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಸಿಕ್ಕಿದ ಕೂಡಲೇ ಉಳುವವನಿಗೆ ಭೂಮಿ ಎಂದು ಹೇಳುತ್ತಿದ್ದರು. ಅವರ ಆಶ್ರಯದಲ್ಲಿಯೇ ಈ ಸರಕಾರ 17 ವರ್ಷಗಳಿಂದ ಅಧಿಕಾರದ ಗಾದಿಗೆ ಅಂಟಿಕೊಂಡು ಇರುವಾಗ ಭೂಸುಧಾರಣೆ ಶಾಸನವನ್ನು ಮುಂದೂಡುತ್ತ ಇಂತಹ ತಿದ್ದುಪಡಿಗಳನ್ನು ತರುತ್ತಾ ದೇಶದಲ್ಲಿರುವ ಸುಮಾರು ಶೇಕಡಾ 75 ರಷ್ಟು ಚಾಲಗೇಣಿ ರೈತರನ್ನು ಹೊಲವನ್ನು ಬಿಟ್ಟು ಓಡಿಸಲು ಅವಕಾಶ ಮಾಡಿದ್ದಾರೆ. ನನ್ನ ಅಂದಾಜು ಮೇರೆಗೆ ಸರಾಸರಿ ಶೇಕಡಾ 55ಕ್ಕೆ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಒಂದು ಉದಾಹರಣೆಯನ್ನೇ ಕೊಡುವುದಾದರೆ ನೂರಕ್ಕೆ 85 ರಷ್ಟು ಇರುವ ಚಾಲಗೇಣಿ ರೈತರು ಹೊಲದಿಂದ ಹೊರಕ್ಕೆ ಬಂದಿದ್ದಾರೆ. ಇದಕ್ಕೆ ಕಾರಣ ಅಲ್ಲಿನ ಭೂ ಮಾಲೀಕರುಗಳು ಕೊಡುವ ಉಪಟಲಗಳು. ನನ್ನ ಅಂದಾಜಿನ ಮೇರೆಗೆ ಇಲ್ಲಿ ಈಗ ಶೇಕಡಾ 43 ರಷ್ಟು ಮಾತ್ರ ಚಾಲಗೇಣಿ ರೈತರಿದ್ದಾರೆ. ತಾವು ಚಾಲಗೇಣಿ ರೈತರ ರಕ್ಷಣೆಗೋಸ್ಕರ ಈ ಕಾನೂನನ್ನು ತರುತ್ತಿದ್ದೇವೆಂದು ಹೇಳುತ್ತಿದ್ದೀರಿ, ಆದರೆ ಕಾನೂನನ್ನು ತರದೆ ಇನ್ನೂ ಮುಂದೂಡುತ್ತಾ ಬರುತ್ತಿದ್ದೀರಿ. ಕಾನೂನು ಪ್ರಕಾರ ಎಂದು ಹೇಳಿಕೊಂಡು ಎಷ್ಟೋ ಜನ ಚಾಲಗೇಣಿ ರೈತರು ಒಕ್ಕಲು ಬಿಟ್ಟು ಹೊರಗೆ ಹೋಗುತ್ತಿದ್ದಾರೆ. ಅಲ್ಲದೆ ಭೂ ಮಾಲೀಕರು ಕಾನೂನು ರಕ್ಷಣೆ ಪಡೆದು ಗೇಣಿದಾರರು ಅವರಿಗೆ ಸರಿಯಾದ ಗೇಣಿಯನ್ನು ಕೊಟ್ಟರೂ ಕೂಡ ಅವರಿಗೆ ಸರಿಯಾದ ರಶೀತಿ ವಗೈರೆಗಳನ್ನು ಕೊಡದೆ ಅವರ ಮೇಲೆಯೇ ದಾವೆ ಹಾಕಿ ಕೋರ್ಟುಗಳಿಗೆ ಅವರನ್ನು ಅಲೆಸುತ್ತಿದ್ದಾರೆ. ಅಲ್ಲಿ ತಕರಾರುಗಳನ್ನು ಮಾಡಿ ಇಂಜಕ್ಷನ್ನು, ಸ್ಟೇ ಆರ್ಡರನ್ನು ತಂದು ಹೊಲದಲ್ಲಿರುವ ಬೆಳೆಯನ್ನು ಕೊಯ್ಸಿ ಅವರನ್ನು ಹೊಲದಿಂದ ಎಬ್ಬಿಸುತ್ತಿದ್ದಾರೆ. ಇದರಿಂದ ನಮ್ಮ ದೇಶದಲ್ಲಿ ದುರ್ಭಿಕ್ಷದ ದೇವತೆ ಆಹಾರದ ಅಭಾವದಿಂದಾಗಿ ತಾಂಡವ ನೃತ್ಯವಾಡುತ್ತಿದ್ದಾಳೆ. ಸಾಧಾರಣವಾಗಿ ಇವೊತ್ತು ಮೂರು ಬೆಳೆ ಬೆಳೆಯುವಂತಹ ಸುಮಾರು 8,000 ಎಕರೆಯಷ್ಟು ಭೂಮಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯವಸಾಯವಾಗದೇ ಖಾಲಿಯಾಗಿ ಬಂಜರು ಭೂಮಿಯಾಗಿ ಬಿದ್ದಿದೆ ಎಂದು ಈ ಮಾನ್ಯ ಸಭೆಯಲ್ಲಿ ಹೇಳಲು ಬಯಸುತ್ತೇನೆ ಮತ್ತು ತಮ್ಮ ತಿಳುವಳಿಕೆಗೂ ತರುತ್ತಿದ್ದೇನೆ. ಇದು ಬಹಳ ನೋವನ್ನುಂಟು ಮಾಡುವಂತಹ ವಿಷಯ. ಒಂದು ಕಡೆ ಗೇಣಿಯನ್ನು ಕೊಡದೆ ಅವರನ್ನು ಎಬ್ಬಿಸಿ ಕಾನೂನು ರಕ್ಷಣೆ ಕೊಡದೇ ಇನ್ನೊಂದು ಕಡೆ ವ್ಯವಸಾಯ ಮಾಡುವ ಭೂಮಿಯಲ್ಲಿ ಉತ್ಪಾದನೆ ಮಾಡದೆ ಆ ಕೆಲಸ ಮಾಡಲಿಕ್ಕೆ ಅಡ್ಡಿ ಮಾಡಿ ಇಂಜಕ್ಷನ್ನು ಆರ್ಡರು ತರುವುದು ಇತ್ಯಾದಿ ಉಪಟಳಗಳಿಂದಾಗಿ ಒಕ್ಕಲು ಮಾಡುವವರಾರೂ ವ್ಯವಸಾಯ ಮಾಡಲಿಕ್ಕೇ ಸಾಧ್ಯವಿಲ್ಲ. ಹೀಗಾಗಿ ಫಲವತ್ತಾದ ಭೂಮಿ ವ್ಯವಸಾಯ ವಾಗದೆ ಹಾಗೇ ಬರೀ ಬಂಜರು ಭೂಮಿಯಾಗಿ ಇವೊತ್ತು ಬಿದ್ದಿದೆ.

ಸ್ವಾಮೀ, ಇವೊತ್ತು ಭೂಸುಧಾರಣಾ ಮಸೂದೆಯನ್ನು ಜಾರಿಗೆ ತರುತ್ತೇವೆ ಎಂದು ಹೇಳಿ ಈ ದೇಶದಲ್ಲಿ ಅಧಿಕ ಸಂಖ್ಯೆಯಲ್ಲಿರುವಂತಹ ಒಕ್ಕಲಿಗರುಗಳಿಗೆ ಒಂದು ಅಭಯವನ್ನು ಕೊಡುತ್ತಾ ಬಂದಿದ್ದೀರಿ. ಆದರೆ ತಾವು ಈ ಶಾಸನವನ್ನು ಜಾರಿಗೆ ತರುವ ಹೊತ್ತಿಗೆ ನನಗಾದರೂ ಒಂದು ಹೆದರಿಕೆಯಾಗುತ್ತಿದೆ. ಈಗ ಈ ದೇಶದಲ್ಲಿ ಯಾವ ಗೇಣಿ ರೈತರು ಇದ್ದಾರೋ ಅವರ ವಂಶವನ್ನೇ ನಿರ್ಮೂಲ ಮಾಡುತ್ತಾರೋ ಎನ್ನುವ ಅನುಮಾನ ನನಗಾದರೂ ಬರುತ್ತಿದೆ. ಇನ್ನು ಪ್ರಕೃತದಲ್ಲಿರುವ ಒಕ್ಕಲಿಗರು ಈ ಕಾನೂನಿನ ಮೂಲಕ ಉಳಿಯುವ ಪರಿಸ್ಥಿತಿಯಲ್ಲಿಲ್ಲ. ನಮ್ಮ ಜಿಲ್ಲೆಯ ಪರಿಸ್ಥಿತಿಬಗ್ಗೆ ಹೇಳುವುದಾದರರೆ, ಮದರಾಸು ಕಾನೂನು ಮೂಲಕ ಯಾವ ಶಾಸನವಿತ್ತೋ ಅದನ್ನೇ ಇಲ್ಲೂ ಜಾರಿಗೆ ತಂದಿದ್ದಾರೆ. ಅದು ಚಾಲು ಇರುವಾಗಲೇ ಇಲ್ಲಿರುವ ಚಾಲಗೇಣಿ ರೈತರು ಭೂ ಮಾಲೀಕರಿಗೆ ಉತ್ಪತ್ತಿಯಲ್ಲಿ ಐದನೇ ಒಂದು ಭಾಗದಷ್ಟನ್ನು ಕೊಡಬೇಕು ಎಂದು ಇದ್ದರೂ, ಗೇಣಿ ಹೆಚ್ಚಾಗಿ ಬರಬೇಕಿತ್ತು ಎಂದು ಭೂ ಮಾಲೀಕರು ಕೋರ್ಟಿಗೆ ಹೋಗಿ ಕಾನೂನು ಮೂಲಕ ರಕ್ಷಣೆಯನ್ನು ಪಡೆಯುತ್ತಿದ್ದಾರೆ. ಈ ಕಾನೂನನ್ನು ಯಾರೂ ಗಮನದಲ್ಲಿಟ್ಟುಕೊಂಡಿಲ್ಲ ಮತ್ತು ಅಲ್ಲಿ ಇದನ್ನು ಜಾರಿಗೆ ಕೊಡುವ ರೆವಿನ್ಯೂ ಇಲಾಖೆಯ ಅಧಿಕಾರಿಗಳೆಲ್ಲ ಎಲ್ಲ ಅಧಿಕಾರವೂ ತಮ್ಮ ಕೈಯ್ಯಲ್ಲಿದೆ ಎಂದು ಈಗ್ಗೆ ಎರಡು ಮೂರು ವರ್ಷಗಳಿಂದಲೂ ಚಾಲಗೇಣಿ ರೈತರು ಸರಿಯಾದ ಗೇಣಿಯನ್ನು ಕೊಟ್ಟಿಲ್ಲ, ಕಡಿಮೆ ಕೊಟ್ಟಿದ್ದಾರೆಂದು ಕೋರ್ಟುಗಳಿಗೆ ಹೋಗುತ್ತಿದ್ದಾರೆ ಎಂದು ಇಲ್ಲಿ ಇದನ್ನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಇಲ್ಲಿರುವ ರೆವಿನ್ಯೂ ಇಲಾಖೆಯ ಅಧಿಕಾರಿಗಳೇ ಕೆಲವು ಭೂಮಾಲೀಕರ ಕಡೆಗೆ ಸೇರಿಕೊಂಡು ಅವರನ್ನು ಒತ್ತಾಯ ಪಡಿಸಿ ನಿಮಗೆ ಬರುತ್ತಿರುವ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಗೇಣಿ ಕಡಿಮೆ ಎಂದು ಹೇಳಿ ಕಾನೂನು ರಕ್ಷಣೆ ಪಡೆಯಬೇಕೆಂದು ಇಲ್ಲದ ಉಪಟಳಗಳನ್ನು ಅಲ್ಲಿರುವ ಜನಕ್ಕೆ ಕೊಡುತ್ತಿದ್ದಾರೆ. ಅಲ್ಲದೆ ಇಲ್ಲದಸಲ್ಲದ ತೊಂದರೆಗಳನ್ನು ಕೊಟ್ಟು ಗೇಣಿಯ ಕೇಸುಗಳ ಹೊರೆ ಹೆಚ್ಚಾಗಿ ಈಗ ಚಾಲಿಗೇಣಿ ಒಕ್ಕಲುಗಳವರು ಹೊರಗೆ ಹೋಗುವ ಪರಿಸ್ಥಿತಿಯಲ್ಲಿದ್ದಾರೆ.

ಮಾನ್ಯ ಸಚಿವರು ಈಗತಾನೇ ಅಪ್ಪಣೆ ಕೊಡಿಸಿದಹಾಗೆ ಈ ಭೂಸುಧಾರಣೆಯನ್ನು ಜುಲೈ ಒಂದನೇ ತಾರೀಖಿನಿಂದ ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅವರು ತಮ್ಮ ಹಿಂದಿನ ಅನುಭವವನ್ನೇ ಇನ್ನೂ ಮುಂದಕ್ಕೆ ಅನುಸರಿಸಿಕೊಂಡು ಹೋಗದೇ ಕನ್ನಡದಲ್ಲಿ ಒಂದು ಗಾದೆ ಹೇಳುವಂತೆ, "ಆಚಾರ್ರು ಆಚಾರ ಹೇಳಲಿಕ್ಕೆ, ಬದನೇಕಾಯಿ ತಿನ್ನಲಿಕ್ಕೆ" ಎನ್ನುವಂತೆ ಇದರಲ್ಲಿ ಮಾಡದೇ ಆದಷ್ಟು ಬೇಗ ಈ ಮಾನ್ಯ ಸಭೆಯ ಮುಂದೆ ಒಂದು ಕಾನೂನನ್ನು ತಂದು ಜಾರಿಗೆ ಕೊಡುವ ಪ್ರಯತ್ನ ಮಾಡಬೇಕು. ಏತಕ್ಕೆಂದರೆ, ಇದನ್ನೇ ಆಸೆಯಾಗಿಟ್ಟುಕೊಂಡಿರುವ ಎಷ್ಟೋ ಗೇಣಿಯ ರೈತರುಗಳು ಇಲ್ಲದ ತೊಂದರೆಗಳಿಗೆ ಸಿಕ್ಕಿಕೊಂಡು ನರಳುತ್ತಿರುವವರಿಗೆ ಒಂದು ರಕ್ಷಣೆ ಕೊಡಬೇಕಾದರೆ ಈ ಕಾನೂನನ್ನು ಬೇಗ ತರಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ. ನನಗಾದರೂ ಅನಿಸುತ್ತದೆ ಮಾನ್ಯ ಕಂದಾಯ ಸಚಿವರು ಬಹಳ ಒಳ್ಳೆಯವರು.

ಆಡದೇ ಮಾಡುವವ ರೂಢಿಯೊಳಗೆ ಉತ್ತಮನು
ಆಡಿ ಮಾಡುವವನು ಮಧ್ಯಮ,
ಆಡಿ ತಾ ಮಾಡದವನು ಅಧಮನು, ಎನ್ನುವಂತೆ

ಇದರಲ್ಲಿ ಇವರು ಯಾವ ಪಂಗಡಕ್ಕೆ ಸೇರಿದವರೋ ನನಗಂತೂ ಗೊತ್ತಿಲ್ಲ. ಕಡೇ ಪಂಗಡಕ್ಕಂತೂ ಸೇರಿದವರಲ್ಲ ಎಂದು ನನಗಾದರೂ ಅನಿಸುತ್ತದೆ. ಆದುದರಿಂದ ಈ ಕಾನೂನನ್ನು ಇನ್ನು ಮುಂದಕ್ಕೆ ತರದೆ ಬೇಗನೆ ಮೂಲ ಭೂಸುಧಾರಣಾ ಕಾನೂನನ್ನು ತರಬೇಕು, ಇನ್ನು ಹೆಚ್ಚು ಸಮಯವನ್ನು ಇದಕ್ಕಾಗಿ ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ.

4-30 P.M.

Mr. DEPUTY SPEAKER.—The time allowed has expired. I will extend the time till 6 p.m.

ಶ್ರೀ ಬಿ. ಭಾಸ್ಕರಶೆಟ್ಟಿ.—ಈ ಕಾನೂನು ಮೂಲಕ ಭೂಸುಧಾರಣ ಮಸೂದೆ ಜಾರಿಗೆ ತರುವುದರಲ್ಲಿ ವಿಳಂಬ ಧೋರಣೆಯಿಂದಾಗಿ ಈ ರಾಜ್ಯದಲ್ಲಿಯ ಧನಿ ಮತ್ತು ಒಕ್ಕಲು ಸಂಬಂಧ ಕೆಟ್ಟು ಹೋಗಿದೆ. ಈ ಕಾನೂನಿನಿಂದ ರಕ್ಷಣೆ ಪಡೆಯತಕ್ಕ ಒಕ್ಕಲು ಆಗಲಿ ಧನಿ ಯಾಗಲಿ ಪ್ರತಿ ದಿವಸ ತನ್ನ ಕೆಲಸ ಬಿಟ್ಟು ವಕೀಲರ ಮನೆ ಸುತ್ತುವುದು ಮತ್ತು ಕೋರ್ಟಿಗೆ ತಿರುಗುವುದಾಗಿದೆ. ಭೂಸುಧಾರಣೆ ಕಾನೂನು ಇಂಥ ಸಂದರ್ಭದಲ್ಲಿ ಜಾರಿಗೆ ಬಾರದೇ ಇದ್ದುದರಿಂದ ನಮ್ಮ ದೇಶದಲ್ಲಿ ಇಂದು ಆಹಾರ ಧಾನ್ಯ ಅಭಾವದಿಂದ ದುರ್ಭಿಕ್ಷ ತಾಂಡವವಾಡುತ್ತಿದೆ. ಈ ಕಾನೂನು ಜಾರಿಗೆ ಬರುವುದು ತಡವಾದ ಮೂಲಕ ಆಹಾರ ಅಭಾವ ಉಂಟಾಗಿ ದೊಡ್ಡ ತೊಂದರೆಯಾಗಿದೆ ಎಂದು ಹೇಳ ಬಯಸುತ್ತೇನೆ. ಇಂದು ಧನಿ ಮತ್ತು ಒಕ್ಕಲು ಸಂಬಂಧ ಕೆಟ್ಟು ಹೋಗಿದೆ. ಆಹಾರ ಅಭಾವ ಉಂಟಾಗಿ ದೊಡ್ಡ ತೊಂದರೆಯಾಗಿದೆ. ಈ ತಿದ್ದುಪಡಿ ಮಸೂದೆಯ ಮೂಲಕ ಒಂದು ವರ್ಷ ವಾಯಿದೆ ಕೊಡಲಾಗುತ್ತಿದೆ. ಅದಕ್ಕೂ ಮುಂಚೆ ಭೂ ಸುಧಾರಣೆ ಕಾನೂನು ಜಾರಿಗೆ ತರುತ್ತೇವೆಂದು ಸಹ ಹೇಳಿದ್ದೀರಿ. ಆದುದರಿಂದ ತಾವು ಕೂಡಲೇ ಈ ಅಧಿವೇಶನದಲ್ಲಿಯೇ ಕಾನೂನು ತಂದು ಪಾಸು ಮಾಡಿ ಅದನ್ನು ಜಾರಿಗೆ ತರಲು ಕೂಡಲೇ ಪ್ರಯತ್ನ ಮಾಡಬೇಕು ಎಂದು ಒತ್ತಾಯ ಮಾಡಿ ನನ್ನ ಭಾಷಣ ಮುಗಿಸುತ್ತೇನೆ.

Sri K. S. SURYANARAYANA RAO (Mysore).—Sir, it is a happy thing that the Revenue Minister has assured us that the Land Reforms Act will come into force by at least June. The Statement of Objects and Reasons states that it is not likely to be passed by March 1965. I would only wish to add that this date should not be extended. Whatever be the difficulties, this should have the topmost priority

in the business of the House. The evil effects of the continuance of the present law of tenancy has been explanied by various speakers who preceded me but they failed to focus the case of the other class of people affected by the law. Mr. Kadidal Manjappa said that it cannot be against the Constitution. If I remember aright, this law was challenged in the High Court of Mysore. I understand the court passed no orders because Government appear to have stated that they would bring an amendment to clarify matters and therefore the court need not make a pronouncement. On that ground, a judicial decision was not given.

Here is a matter which affects the rights of individuals, whether he is a tenant or a landlord. These institutions have lived for thousands of years and if we are to change them, we must proceed in a manner as to cause the least harm to the largest number. Unfortunately what has happened is that neither the landlord nor the tenant is satisfied, nor is the Government happy. Therefore, for whose sake are we passing laws. Even in the matter of food production, the law has a bearing. Today, the landlord is not interested in his land beacause he is not sure whether his status would continue. The tenant is not interested because he is not sure if he would continue as tenant. The consequence is there is loss of production. Even though there has been increase in the acreage of land, the low yield per acre is perhaps responsible for the shortage of food. Therefore it is in the best interests of the country that the law should be enforced early. It has a demoralising effect on the society. There was a time when the ordinary man respected the law of the land. The tenant knew he had to pay the landlord the determined share. A sense of obligation prevailed. Today he feels he has the protection of the law. The landlord cannot evict him in default, though he may resort to other means to achieve his purpose. The consequence is that the landlord continues to pay revenue but does not get his due share. He may get decrees from courts in his favour but they cannot be executed or realised. He cannot resume the land as before and this encourages the tenant. Thus people have come to realize that they can take the law into their own hands or interpret the law as they like. This sort of temperment of defiance of law does not spell good to the country. Therefore, I would request the Minister to see that the law is implemented as expenditiously as possible so that things might get clear and there would be some finality. Let the Land Reforms Act be the last word on the subject. Today, there is an exemption to plantations. Now, even possession of 8 to 10 acres becomes a plantation. An ingenious landlord will try to interpret the law to his own advantage if there is delay and much time is allowed to elapse. Therefore from any aspect of the case, this does no good to any section of the community. I would appeal to the Minister, let this be the last extension asked for. Though he has asked for one year let it not go beyond July.

With these words I close my speech.

Sri V. S. PATIL (Belgaum-I).—This is a very small Bill which we come across almost every year since the formation of the State. Every year we are seeing an amendment being brought to the Act to extend the time year after year. As we all know the landlords cannot survive unless we extend the life of the tenancy laws. when we were in Bombay the Act was passed therein 1955 and it came into force in 1956. According to that Act a tenant who was on the land on that day, became the owner of the land from 1st April 1957. For that reason all the M. L. As from the Bombay Karnatak area asked for merger of those places in the Mysore State. They succeeded in it and they have now become successful in postponing or adjourning the implementation of that particular section, *i, e.*, tillers shall become the owners of the land. I have no idea of conditions that obtained in the old Mysore. But conditions in our area were apparent. During the last eight years it has become quite apparent that the conditions of the tenants in our areas are worse than that they were in Bombay. Many speakers have alluded to the fact that there are unauthorised occupants of the Government lands. I wonder how any Government can allow these things to continue without taking recourse to action allowed under the law. In Bombay area when we were in Bombay State, not even a single square foot of Government land could be occupied by anybody, however high a position one might occuppy. Whenever Government land had to be occupied by anybody he had to put in an application, execute an agreement and for that particular period only he could occupy the land. That is not the case here. From the speeches made by some hon'ble members, it is quite clear that the Government is not taking any steps at all and they are practically ignoring them. That clearly means either the Government is inefficient to enforce a law or...

Sri M. V. KRISHNAPPA.—The ex-Governments encouraged such things in order to grow more food.

Sri V. S. PATIL.—It does not mean that the land could be handed over to anybody.

Sri M. V. KRISHNAPPA.—That is what the Madras Government did. There is no land in Bombay for being given.

Sri V. S. PATIL.—The moment it came under your jurisdiction, that was your first duty. Our Government follow footsteps of anybody if they relate to slackness, negligence or carelessness but not in other matters.

The basic principle according to me so far as the land reforms are concerned, are social justice and increase in agricultural production. With these two important motives or aims the land reforms bills were introduced in various State Legislatures and they have passed and mostly they have implemented them also. But what about our State? Our State is so lagging behind in this matter. In the first place, as I have stated on the last occasion, a committee called as Jatti committee was appointed. They took some time and reported to this House. That report was discussed for several days and then a Bill was drafted and piloted in this House by Sri Kadidal Manjappa. For several days it was

discussed and ultimately it was passed in 1957. Eight years have elapsed and still the tenants have not taken advantage of these alleged land reforms. There is no security of tenure and they have not taken advantage of this Act. That is the reason why we are facing crisis in foodgrains. We were importing according to the recent reports, foodgrains to the extent of 150 crores a year. This year we have to import 400 crores worth of foodgrains. This is quite clear to show that the administrators, both in the State and Centre, are inefficient and have no forethought at all. They are taking our country to ruins. That is the only outcome which we have from these administrators.

The statement of objects and reasons, show that *status quo* has to be maintained for one year. I do not understand what is the meaning of *status quo* as understood by the Minister for Revenue. During these eight years the tenants have been turned out of land by various means and they are practically agricultural labourers now. If the intention is land to the tiller and not a lessee or tenant, this interpretation will have to be taken into consideration when the hon'ble Minister is going to bring amendments to the Land Reforms Bill. Tiller means persons who work on the land and it includes even an agricultural labourer. Land must be given to him who works because almost all tenants have been cleared during all these years. The word tiller should be given full scope of definition and the workers should be given opportunity to occupy the land. Unless this is done, I don't think that we will be doing social justice to those who are really downtrodden and who have to work in the land without any profit. The unemployment among these masses is horrible and even though they get some employment, it is not a full employment at all. In the agricultural field, the agricultural labourer never gets full employment; it is partial employment, and that is why the condition of these people is going down from bad to worse. Hon'ble Member Sri Kadidal Manjappa said that the implementation is slow. I do not know what he meant by the word ' slow '. When there is no implementation at all for the last eight years, I do not know why he should be so soft to say that the implementation is slow though the Government is not able to implement it. Perhaps, he might be afraid to criticise the Government because he is still in Congress, and that is why he said that the implementation is slow. There is absolutely no implementation at all. He further said that the tenants are frustrated. Why tenants ? Everybody is frustrated by the Congress. They always find out side-tracks and mislead the people. I am very sorry to say this, because it is day-to-day experience and our Minister, Sri Krishnappa, just like our Jahangir Badshah, never cares for anything He is enjoying life. He can be compared to Prince Saleem. These matters are very important from the national point of view, from the social justice point of view, and they must be vigorously implemented. I am sure that even though our Minister, Sri Krishnappa has promised to bring this Bill or Act into force by 1st June or July, it is impossible because our Session is going to close on the 3rd of April, and I don't think the Congress members will agree to sit

(SRI V. S. PATIL)

longer. No Bill is likely to come up or discussed or passed at all. So, my view is that when any Hon'ble Minister on behalf of the Government gives any promise on the floor of this House, it must be implemented. Otherwise, we must enact some law here to punish that Minister if he commits the breach of the promise given on the floor of this House. Then alone, there will be some restriction, some sanctity. Otherwise, these Ministers give promises to us on the floor of this House and they flout them easily as if nothing has happened. Therefore, my submission is, that in our area, *i.e.*, the Bombay-Karnatak area, the implementation of the Tenancy Laws in the Bombay State or Maharashtra State is complete and all tenants have become full owners or occupants of the lands occupied by them. They have already paid the prices that were fixed and there is no tenancy in the neighbouring area at all. On the contrary, when we cross that boundary we find land labourers who were under the same condition in 1957. So, this discrepancy must disappear as early as possible, and I should like to appeal to the Hon'ble Minister in all seriousness to see that these land laws are brought into force immediately, and whatever amendments he wants to make in the existing law, he may bring during the period of this Session and we will try to approve them if they are useful.

ಶ್ರೀ ಜಿ. ವಿ. ಗೌಡ.—ಮಾನ್ಯ ಸಭಾಪತಿಯವರೇ, ಮೈಸೂರು ರಾಜ್ಯದಲ್ಲಿ ಗೇಣಿಗೆ ಸಂಬಂಧಪಟ್ಟ ಹಾಗೆ ನಾಲ್ಕು ರೀತಿಯ ಕಾನೂನುಗಳಿವೆ. ಆ ಕಾನೂನುಗಳನ್ನು ಮತ್ತೆ ಮುಂದುವರಿಸಬೇಕೆಂದು ಈ ತಿದ್ದುಪಡಿಯನ್ನು ತಂದಿರುವುದು ನನಗಂತೂ ಬಹಳ ವಿಷಾದವನ್ನುಂಟುಮಾಡಿದೆ. ಏಕೆಂದರೆ ಬಹುಶಃ ನಮ್ಮ ಹೊಸ ಮೈಸೂರು ರಾಜ್ಯದಲ್ಲಿ ವಿಧ ವಿಧ ರೀತಿಯಲ್ಲಿದ್ದ ಎಲ್ಲಾ ಕಾನೂನುಗಳನ್ನೂ ಸಮನ್ವಯಮಾಡಿದ್ದಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಕೆಲವು ಕಾನೂನುಗಳು ಮಾತ್ರ ಸಮನ್ವಯ ಮಾಡಲ್ಪಟ್ಟು ಇನ್ನು ಕೆಲವು ಹಾಗೆಯೇ ಇವೆ. ವಿವಿಧ ಭಾಗಗಳಲ್ಲಿ ಬೇರೆ ಬೇರೆ ರೀತಿಯ ಕಾನೂನುಗಳಿವೆ, ಮದರಾಸಿನಲ್ಲಿರುವ ಕಾನೂನಿನ ಪ್ರಕಾರ 40 ರಷ್ಟು ಗೇಣಿ ಕೊಡಬೇಕು, ಬೊಂಬಾಯಿ ಕಡೆ ಕಂದಾಯದ 20 ರಷ್ಟು ಕೊಡಬೇಕು, ಈ ರೀತಿಯ ತಾರತಮ್ಯ ಇರಬಾರದು. ಸಮನ್ವಯವಾದ ಕಾನೂನನ್ನು ಜಾರಿಗೆ ತರಬೇಕು ಎಂದು ಹಿಂದೆಯೇ ನಾವು ಒತ್ತಾಯಮಾಡಿದ್ದೆವು. ಆಗ ಇಡೀ ರಾಜ್ಯಕ್ಕೆ ಏಕರೀತಿಯಲ್ಲಿ ಅನ್ವಯವಾಗುವ ಭೂ ಸುಧಾರಣಾ ಕಾನೂನನ್ನು ಮಾಡಬೇಕೆಂದಿದ್ದೇವೆ, ಅದಕ್ಕೊಂದು ಸಮಿತಿ ಮಾಡಿದ್ದೇವೆ, ಅದರ ವರದಿ ಬಂದಮೇಲೆ ಭೂಸುಧಾರಣಾ ಕಾನೂನನ್ನು ತಂದು ಆ ಮೂಲಕ ಸಮನ್ವಯವನ್ನು ಸಾಧಿಸುತ್ತೇವೆ ಎಂದು ಆಗ ಹೇಳಿದರು. ಆಗ ಸಂತೋಷವಾಯಿತು. ಆದರೆ ಇಲ್ಲಿಯವರೆಗೆ ಭೂಸುಧಾರಣಾ ಕಾನೂನನ್ನು ಕಾನೂನು ಕಡತಕ್ಕೆ ಏರಿಸಿರುವುದಿಲ್ಲ, ಅನೇಕ ಕಾರಣಗಳಿಂದ ಅದನ್ನು ಜಾರಿಗೆ ತರಲಿಲ್ಲ. ಬಹುಶಃ ನನಗನ್ನಿಸುವುದು ಅದನ್ನು ಜಾರಿಗೆ ತರಲು ಅಡಚಣೆಯಾಗಲಿ ಪ್ರಬಲ ಕಾರಣವಾಗಲಿ ಏನೂ ಇರಲಿಲ್ಲ. ರಾಜ್ಯಾಂಗ ದೃಷ್ಟಿಯಿಂದ ರೈತವಾರಿ ಜಮೀನುಗಳಿಗೆ ಈ ಶಾಸನ ಅನ್ವಯಿಸುವುದಿಲ್ಲ ಎಂದು ಸುಪ್ರೀಂ ಕೋರ್ಟು ಹೇಳಿದಾಗ ಅದಕ್ಕೆ ಧಕ್ಕೆ ಬರುವುದು, ಅದರಿಂದ ತಿದ್ದುಪಡಿ ಮಾಡಬೇಕು ಎಂಬ ಅಭಿಪ್ರಾಯ ಸರ್ಕಾರಕ್ಕಿತ್ತು. ಆದರೆ ಸಂಶಯವಿರುವ ಭಾಗ ಬಿಟ್ಟು ಬೇರೆ ಭಾಗಗಳಿಗೆ ಅನ್ವಯ ಮಾಡಬಹುದಾಗಿತ್ತು. ಪ್ಲಾನಿಂಗ್ ಕಮಿಷನ್ ಕೂಡ ಮಾಡಿರುವ ಕಾನೂನು ಅನೇಕ ಭಾಗಗಳಲ್ಲಿ ತಿದ್ದುಪಡಿಯಾಗಬೇಕು, ಅದನ್ನು ಮಾಡಿ, ಸರಿಯಾದ ರೀತಿಯಲ್ಲಿ ಮಾಡಿ ಎಂದು ಸೂಚನೆಯನ್ನು ಎರಡು ವರ್ಷಗಳ ಹಿಂದೆಯೇ ಕೊಟ್ಟಿದೆಯೆಂದು ನಾವು ತಿಳಿದಿದ್ದೇವೆ. ಈ ಸಂಬಂಧವಾಗಿ ಕಳೆದ ವರ್ಷ ಒಂದು ಪ್ರಶ್ನೆ ಹಾಕಿದೆ. ಪ್ಲಾನಿಂಗ್ ಕಮಿಷನ್ ಸೂಚನೆ ಕೊಟ್ಟಿರುವುದನ್ನು ಸಭೆಯ ಗಮನಕ್ಕೆ ತಂದರು. ಆದರೆ ಅದರ ಬಗ್ಗೆ ಸರ್ಕಾರ ಏನು ತೀರ್ಮಾನ ಮಾಡಿತೋ ಗೊತ್ತಿಲ್ಲ. ಬಹುಶಃ ಆ ಸೂಚನೆಯನ್ನು ಸಾರ್ವಜನಿಕರ ಪ್ರತಿಕ್ರಿಯೆಗಾಗಿ ಪ್ರಕಟಿಸಿದ್ದರೆ, ಅದಕ್ಕೆ ಅವಕಾಶ ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತೆಂದು ಕಾಣುತ್ತದೆ. ಪ್ಲಾನಿಂಗ್ ಕಮಿಷನ್ ಸೂಚನೆ ಬಗ್ಗೆ ಸಾರ್ವಜನಿಕರ ಪ್ರತಿಕ್ರಿಯೆ ಏನಿದೆ ಎಂಬುದು ಸರ್ಕಾರಕ್ಕೆ ಗೊತ್ತಿಲ್ಲ. ಆದರೂ ಈ ಶಾಸನ ಇಷ್ಟು ತಡವಾಗು

ತ್ತದೆ ಎಂದು ಗೊತ್ತಾದಾಗ ಸೆಕ್ಯೂರಿಟಿ ಆಫ್ ಟೆನ್ಯೂರ್, ಫೇರ್ ರೆಂಟ್— ಈ ವಿಚಾರಗಳನ್ನಾದರೂ ಸಮನ್ವಯ ಮಾಡುವ ಕಾನೂನನ್ನಾದರೂ ತರಲು ವಿಚಾರ ಮಾಡಿದ್ದರೆ ಚೆನ್ನಾಗಿತ್ತು, ಅದನ್ನೂ ಸಹ ಮಾಡಿಲ್ಲ. ಆದ್ದರಿಂದ ಇಂದು ಆಹಾರದ ಉತ್ಪತ್ತಿಗೆ ಬಹಳ ಧಕ್ಕೆ ಒದಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದೆಂದು ನಾನು ತಿಳಿದುಕೊಂಡಿದ್ದೇನೆ. ಮೊನ್ನೆ ಸ್ವಲ್ಪ ದಿವಸಗಳ ಕೆಳಗೆ ರಾಷ್ಟ್ರಾಧ್ಯಕ್ಷರು ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಅನೇಕ ರಾಜ್ಯಗಳವರು ಭೂಸುಧಾರಣಾ ಮಸೂದೆಯನ್ನು ಜಾರಿಗೆ ತರುವುದರಲ್ಲಿ ಹಿಂದುಳಿದಿದ್ದಾರೆ ಎಂದು ಹೇಳಿದ್ದಾರೆ. ವೆಸ್ಟೆಡ್ ಇಂಟರೆಸ್ಟ್‌ನಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕೆಲವು ಕಾರಣಗಳಿಂದ ನಿಧಾನ ಮಾಡಿದ್ದಾರೆಂಬ ಅಭಿಪ್ರಾಯ ಬರುವಂತೆ ಅವರು ಹೇಳಿದ್ದಾರೆ.

5-00 P. M.

ಇಷ್ಟೊಂದು ತೊಂದರೆ ಅಥವಾ ಅನಿವಾರ್ಯ ಏನಿದೆ ಎನ್ನುವುದು ಅರ್ಥವಾಗುತ್ತಿಲ್ಲ. ಬಹುಶಃ ಮೈಸೂರು ಕಾನೂನುಗಳ ಚರಿತ್ರೆಯಲ್ಲಿ ಈ ರೀತಿ ಒಂದು ಕಾನೂನನ್ನು ಮಾಡಿ, ಜಾರಿಗೆ ತರದೆ ಅದಕ್ಕೆ ತಿದ್ದುಪಡಿಯನ್ನು ತರತಕ್ಕದ್ದು ಭೂಸುಧಾರಣಾ ಕಾನೂನು ಮೊದಲನೆಯದು ಎಂದು ನನಗಾದರೂ ಅನ್ನಿಸುತ್ತದೆ.

ಗೇಣಿದಾರರಿಗೆ ತಾತ್ಕಾಲಿಕವಾದ ಪ್ರೊಟೆಕ್ಷನ್ ಮುಂದುವರಿಸಿಕೊಂಡು ಬರಲು ಈ ತಿದ್ದುಪಡಿಯನ್ನು ತಂದಿದ್ದಾರೆಂದು ಹೇಳಿದರು. ನಮ್ಮ ಹಿಂದೂ ಸಂಪ್ರದಾಯ ಧರ್ಮಕ್ಕೆ, ನ್ಯಾಯಕ್ಕೆ ಮನ್ನಣೆ ಕೊಡಬೇಕು, ಗೌರವ ಕೊಡಬೇಕು ಎನ್ನುವುದೇ ಆಗಿದೆ. ಇದು ಹಿಂದಿನಿಂದಲೂ ಬೆಳೆದುಕೊಂಡು ಬಂದಿದೆ. ರೈತರ ಮತ್ತು ಭೂ ಮಾಲೀಕರ ಬಾಂಧವ್ಯಕ್ಕೆ ತೊಂದರೆ ತರುವ ರೀತಿಯಲ್ಲಿ ಪರಿಣಾಮವಾಗಿದೆ ಎಂದರೆ ತಪ್ಪಾಗುವುದಿಲ್ಲ. ಮದ್ರಾಸ್ ಕಡೆ ಯಾವ ಗೇಣಿದಾರನೂ ಗೇಣಿಯ ಬಾಕಿಯನ್ನು ನಿಲ್ಲಿಸಿಕೊಂಡಿಲ್ಲ. ಭೂ ಮಾಲೀಕ ಏನು ಪಡೆಯಬೇಕೋ ಅದಕ್ಕಿಂತಲೂ ಹೆಚ್ಚು ಪಡೆಯುತ್ತಿದ್ದಾನೆ. ರೈತರಿಗೆ ತಿಳುವಳಿಕೆ ಇಲ್ಲದೆ ಕೊಡುತ್ತಿದ್ದಾರೆಂದಲ್ಲ. ನಾನು ಕೊಡತಕ್ಕ ಗೇಣಿಯನ್ನು ಕೊಡದೆ ಹೋದರೆ, ಮಾತನಾಡಿರುವ ಪ್ರಕಾರ ಗೇಣಿಯನ್ನು ಸಲ್ಲಿಸದೆ ಹೋದರೆ, ಯಾವುದಾದರೂ ಮುಖೇನ ನನಗೆ ತೊಂದರೆಯನ್ನುಂಟುಮಾಡುತ್ತಾರೆ ಎನ್ನುವ ಭಯ ಅವರಿಗೆ ಇದೆ. ನೂರಕ್ಕೆ 40 ಭಾಗ ಕೊಡಬೇಕು ಎಂದು ಇದ್ದರೂ ಕೂಡ ಅವರು 60 ಭಾಗವನ್ನು ಪಡೆಯುತ್ತಾರೆ. ಯಾವ ಅಧಿಕಾರಿಗಳು ಈ ಕಾನೂನನ್ನು ನಡೆಸಬೇಕೋ ಅವರು ಕೂಡ ಗೇಣಿದಾರನಿಗೆ ರಕ್ಷಣೆಗೆ ಹೋಗತಕ್ಕ ವಾತಾವರಣ ನಿರ್ಮಾಣವಾಗಿಲ್ಲ.

ಲೆವಿ ಬೇಸಿಸ್ ಮೇಲೆ ಬತ್ತವನ್ನು ಕೊಡಬೇಕೆಂದು ಇದೆ. ಗೇಣಿದಾರರಿಂದ ಬತ್ತವನ್ನು ಭೂಮಾಲೀಕರು ವಸೂಲು ಮಾಡಿ ತಾವು ಕೊಟ್ಟ ರೀತಿಯಲ್ಲಿ ತಹಸೀಲ್ದಾರರ ಹತ್ತಿರ ಲೆಕ್ಕ ಬರೆಸುತ್ತಾರೆ. ಈ ರೀತಿ ಮಾಡುತ್ತಿರುವ 20 ನಿದರ್ಶನಗಳು ನನ್ನ ಕಣ್ಣಿಗೆ ಬಿದ್ದಿವೆ. ನಮ್ಮ ತಹಸೀಲ್ದಾರರುಗಳು ಏನು ಕೆಲಸ ಮಾಡುತ್ತಾರೆ ಎಂದರೆ ಸಕ್ಕರೆ ಹಂಚಿಕೆ ಮಾಡುವುದು, ಸಿಮೆಂಟ್ ಹಂಚಿಕೆ ಮಾಡುವುದು ಮತ್ತು ಈಚೆಗೆ ಬತ್ತವನ್ನು ವಸೂಲ್ಮಾಡುವುದು ಇಷ್ಟನ್ನು ಮಾತ್ರ ಮಾಡುತ್ತಿದ್ದಾರೆ. ಗೇಣಿದಾರರಿಗೆ, ರೈತರಿಗೆ, ಕೂಲಿಕಾರರಿಗೆ ಯಾವ ರೀತಿ ನ್ಯಾಯವನ್ನು ದೊರಕಿಸಿಕೊಡಬಹುದೋ, ಆ ರೀತಿ ಕೆಲಸ ಮಾಡುತ್ತಿಲ್ಲವೆಂದರೆ ತಪ್ಪಾಗಲಾರದು. ಅಂಥ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ. ಗೇಣಿದಾರರಿಗೆ ಸೇರಿದ ಬತ್ತವನ್ನು ಕೊಟ್ಟರೂ ಸಹ ಅವರ ಹೆಸರು ಇರುವುದಿಲ್ಲ. ಈ ವಿಷಯ ತಹಸೀಲ್ದಾರರಿಗೂ ಗೊತ್ತಿರುತ್ತದೆ. ಆದರೂ ಸಹ ಈ ರೀತಿಯ ವರ್ತನೆಯಾಗುವುದಾದರೆ ಮುಂದೆ ಗೇಣಿದಾರರಿಗೆ ಯಾವ ರೀತಿಯ ರಕ್ಷಣೆ ದೊರಕುತ್ತದೆ ಎಂದು ಮಾನ್ಯ ಸಚಿವರನ್ನು ಕೇಳಬೇಕಾಗಿದೆ.

ಬಗರ್ ಹುಕುಂ ಸಾಗುವಳಿ ವಿಚಾರ. ಹಿಂದೆ ಹೆಚ್ಚು ಆಹಾರವನ್ನು ಬೆಳೆಯಬೇಕು ಎನ್ನುವ ಯೋಜನೆಯಲ್ಲಿ ಬೇಕಾದಷ್ಟು ಜನರು ಭೂಮಿಯನ್ನು ಆಕ್ರಮಿಸಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಮಾಡಿದರು. ಅದಾದ ಮೇಲೆ ಯಾರಿಗೆ ಜಮೀನು ಇಲ್ಲವೋ, ಅವರಿಗೆ ಜಮೀನು ಕೊಡಬೇಕೆಂದು ಐದಾರು ವರ್ಷ ಯಾರು ವ್ಯವಸಾಯವನ್ನು ಮಾಡಿದ್ದಾರೆಯೋ ಅಂಥವರಿಗೆ ಆ ಜಮೀನನ್ನು ಕೊಡಬೇಕೆಂದು ಮಾಡಿದರು. ಇದರ ಪರಿಣಾಮವಾಗಿ ನಮ್ಮ ತಾಲ್ಲೂಕಿನಲ್ಲಿ 30 ಸಾವಿರ ಎಕರೆ ಈ ರೀತಿ ಆಕ್ರಮಣವಾಗಿದ್ದುದರಲ್ಲಿ 20–25 ಸಾವಿರ ಎಕರೆಯನ್ನು ರೆಗ್ಯುಲರೈಸ್ ಮಾಡಿದ್ದಾರೆ. ಇನ್ನು ಐದಾರು ಸಾವಿರ ಎಕರೆ ರೆಗ್ಯುಲರೈಸ್ ಆಗಿಲ್ಲ. ಯಾರು ಹೆಚ್ಚು ಜಮೀನನ್ನು ಇಟ್ಟುಕೊಂಡಿದ್ದಾರೆಯೋ ಅಂಥವರು ಈ ಜಮೀನನ್ನು ಆಕ್ರಮಣ ಮಾಡಿದ್ದಾರೆ. ಅವರನ್ನು ಎವಿಕ್ಟ್ ಮಾಡಲಾಗುವುದು ಎಂದು ಸರ್ಕಾರ ಭರವಸೆಯನ್ನು ಕೊಟ್ಟಿದ್ದರೂ ಸಹ ಅದು ಇನ್ನೂ ಈಡೇರಿಲ್ಲ. ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಶ್ರೀಮಂತ ಪಟ್ಟಾದಾರರು ಸುಮಾರು 1,500 ಜನ ಈ ಭೂಮಿ

(ಶ್ರೀ ಜಿ. ವಿ. ಗೌಡ).

ಯನ್ನು ಅಕ್ರಮಣ ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆಂದು ಹೇಳಿದರು. ಅವರಿಂದ ಈ ಭೂಮಿಯನ್ನು ತಪ್ಪಿಸಿ ಕಾನೂನು ಪ್ರಕಾರ ಯಾರಿಗೆ ಜಮೀನು ಕೊಡಬೇಕೋ ಅಂಥವರಿಗೆ ಕೊಡ ತಕ್ಕ ವಿಚಾರದಲ್ಲಿ ಯಾವ ರೀತಿ ಮಾಡುತ್ತಾರೆ ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕು.

ಕೆಲವರು ರೈತರು ಅಥವಾ ಭೂಮಾಲೀಕರು ಅನೇಕ ಜಮೀನನ್ನು ಇಟ್ಟುಕೊಂಡಿರುತ್ತಾರೆ. ಅದು ವ್ಯವಸಾಯಕ್ಕೆ ಯೋಗ್ಯವಾದ ಜಮೀನಾಗಿರುತ್ತದೆ. ಅಂಥ ಜಮೀನನ್ನು ವ್ಯವಸಾಯಕ್ಕೆ ತರದೆ ಇರತಕ್ಕ ನಿದರ್ಶನಗಳು ಬೇಕಾದಷ್ಟಿವೆ. ಅದನ್ನೆಲ್ಲ ವ್ಯವಸಾಯಕ್ಕೆ ತರುವಂತೆ ಮಾಡತಕ್ಕ ಕೆಲಸಕ್ಕೆ ಸರ್ಕಾರ ಇನ್ನೂ ಗಮನ ಕೊಟ್ಟಿಲ್ಲ. ಇದು ಬಹಳ ಆತುರವಾಗಿ ಆಗಬೇಕಾದ ಕೆಲಸ. ಈ ಸಂಬಂಧದಲ್ಲಿ ಒಳ್ಳೆಯ ಜಮೀನನ್ನು ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ಒಂದೆರಡು ವರ್ಷದಲ್ಲಿ ವ್ಯವಸಾಯಕ್ಕೆ ತರದೆ ಇದ್ದರೆ ಅದರ ಪರಿಣಾಮ ನೆಟ್ಟಗಾಗುವುದಿಲ್ಲ. ಸರ್ಕಾರ ಅದನ್ನು ಸ್ವಾಧೀನ ಪಡಿಸಿಕೊಳ್ಳುತ್ತದೆ ಎನ್ನುವ ನೀತಿಯನ್ನು ಇಟ್ಟುಕೊಂಡು ಆ ರೀತಿ ರೆವೆನ್ಯೂ ಅಧಿಕಾರಿಗಳು ಎಚ್ಚರಿಕೆ ಯನ್ನು ಕೊಟ್ಟು ಆದಷ್ಟು ಬೇಗ ಜಮೀನನ್ನು ವ್ಯವಸಾಯಕ್ಕೆ ತರುವ ರೀತಿಯಲ್ಲಿ ಮಾಡಬೇಕು. ಇಲ್ಲದೆ ಹೋದರೆ ಕಷ್ಟವಾಗುತ್ತದೆ. ಸರ್ಕಾರ ಯಾವುದಾದರೂ ಒಂದು ಕಾರ್ಯಕ್ರಮವನ್ನು ಈ ಸಂಬಂಧದಲ್ಲಿ ಹಾಕಿಕೊಳ್ಳಬೇಕು. ಈ ರೀತಿಯಾಗಿ ಮಾಡುವುದರಿಂದ ಆಹಾರದ ಉತ್ಪನ್ನವೂ ಹೆಚ್ಚಿಗೆ ಆಗುತ್ತದೆ ಎನ್ನುವ ವಿಚಾರ ನಮಗೆ ಗೊತ್ತಾಗುತ್ತದೆ.

ಭೂಸುಧಾರಣಾ ಮಸೂದೆಯನ್ನು ಸರ್ಕಾರ ಮನಸ್ಸು ಮಾಡಿದ್ದರೆ ಕಾರ್ಯಗತ ಮಾಡ ಬಹುದಾಗಿತ್ತು. ಅದರಲ್ಲಿ ಏನಾದರೂ ಲೋಪದೋಷಗಳಿದ್ದರೆ ಮುಂದೆ ಬದಲಾವಣೆ ಮಾಡುವು ದಕ್ಕೆ ಅವಕಾಶವಾಗುತ್ತಿತ್ತು. ಬೇಕಾದಷ್ಟು ಶಾಸನಗಳನ್ನು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಕೊಟ್ಟ ತೀರ್ಮಾನಕ್ಕನುಗುಣವಾಗಿ ನಾವು ಬದಲಾವಣೆಗಳನ್ನು ಮಾಡಿಕೊಂಡಿದ್ದೇವೆ. ಇದರಲ್ಲಿಯೂ ಹಾಗೆಯೇ ಮಾಡಿದ್ದರೆ ಅಂಥ ವೈಪರೀತ್ಯವೇನೂ ಆಗುತ್ತಿರಲಿಲ್ಲ. ಆದರೆ ಸರ್ಕಾರಕ್ಕೆ ಇತ್ತ ಕಡೆ ಮನಸ್ಸು ಏಕೆ ಬರಲಿಲ್ಲವೋ ಗೊತ್ತಾಗುತ್ತಿಲ್ಲ. ಅನಿವಾರ್ಯವಿಲ್ಲದೆ ಇರತಕ್ಕ ಪರಿಸ್ಥಿತಿ ಯಲ್ಲಿ ಅಗತ್ಯವಿಲ್ಲದ ಇರುವ ಕಾನೂನುಗಳನ್ನು ಮಾಡಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯ ಕಾನೂನು ಆಗಿದೆ. ಈ ವಿಶ್ವವಿದ್ಯಾನಿಲಯದ ನಿರ್ಮಾಣ ಮಾಡುವುದು ಅನಿವಾರ್ಯವಾಗಿದೆಯೇ ಎಂದು ನಾನು ಕೇಳಿದೆ. ರೈತನಾದವನು ಆಹಾರೋತ್ಪತ್ತಿಯನ್ನು ಹೆಚ್ಚು ಮಾಡಬೇಕು. ಇದಕ್ಕೆ ಸರ್ಕಾರ ಹೆಚ್ಚು ಆಸಕ್ತಿ ತೋರಿಸುತ್ತಿಲ್ಲ ಎಂದು ಕೇಳುವುದು ಸಹಜವಾಗಿದೆ. ಈಗ ತಂದಿರುವ ತಿದ್ದುಪಡಿ ಯಿಂದ ಕೆಲವು ಕಾನೂನುಗಳನ್ನು ಮುಂದುವರಿಸಿಕೊಂಡು ಹೋಗುವುದು ಸಂಪ್ರದಾಯವಿರುದ್ಧ ವಾಗಿದೆ ಎಂದು ಹೇಳುತ್ತೇನೆ.

ನಾಲ್ಕೈದು ವರ್ಷಗಳಿಂದ ಗೇಣಿ ಶಾಸನವನ್ನು ಮುಂದುವರಿಸುತ್ತಿದ್ದಾರೆ. ಹಾಗೆಯೇ ಗೇಣಿದಾರರ ರಕ್ಷಣೆಗೆ ಸಂಬಂಧಪಟ್ಟ ಕಾನೂನನ್ನು ಮುಂದುವರಿಸಿಕೊಂಡು ಬರುತ್ತಿದ್ದರು. ಈ ವರ್ಷ ಎರಡನ್ನೂ ಸೇರಿಸಿ ಒಂದೇ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ನಾವು ರಾಜ್ಯಾಂಗದ ದೃಷ್ಟಿಯಿಂದ ನೋಡುವುದಾದರೆ, ಒಬ್ಬ ಭೂಮಾಲೀಕ ತನ್ನ ಜಮೀನನ್ನು ಗೇಣಿಗೆ ಕೊಟ್ಟಿರುತ್ತಾನೆ. ಅವನು ತನ್ನ ಗೇಣಿಯನ್ನು ಪಡೆಯುವುದಕ್ಕೆ ಕೋರ್ಟಿಗೆ ಹೋಗುವುದಕ್ಕೆ ಅವಕಾಶವಿದೆ. ಸುಪ್ರೀಂ ಕೋರ್ಟಿನಲ್ಲಿ ಬಿಹಾರಕ್ಕೆ ಸಂಬಂಧಪಟ್ಟ ಒಂದು ಕೇಸಿನಲ್ಲಿ ಪರಿಹಾರ ಕೊಡದೆ ಯಾವುದನ್ನೂ ತೆಗೆದು ಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ನಿರ್ದಿಷ್ಟವಾದ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇಲ್ಲದೆ ಇದ್ದರೆ ನಮ್ಮ ದೇಶ ರಷ್ಯ ದೇಶದ ಮಾದರಿಯಲ್ಲಿ ಆಗುತ್ತಿತ್ತೊ ಏನೋ ? ಒಬ್ಬರಿಂದ ಏನಾದರೂ ಒತ್ತಾಯ ಮಾಡಿ ತೆಗೆದುಕೊಳ್ಳತಕ್ಕದ್ದು, ಪರಿಹಾರವಿಲ್ಲದೆ ತೆಗೆದುಕೊಳ್ಳತಕ್ಕದ್ದು ನಮ್ಮ ಧರ್ಮಕ್ಕೆ ಬಾಹಿರ ವಾದುದು, ಕಾನೂನಿಗೂ ಬಾಹಿರವಾದುದು, ರಾಜ್ಯಾಂಗ ತತ್ವಗಳಿಗೂ ಬಾಹಿರವಾದುದು. ಈ ದೃಷ್ಟಿಯಿಂದ ಎಷ್ಟರಮಟ್ಟಿಗೆ ಇದನ್ನು ಅಳವಡಿಸಿಕೊಂಡು ಈ ಪರಿಸ್ಥಿತಿಯನ್ನು ಸುಧಾರಣೆ ಮಾಡ ಬೇಕು ಎನ್ನುವುದನ್ನು ಮಾನ್ಯ ಸಚಿವರು ಯೋಚನೆ ಮಾಡಬೇಕು.

ಕಳೆದ ವರ್ಷವೂ ಕೂಡ ಆದಷ್ಟು ಬೇಗ ಭೂಸುಧಾರಣಾ ಮಸೂದೆಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಭರವಸೆಯನ್ನು ಕೊಟ್ಟು ಇನ್ನೂ ಜಾರಿಗೆ ತಂದಿಲ್ಲ. ಭೂಸಾಧಾರಣಾ ಮಸೂದೆ ಯಲ್ಲಿ ಗೇಣಿದಾರನಿಗೆ ರಕ್ಷಣೆ ಕೊಡತಕ್ಕ ಅಂಶವಿದೆ. ಆದರೆ ಇದನ್ನು ನಿಧಾನ ಮಾಡುವುದರಿಂದ ಅನೇಕ ಜನ ಗೇಣಿದಾರರಿಗೆ ಅನಾನುಕೂಲವುಂಟಾಗುವ ಪರಿಸ್ಥಿತಿ ಇದೆ. ಇವತ್ತಿನ ದಿವಸ ಭೂಸುಧಾ ರಣಾ ಮಸೂದೆಯನ್ನು ಮುಂದೂಡುತ್ತಿರುವುದರಿಂದ ಎರಡು ಲಕ್ಷ ಗೇಣಿದಾರರಿಗೆ ತೊಂದರೆ ಯಾಗತಕ್ಕ ಪರಿಸ್ಥಿತಿ ಇದೆ ಎಂದು ಮಾನ್ಯ ಸದಸ್ಯರಾದ ಕಡಿದಾಳ್ ಮಂಜಪ್ಪನವರು ಹೇಳಿದರು. ಏಕೆಂದರೆ, ಈ ಕಾನೂನಿನಲ್ಲಿ ಏನು ಲ್ಯಾಕೂನ ಇದೆ ಅವೆಲ್ಲಾ ಅವಕಾಶವನ್ನು ಉಪಯೋಗಿಸಿ ಕೊಂಡು ಕಾನೂನಿನ ಹಿಡಿತಕ್ಕೆ ಸಿಕ್ಕದೇ ಇರುವ ರೀತಿಯಲ್ಲಿ ಜನ ಮಾಡಿಕೊಂಡಿದ್ದಾರೆಂಬುದಾಗಿ

ಮಾನ್ಯ ಸಚಿವರು ತಿಳಿದುಕೊಂಡಿದ್ದಾರೋ ಇಲ್ಲವೋ ನನಗಂತೂ ಗೊತ್ತಿಲ್ಲ. ಗೇಣೀದಾರರಿಗೆ ರಕ್ಷಣೆ ಕೊಡಬೇಕು ಫೇರ್‌ರೆಂಟ್ ಏನು ನಿಗದಿಮಾಡುತ್ತಾರೋ ಅದು ಸರಿಯಾಗಿ ಆಗಬೇಕು. ಇಷ್ಟೊಂದು ಕೆಲಸವಾಗಬೇಕಾದರೆ ಪರಿಸ್ಥಿತಿ ನಿರ್ದಿಷ್ಟವಾಗಬೇಕು. ಆಗ ತನ್ನ ಹಕ್ಕುಬಾಧ್ಯತೆಗಳು ಏನೆಂಬುದು ಗೊತ್ತಾಗುತ್ತದೆ. ಆಗ ವರ್ಷೇ ವರ್ಷೇ ಕೆಲಸಗಳನ್ನು ಸರಿಯಾಗಿ ಮಾಡುವುದಕ್ಕೆ ಒಂದು ವಾತಾವರಣ ನಿರ್ಮಾಣವಾಗುತ್ತದೆ. ಈ ದೃಷ್ಟಿಯಿಂದ ಇದಕ್ಕೆ ಇನ್ನೂ ಒಂದು ವರ್ಷಕಾಲ ಮುಂದುವರಿಸುವ ಅವಕಾಶವನ್ನು ಕೊಡುವುದರಿಂದ ಅದರ ಪರಿಣಾಮ ನೆಟ್ಟಗೆ ಆಗುವುದಿಲ್ಲವೆಂದು ನಾನು ಹೇಳುತ್ತೇನೆ. ಯೋಜನಾ ಆಯೋಗದವರು ಲ್ಯಾಂಡ್ ರಿಫಾರ್ಮ್ಸ್ ಬಿಲ್ ಚರ್ಚೆಯಾಗುವ ಕಾಲದಲ್ಲಿ ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ. ಅನೇಕ ವಿಷಯಗಳನ್ನೂ ಸಹ ಈ ಸಭೆಯ ಮಾನ್ಯ ಸದಸ್ಯರು ಆ ಕಾಲದಲ್ಲಿ ಹೇಳಿದ್ದಾರೆ. ಆಗ ಏನು ಸೂಚನೆಗಳನ್ನು ಕೊಟ್ಟಿದ್ದಾರೋ ಅವಕ್ಕನುಗುಣವಾಗಿ ಕ್ರಮವನ್ನು ತೆಗೆದುಕೊಳ್ಳಲು ಹೊರಟಾಗ ಸರ್ಕಾರ ಏಕೋ ಅವನ್ನು ಒಪ್ಪಲಿಲ್ಲ. ಮಧ್ಯೆ ಈಗ ಈ ಮಸೂದೆ ಬಂದಿದೆ, ಬರಲಿ. ಈಗಲೂ ಕೂಡ ಸರ್ಕಾರ ಸಂಬಂಧಪಟ್ಟ ನೀತಿ ನಿಯಮಗಳನ್ನು ಮಾಡಿದರೆ ನಾಳೆಯೇ ಲ್ಯಾಂಡ್ ರಿಫಾರ್ಮ್ಸ್ ಆಕ್ಟನ್ನು ಜಾರಿಗೆ ಕೊಡಬಹುದು. ಈ ಮಧ್ಯೆ ತಿದ್ದುಪಡಿಯನ್ನೂ ಸಹ ಜಾರಿಗೆ ತರಬಹುದು. ಒಂದು ಕಾನೂನನ್ನು ಮಾಡಿದ ಮೇಲೆ ಅದನ್ನು ಜಾರಿಗೆಕೊಟ್ಟು ಅದು ನಡೆಯಕ್ಕ ಕಾಲದಲ್ಲಿ ಅದರಲ್ಲಿ ಏನೊಂದು ಕಷ್ಟವನ್ನು ಎದುರಿಸಬೇಕಾಗಿದೆ ಎಂಬುದನ್ನು ಅರಿತು ತಿದ್ದುಪಡಿಯನ್ನು ಸೂಚನೆ ಮಾಡತಕ್ಕದ್ದು ಬಹಳ ಒಳ್ಳೆಯದು. ನಾನಾದರೂ ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ರೆವಿನ್ಯೂ ಸಚಿವರು ಆಸಕ್ತಿಯಿಂದ ಇದ್ದರೆ ರೈತರಿಗೆ ಖಂಡಿತವಾಗಿ ನ್ಯಾಯ ದೊರಕುತ್ತದೆ. ಆದರೆ ಅವರು ಒಬ್ಬರು ಮಾತ್ರ ಆಸಕ್ತಿ ವಹಿಸಿದರೆ ಸಾಕಾಗುವುದಿಲ್ಲ. ಇದು ಬಹಳ ದೊಡ್ಡ ಕೆಲಸ. ಬಹಳವಾಗಿ ಸುಧಾರಣೆ ಮಾಡಲಿಕ್ಕೇ ಹೊರಟಿದ್ದಾರೆ. ಆ ರೀತಿಯಾಗಿ ಸುಧಾರಣೆ ಮಾಡತಕ್ಕ ಕಾಲದಲ್ಲಿ ಪ್ರತಿಯೊಬ್ಬರೂ ಸಹಕಾರ ಕೊಡದಿದ್ದರೆ, ಅದೇ ಪ್ರಮಾಣದಲ್ಲಿ ಆಸಕ್ತಿಯನ್ನು ತೋರಿಸದೇ ಇದ್ದರೆ ಕಷ್ಟವಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಆಸಕ್ತಿ ಎಲ್ಲಾ ಕಡೆಗಳಿಂದಲೂ ಬರಬೇಕು. ಆ ರೀತಿ ಬಂದರೆ ಮಾತ್ರ ಈ ಕೆಲಸ ಸಾಧ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಈ ವಿಚಾರದಲ್ಲಿ ಯಾರಾದರೂ ಕೆಲವರು ದಾಕ್ಷಿಣ್ಯಕ್ಕೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಒಳಗಾಗುವುದಾದರೆ, ಇದು ಖಂಡಿತವಾಗಿ ಯಶಸ್ವಿಯಾಗುವುದಿಲ್ಲವೆಂದು ಮತ್ತೊಮ್ಮೆ ನಾನು ಹೇಳಬೇಕಾಗಿದೆ. ಇಲ್ಲದಿದ್ದರೆ ಭೂ ಸುಧಾರಣೆ ಮಾಡುವ ಕೆಲಸ ನಮ್ಮಲ್ಲಿ ಆಗುವುದಿಲ್ಲವೆಂದು ಹೇಳಿ ಬಿಟ್ಟುಬಿಡೋಣ. ಈಗ security of tenure ಎಂಬುದಾಗಿ ಮದ್ರಾಸ್‌ನವರು ಮಾಡಿದ್ದಾರೆ. ಆ ರೀತಿ ನಾವು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೇ ? ಅಲ್ಲಿ ಗೇಣೀದಾರರಿಗೆ ಕೊಡಬೇಕಾದ ರಕ್ಷಣೆಯನ್ನು ಕೊಟ್ಟಿದ್ದಾರೆ. ಫೇರ್ ರೆಂಟ್ ವಿಧಾಯಕ ಮಾಡಿಕೊಟ್ಟಿದ್ದಾರೆ. ಪರಸ್ಪರ ಬಾಂಧವ್ಯ ಚೆನ್ನಾಗಿ ನಡೆಯಲಿ ಎಂಬುದಾಗಿ ಆ ಒಂದು ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ. ನಾವೂ ಆರೀತಿ ಇಲ್ಲಿ ಮಾಡಿ ಸೋಣ. ಫಲಿತಾಂಶ ಒಳ್ಳೆಯದಾಗುತ್ತದೆ. ಈಗ ಇಲ್ಲಿ ಭೂಸುಧಾರಣೆ ಮಾಡುತ್ತೇವೆ. ಭೂಮಾಲೀಕರಿಗೂ ಮತ್ತು ರೈತರಿಗೂ ಒಂದು ಮಧುರ ಬಾಂಧವ್ಯವನ್ನುಂಟುಮಾಡಿ ಅದನ್ನು ಬೆಳೆಸಬೇಕಾದರೆ, ಅಂತಹ ಒಂದು ಧೋರಣೆಯನ್ನು ಉಂಟು ಮಾಡಬೇಕಾದರೆ, ಎಲ್ಲರೂ ಕಲೆತು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು ಎಂಬುದಾಗಿ ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಈಗಿನ ವ್ಯವಸಾಯ ರಂಗದಲ್ಲಿ ದುಡಿಯುತ್ತಾ ಇರುವ ವ್ಯವಸಾಯಗಾರರು ಮತ್ತು ಕೂಲಿಗಾರರು ಏನು ಇದ್ದಾರೆ ಅವರ ಸಂಘಟನೆ ಇನ್ನೂ ಆಗಿಲ್ಲ. ಅವರ ಕೂಗು ಸರ್ಕಾರಕ್ಕೆ ಕೇಳುತ್ತಾ ಇಲ್ಲವೆಂದು ನಾನು ಹೇಳಬೇಕಾಗಿದೆ. ಇಷ್ಟೊಂದು ಜನಸಂಖ್ಯೆ ಇರುವ ವ್ಯವಸಾಯಗಾರರಿಗೆ ಭೂಸುಧಾರಣೆಯನ್ನು ಜಾರಿಗೆ ಕೊಡತಕ್ಕ ಕಾಲದಲ್ಲಿ ಸಂಪೂರ್ಣವಾಗಿ ನ್ಯಾಯ ದೊರಕಿಸಿಕೊಡಬೇಕಾದುದು ಅನಿವಾರ್ಯ ಮತ್ತು ಅತ್ಯಾವಶ್ಯಕ. ಈ ಕಾರ್ಯಕ್ಕಾಗಿ ಎಲ್ಲರೂ ಬಹಳ ಆಸಕ್ತಿಯಿಂದ ದುಡಿಯಬೇಕು. ಮಾನ್ಯ ಸಚಿವರು ಈ ವಿಚಾರದಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಬೇಕು. ಸರ್ಕಾರದವರು ಈ ಭೂಸುಧಾರಣೆಯನ್ನು ಜಾರಿಗೆ ತರುವ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ, ಬೇಗನೆ ಇದನ್ನು ಕಾರ್ಯಗತ ಮಾಡುತ್ತಾರೆಂದೂ ನಂಬಿ ಇದರಲ್ಲಿರತಕ್ಕ ನ್ಯೂನತೆಗಳನ್ನು ಹೋಗಲಾಡಿಸುತ್ತಾರೆಂದು ನಾನು ಸಂಪೂರ್ಣ ಭರವಸೆಯುಳ್ಳವನಾಗಿದ್ದೇನೆ. ಇಷ್ಟು ಹೇಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಸರ್ಕಾರದ ಮೂಲ ಬಂಡವಾಳವೆಂದರೆ, ಅವರಲ್ಲಿ ಜನಕ್ಕೆ ಇರುವ ನಂಬಿಕೆ. ಆ ನಂಬಿಕೆಯನ್ನು ಇವತ್ತಿನ ದಿವಸ ಸರ್ಕಾರ ಕಳೆದುಕೊಂಡಿದೆ. ಈಗ ರಾಷ್ಟ್ರಾಧ್ಯಕ್ಷರಲ್ಲಿ ಹೋಗಿ ಈ ಭೂಸುಧಾರಣೆಯಲ್ಲಿ ಅನೇಕ ನ್ಯೂನತೆಗಳಿವೆಯೆಂದು ಹೇಳುವುದಕ್ಕೆ ಮುಂಚಿತವಾಗಿಯೇ ಹಿಂದಿನ ಅಸೆಂಬ್ಲಿಯಲ್ಲಿ ಸದಸ್ಯರಾಗಿದ್ದ ಶ್ರೀಮಾನ್ ನರಸಿಂಹನ್ ಅವರು ಈ ತರಹ ಅಬ್‌ಜೆಕ್ಷನ್ಸ್ ಮುಂದೆ ಬರುತ್ತವೆಂದು ಹೇಳಿದ್ದರು. ಆದರೂ ಆ ರೀತಿಯಲ್ಲೇ

(ಶ್ರೀ ವಿ. ಎಂ. ದೇವ್)

ಕಳುಹಿಸಿದರು. ಆದ್ದರಿಂದ ಈ ಸರ್ಕಾರವೇ ದುರ್ವ್ಯವಹಾರಕ್ಕೆ ಉಪಯೋಗಿಸಿಕೊಳ್ಳುವುದಕ್ಕೆ ಒಂದು ದಾರಿಯನ್ನು ಮಾಡಿಕೊಡುತ್ತಾ ಇದೆ. ಜನತೆಯ ಕಲ್ಯಾಣಕ್ಕಾಗಿ ಇವರು ಏನಾದರೂ ಕೆಲಸ ಮಾಡಬೇಕು ಎನ್ನುವುದು ಇವರಲ್ಲಿ ಇಲ್ಲವೆಂಬುದು ಇದರಿಂದಲೇ ಖಚಿತವಾಗಿ ಗೊತ್ತಾಗುತ್ತದೆ. ಇದರೊಳಗೆ security of tenure ಕೊಡುವುದಕ್ಕಾಗಿ ಇನ್ನೊಂದು ವರ್ಷ ಈ ಕಾನೂನನ್ನು ಮುಂದುವರಿಸಬೇಕೆಂದು ಹೇಳಿದ್ದಾರೆ. ಎಷ್ಟೋ ಸಾರಿ ಈ ರೀತಿ ಮುಂದುವರಿಸುತ್ತಾ ಇರುವುದು ಇವರಿಗೆ ಮಾಮೂಲಾಗಿ ಬಂದಿದೆ. ಇವರು ಅದೇ ಒಂದು ದಾಟಿಯಲ್ಲಿ ಈಗಲೂ ಹೇಳುತ್ತಿದ್ದಾರೆ. ಮಂತ್ರಿಗಳು ಇದನ್ನು ಜೂನ್-ಜುಲೈ ತಿಂಗಳಲ್ಲಿ ಜಾರಿಗೆ ತರುತ್ತೇವೆಂದು ಹೇಳಿದ್ದಾರೆ. ಸಕಾರಣಗಳನ್ನು ಬೇರೆ ಮಾನ್ಯ ಸದಸ್ಯರು ಕೆಲವರು ಹೇಳಿದರು. ಅದು ನನಗೆ ಬಹಳ ಅನುಮಾನಕ್ಕೆ ಕಾರಣವಾಗಿದೆ ಎಂದು ನಾನು ಹೇಳುತ್ತೇನೆ. ಈ ವಿಚಾರದಲ್ಲಿ ನಾನು ಒಂದೆರಡು ವಿಷಯಗಳನ್ನು ಈ ಮಾನ್ಯ ಸಭೆಯ ಸದಸ್ಯರ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಭೂಸುಧಾರಣೆಯಲ್ಲಿ ಒಂದು ಮುಖ್ಯವಾದ ಅಂಶವನ್ನು ಮಾನ್ಯ ಮಂತ್ರಿಗಳು ಹೇಳಿದರು. ಅದೇನೆಂದರೆ, ಕೆಲವು ತಿದ್ದುಪಡಿಗಳು ಆಗುತ್ತವೆ. ಅದಾದ ಮೇಲೆ ಇಷ್ಟೇ ಕಾಲಾವಧಿಯಲ್ಲಿ ಅದನ್ನು ಅಂಸೆಬ್ಲಿ ಮುಂದೆ ತರುತ್ತೇವೆಂದು. ಅದರ ಜೊತೆಗೆ ನಾನು ಕೇಳಿಕೊಳ್ಳುವುದಿಷ್ಟೆ. ಯಾವ ದಿಶೆಯಲ್ಲಿ, ಯಾವ ದಿಕ್ಕಿನಲ್ಲಿ ಈ ರೂಪಾಂತರಗಳನ್ನು ಮಾಡುತ್ತಾರೆ ಎನ್ನುವುದು ಈಗಿನ ಮುಖ್ಯ ಪ್ರಶ್ನೆ. ಕಾರಣವೇನೆಂದರೆ, ಈ ಭೂಸುಧಾರಣೆ ಮಾಡಿದರೆ ಅದರಲ್ಲಿ ಏನಾದರೂ ಒಂದು ಅರ್ಥವಿರಬೇಕು. ಪ್ರತಿಯೊಂದು ಹಳ್ಳಿಯಲ್ಲೂ without any exception ಜಮೀನು ಇಲ್ಲದ ರೈತರೂ ಇದ್ದಾರೆ. ಅವರು ಬೇರೆಯವರ ಜಮೀನಿನಿಂದಲೇ ಕೆಲವರು ಹೊಟ್ಟೆ ಹೊರೆಯುತ್ತಿದ್ದಾರೆ. ಆದರೆ ಅವರ ಒಂದು ಸಂಸಾರಕ್ಕೆ ಆಗುವಷ್ಟು ಜಮೀನು ಅವರಿಗೆ ಸಿಗುತ್ತಿದೆಯೋ ಎನ್ನುವುದು ಒಂದು. ಆ ರೀತಿ ಜಮೀನು ಸಿಕ್ಕಿದ ಮೇಲೆ ಇನ್ನೊಬ್ಬರಿಗೆ ಅದು ಪರಭಾರ ಆಗದೇ ಇರಲು ಏನಾದರೂ ತಿದ್ದುಪಡಿ ವ್ಯವಸ್ಥೆ ಮಾಡುವುದು ಇದು ಎರಡನೆಯ ಪ್ರಶ್ನೆ. ಇಲ್ಲದೇ ಇದ್ದರೆ ಪರಭಾರೆಯಾಗುವುದಕ್ಕೆ ಅವಕಾಶವಾಗುತ್ತದೆ. ಏಕೆಂದರೆ ರೂಪಾಂತರಗಳು ಅನೇಕ ತರಹದಲ್ಲಿ ಬರುತ್ತವೆ. ಜಮೀನಿನ ಒಡೆತನದಲ್ಲಿ ಗೇಣಿ ಹಿಡಿಯುವುದು, ಕ್ರಯ, ಭೋಗ್ಯ ಎಲ್ಲಾ ಇರುತ್ತದೆ. ಆದರೆ ಈ ಭೂಸುಧಾರಣೆ ಜಾರಿಗೆ ಬಂದ ಮೇಲೆ ಈ ತರಹ ರೂಪಾಂತರಗಳಿಗೆ ದಾರಿ ಇರಕೂಡದು. ಆ ರೀತಿ ಇದ್ದರೆ ಈ ಭೂಸುಧಾರಣೆಯ ಮೂಲೋದ್ದೇಶ ನಾಶವಾಗಿ ಹೋಗುತ್ತದೆ. ಆ ರೀತಿ ನಾಶವಾಗಿ ಹೋದಾಗ ಅದರಿಂದ ಜನಗಳಿಗೆ ಒಂದು ವಿಧದಲ್ಲಿ ಕೆಟ್ಟದ್ದು ಆಗುತ್ತದೆಯೇ ಹೊರತು ಖಂಡಿತವಾಗಿ ಒಳ್ಳೆಯದು ಆಗುವುದಿಲ್ಲ. ಈ ದೃಷ್ಟಿಯಿಂದ ಖಚಿತವಾಗಿ ಹೇಳುತ್ತೇನೆ. ಇವರು ಈ ಬಗ್ಗೆ ಕೆಲವು ತಿದ್ದುಪಡಿಗಳನ್ನು ತಂದು, ಈ ಸಭೆಯ ಮುಂದೆ ಇಡುತ್ತೇನೆಂದು ಹೇಳಿದ್ದಾರೆ. ಈ ದೃಷ್ಟಿಯಿಂದ ಈಗಾಗಲೇ ಪ್ರತಿಯೊಬ್ಬ ರೈತನಿಗೂ ತನ್ನ ಸಂಸಾರದ ಹಿಡುವಳಿ ಜಮೀನು ಪರಭಾರೆ ಆಗದ ಹಾಗೆ ಅಷ್ಟೋ ಇಷ್ಟೋ ನೀರಾವರಿ ವ್ಯವಸ್ಥೆ ಮಾಡಿದ್ದಾರೆ. ಈಗಾಗಲೇ ಮಾತನಾಡಿದ ಶ್ರೀಮಾನ್ ಗೋಪಾಲಗೌಡರು ಇದರ ವ್ಯಾಪ್ತಿ ಬಹಳ ದೂರಕ್ಕೆ ಹೋಗುತ್ತಿದೆಯೆಂದು ಹೇಳಿದರು. ಹಾಗೆಯೇ ಶ್ರೀಮಾನ್ ಮುಕ್ಕಣ್ಣಪ್ಪನವರೂ ಸಹ ಇದರಲ್ಲಿ ಕಾನ್ಸ್ಟಿಟ್ಯೂಷನಲ್ ಪಾಯಿಂಟ್ ಎತ್ತಿದರು. ಇದು ಖಂಡಿತ ಬಿದ್ದುಹೋಗುತ್ತದೆಂಬುದಾಗಿ ಶ್ರೀಮಾನ್ ಗೋಪಾಲ ಗೌಡರು ಹೇಳುತ್ತಾ, ಒಂದು ವಿಷಯವನ್ನು ಮಾತ್ರ ಬಹಳ ಚೆನ್ನಾಗಿ ಹೇಳಿದರು. ಅದು ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್ ವಿಚಾರ. ಇದು ಎಷ್ಟರಮಟ್ಟಿಗೆ ಸಮಂಜಸವಾಗುತ್ತದೆಂಬುದನ್ನು ನಾವು ಈಗ ಯೋಚನೆ ಮಾಡಬೇಕಾಗಿದೆ. ಒಬ್ಬ ಮನುಷ್ಯ ಸಾಮಾನ್ಯವಾಗಿ ಒಂದು ಕೆಲಸದಲ್ಲಿ ಅಥವಾ ಪಟ್ಟಣದಲ್ಲಿ ಕೈಗಾರಿಕೆಯಲ್ಲಿರುವವನು ವ್ಯವಸಾಯ ಮಾಡುವ ದೃಷ್ಟಿಯಿಂದ ಅಷ್ಟೋ ಇಷ್ಟೋ ಜಮೀನು ಬೇಕೆಂದು ಕೇಳುತ್ತಾನೆ. ಕಾರಣವೇನೆಂದರೆ, ಅದರಲ್ಲಿ ಬರುತ್ತಾ ಇರತಕ್ಕ ವರಮಾನ ಸಾಕಾಗುವುದಿಲ್ಲ. ಅದೂ ಅಲ್ಲದೆ it is a form of property ಎಂಬುದು ಅವನ ಅಭಿಪ್ರಾಯ. ಅಂತಹವನು ಪಟ್ಟಣದಲ್ಲಿ ಯಾವಾಗ, ಹೇಗೆ ಆಸ್ತಿ ಮಾಡುತ್ತಾನೆ? ಹಾಗೆ ಆಸ್ತಿ ಆತನಿಗೆ ಇರಲೇಬೇಕೆಂದು ಹೇಳಿದರೆ ಅಲ್ಲಿ ಯಾವುದಾದರೂ ಒಂದು ದೃಷ್ಟಿಯಿಂದ ಅಲ್ಲಲ್ಲಿ ಮಾಡುತ್ತಾನೆ. ನನ್ನ ಅಭಿಪ್ರಾಯ ಇಷ್ಟು.

ನಿಜವಾಗಿಯೂ ಸಮಾಜಕ್ಕೆ ನ್ಯಾಯ ದೊರೆಯಬೇಕಾಗಿದ್ದರೆ ಪ್ರತಿಯೊಬ್ಬ ಪ್ರಜೆಗೂ ನೆಮ್ಮದಿ ಬೇಕು, ಮತ್ತು ರಕ್ಷಣೆ ಬೇಕು. ಈ ನೆಮ್ಮದಿ ಮತ್ತು ರಕ್ಷಣೆ ಬರಬೇಕಾದರೆ ಪ್ರತಿಯೊಬ್ಬ ಪ್ರಜೆಗೂ ಕೂಡ ಒಂದು ಕಡೆ ಕೆಲಸವನ್ನು ಮಾಡುವುದಕ್ಕೆ ಅವಕಾಶವನ್ನು ಸರ್ಕಾರದವರು ಕಲ್ಪಿಸಿ ಕೊಡಬೇಕು. ರೈತನಾಗಿರಲಿ, ಕಾರ್ಮಿಕನಾಗಿರಲಿ, ವಿಜ್ಞಾನಿ ಆಗಿರಲಿ, ವಿದ್ಯಾವಂತನಾಗಿರಲಿ, ಅವನು ಯಾವ ಕಸುಬಿಗೆ ಹೋದರೂ ಕೂಡ ಅವನು ಆ ಕೆಲಸವನ್ನು ಮಾಡುವುದಕ್ಕೆ ಬೇಕಾದ ಸೌಕರ್ಯವನ್ನು ಒದಗಿಸಿಕೊಡತಕ್ಕದ್ದು ಸಮಾಜ ಹಾಗೂ ಅದು ಸರ್ಕಾರದ ಆದ್ಯ ಕರ್ತವ್ಯ. ಇದನ್ನು ಮಾಡುವುದಕ್ಕೆ

10 ವರ್ಷಗಳ ಮೇಲೆ ಬೇಕಾಗುವುದಿಲ್ಲ. ವ್ಯವಸಾಯ ಮತ್ತು ಕೈಗಾರಿಕೆಗೆ ಒಂದು ಸಂಬಂಧ ಇದೆ. ಈ ದೃಷ್ಟಿಯಿಂದ ನಾನು ಕೇಳುವುದು ಇಷ್ಟೇ. ಈ ತರಹ ಪ್ರತಿಯೊಬ್ಬರಿಗೂ ಕೈಗಾರಿಕೆಯಲ್ಲಿ ಕೆಲಸವನ್ನು ಒದಗಿಸಬೇಕು. ಮತ್ತು ಪ್ರತಿಯೊಂದು ಸಂಸಾರಕ್ಕೂ ಜೀವನ ಮಾಡುವುದಕ್ಕೆ ಒಂದು ಕುಟುಂಬ ಹಿಡುವಳಿ ಜಮೀನು ಇರಬೇಕು. ರೈತನು ಆ ಜಮೀನಿನಲ್ಲಿ ಹೆಚ್ಚಿಗೆ ಬೆಳೆಯನ್ನು ಬೆಳೆಯಲು ತಾಂತ್ರಿಕವಾಗಿ ಏನು ಮಾಡಬೇಕೆಂಬುದನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಿ ಆ ರೀತಿ ಅವನು ಬೆಳೆಯನ್ನು ಬೆಳೆಯಲು ಅವನಿಗೆ ಬೇಕಾದ ಸೌಕರ್ಯವನ್ನು ಸರ್ಕಾರದವರು ಒದಗಿಸ ಬೇಕು. ಇದರಲ್ಲಿ ಅಧಿಕಾರಿಗಳ ಮುಖ್ಯ ಕರ್ತವ್ಯ ಏನೆಂದರೆ, ಹಳ್ಳಿಗಳಲ್ಲಿರತಕ್ಕ ಪ್ರತಿಯೊಬ್ಬ ರೈತನೂ ಸಹ ಸರಿಯಾದ ರೀತಿಯಲ್ಲಿ ವ್ಯವಸಾಯವನ್ನು ಮಾಡಿ ಅವನು ತನ್ನ ಜೀವನವನ್ನು ನಡೆಸಲು ಅನುಕೂಲವಾಗುವಂತೆ ಅವನಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಕೊಡಬೇಕು. ಹಳ್ಳಿ ಗಾಡಿನಲ್ಲಿರತಕ್ಕವರು ಐಶ್ವರ್ಯವಂತರಲ್ಲದಿದ್ದರೆ ಲಕ್ಷಾಂತರ ಜನಗಳಲ್ಲಿ 10 ಜನಗಳೂ ಸಹ ಮುಂದಕ್ಕೆ ಬರುವುದಕ್ಕೆ ದಾರಿಯಿಲ್ಲ. ಜನತೆಗೆ ಸಾಮಾಜಿಕ ನ್ಯಾಯವನ್ನು ಸಮಾಜವಾದದ ಮುಖಾಂತರ ಕೊಡುತ್ತೇವೆಂದರೆ ಅದಕ್ಕೆ ತಕ್ಕ ಕಾಯಿದೆಗಳನ್ನು ಮಾಡುವುದು ಮತ್ತು ಆಡಿದ ಮಾತುಗಳನ್ನು ಯಾವಾಗಲೂ ಉಳಿಸಿಕೊಳ್ಳುವಂಥಾದ್ದನ್ನು ಆಡಳಿತ ಪಕ್ಷದವರು ಕಲಿಯಬೇಕು. ಇವರ ಕೈಗೆ ಆಡಳಿತ ಬಂದು ಸುಮಾರು 18 ವರ್ಷಗಳಾದುವು. ಇವರು ಪ್ರತಿವರ್ಷವೂ ಕೂಡ ಈಗ ಈ ಸಭೆಯ ಮುಂದೆ ತಂದಿರುವ ತಿದ್ದುಪಡಿ ಮಸೂದೆಯ ಹಾಗೆ ಯಾವುದಾದರೂ ಒಂದನ್ನು ಮಾಡು ತ್ತಾರೆ. ಅದಕ್ಕೋಸ್ಕರವಾಗಿಯೇ ನಮ್ಮ ವಿರೋಧ ಪಕ್ಷದ ಸದಸ್ಯರೊಬ್ಬರಾದ ಶ್ರೀಮಾನ್ ಕೇಶವ ಮೂರ್ತಿಯವರು ಬೇಸತ್ತು ಭೂಸುಧಾರಣಾ ಕಾನೂನು ಯಾವಾಗ ಜಾರಿಗೆ ಬರುತ್ತದೆಯೋ ಅಲ್ಲಿಯವರೆಗೂ ಈ ಮಸೂದೆಯನ್ನು ಮುಂದುವರಿಸಿ ಎಂದು ಒಂದು ತಿದ್ದುಪಡಿಯನ್ನು ಕಳುಹಿಸಿ ದ್ದಾರೆ. ಇದರಿಂದ ನೀವು ಯಾವಾಗ ಬೇಕಾದರೂ ಭೂಸುಧಾರಣೆಯನ್ನು ಜಾರಿಗೆ ತರಬಹುದು. ಈಗಾಗಲೇ ಮಹಾರಾಷ್ಟ್ರ ಮತ್ತು ಮದ್ರಾಸಿನಲ್ಲಿ ಭೂಸುಧಾರಣಾ ಕಾನೂನನ್ನು ಜಾರಿಗೆ ತಂದಿದ್ದಾರೆ. ಆದರೆ ನಮ್ಮ ಮೈಸೂರು ದೇಶದಲ್ಲಿ ಇದನ್ನು ಜಾರಿಗೆ ತರಬೇಕಾಗಿದ್ದರೆ ಇನ್ನು ಎಷ್ಟು ಕಾಲ ಬೇಕೋ ನನಗಂತೂ ಗೊತ್ತಿಲ್ಲ. ಅಂತೂ ಆದಷ್ಟು ಜಾಗ್ರತ ಇದನ್ನು ಜಾರಿಗೆ ತರ ಬೇಕು. ಈ ಭೂಸುಧಾರಣಾ ಕಾನೂನಿನಲ್ಲಿ ಇರಬೇಕಾದಂತಹ ಮುಖ್ಯವಾದ ಅಂಶಗಳು ಯಾವು ವೆಂದರೆ, ಪ್ರತಿಯೊಬ್ಬರಿಗೂ ಒಂದು ಸಂಸಾರದ ಹಿಡುವಳಿ ಜಮೀನು ಇದ್ದು ಅದು ಪರಭಾರೆ ಆಗದ ಹಾಗೆ ಮಾಡಬೇಕು. ರೈತ ಬೇಸಾಯ ಮಾಡುವುದಕ್ಕೆ ಸರಿಯಾದ ನೀರಾವರಿ ಸೌಕರ್ಯವನ್ನು ಒದಗಿಸಬೇಕು, ಗೊಬ್ಬರ ಮತ್ತು ವ್ಯವಸಾಯಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸುವುದಕ್ಕೆ ಸರಿಯಾದಂತಹ ಒಂದು ಕಾನೂನು ಮಾಡಬೇಕು. ಆಡಳಿತ ಪಕ್ಷದವರು ಆಡಿದ ಮಾತನ್ನು ಉಳಿಸಿ ಕೊಳ್ಳುವುದನ್ನು ಮೊದಲು ಕಲಿಯಬೇಕು. ಈ ರೀತಿ ಪ್ರತಿವರ್ಷವೂ ಇದನ್ನು ಮುಂದಕ್ಕೆ ಹಾಕುತ್ತಾ ಹೋಗುವುದು ಸರಿಯಲ್ಲ. ಸರ್ಕಾರದವರು ಮಾಡತಕ್ಕಂಥ ಕೆಲಸದಲ್ಲಿ ಒಂದು ನ್ಯಾಯ, ನೀತಿ, ಧರ್ಮ ಇವುಗಳನ್ನು ಇಟ್ಟುಕೊಂಡು ಕೆಲಸವನ್ನು ಮಾಡಬೇಕು. ಈ ದೃಷ್ಟಿಯಿಂದ ನಾನು ಹೇಳುವುದಾದರೆ, ಇಂಥಾ ಒಂದು ತಿದ್ದುಪಡಿ ಮಸೂದೆಯನ್ನು ಈಗ ಈ ಸಭೆಯ ಮುಂದೆ ತರಬಾರ ದಾಗಿತ್ತು. ಭೂಸುಧಾರಣಾ ಕಾನೂನನ್ನು ಆದಷ್ಟು ಜಾಗ್ರತೆ ಜಾರಿಗೆ ತರುತ್ತೇವೆಂದು ಎಷ್ಟೋ ಸಾರಿ ಈ ಸಭೆಯಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಅದನ್ನು ಉಳಿಸಿಕೊಳ್ಳಿ. ಶ್ರೀಮಾನ್ ಗೋಪಾಲ ಗೌಡರು ಹೇಳಿದ ಸಮಾಜವಾದದ ಪ್ರಕಾರ ಭೂಸುಧಾರಣೆಯನ್ನು ಮಾಡಿ ಎಂದು. ಇದನ್ನು ಸ್ವಲ್ಪ ಯೋಚನೆಮಾಡಿ ಕಾರ್ಯಗತ ಮಾಡಬೇಕು. ಆದಷ್ಟು ಜಾಗ್ರತೆಯಾಗಿ ಭೂಸುಧಾರಣೆ ಕಾನೂನನ್ನು ಜಾರಿಗೆ ತರಬೇಕೆಂದು ಹೇಳಿ ನಾನು ನಾಲ್ಕು ಮಾತುಗಳನು ಹೇಳು ವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ ಅಧ್ಯಕ್ಷರೇ, ಈ ತಿದ್ದುಪಡಿ ಮಸೂದೆಯ ಮೇಲೆ ಚರ್ಚೆ ಪ್ರಾರಂಭವಾದಾಗಿನಿಂದಲೂ ಮಾನ್ಯ ಸದಸ್ಯರನೇಕರು ಹೇಳಿದ್ದನ್ನು ನಾನು ಕೇಳಿದೆ. ಮತ್ತು ಶ್ರೀಮಾನ್ ಗೋಪಾಲ ಗೌಡರು ಮತ್ತು ಕಡಿದಾಳ್ ಮಂಜಪ್ಪನವರೂ ಮಲೆ ನಾಡಿನ ವಿಷಯವನ್ನು ಹೇಳಿದರು. ನಮ್ಮ ಹಳೆಯ ಮೈಸೂರಿನಲ್ಲಿ ಅವರು ಹೇಳಿದಂತಹ ಜನರು ಇದ್ದಾರೆಯೇ ಎಂಬ ಬಗ್ಗೆ ಒಂದು ಸಂಶೋಧನೆಯನ್ನು ನಡೆಸುವಂತಹ ಒಂದು ಸಂದರ್ಭ ಈಗ ಬಂದಿದೆ. ಮಲೆನಾಡಿನಲ್ಲಿರತಕ್ಕ ಜನಗಳಿಗೆ ಕಡಿಮೆ ಭೂಮಿ ಇದ್ದರೂ ಇತ್ತೀಚೆಗೆ ಅವರು ಕಾಡು ಭೂಮಿಯನ್ನೆಲ್ಲಾ ಸೇರಿಸಿಕೊಂಡು ಅವರು ಒಬ್ಬೊಬ್ಬರು ಸಾವಿರಾರು ಎಕರೆ ಜಮೀನನ್ನು ಇಟ್ಟು ಕೊಂಡಿದ್ದಾರೆ. ಈಗ ಅವರು ಅದರ ಜೊತೆಗೆ ಮೈದಾನ ಪ್ರದೇಶದ ಜನಗಳ ಕಡೆ ನೋಡು ತ್ತಿದ್ದಾರೆ. ಇದರಿಂದ ಈ ಭಾಗದ ಜನಗಳಿಗೆ ಹಿಂಸೆಯಾಗುತ್ತಿದೆ. ಸಾಮಾನ್ಯವಾಗಿ ಹಳೆಯ ಮೈಸೂರಿನವರಾದ ನಾವು ಸುಖವಾಗಿದ್ದೆವು. ರಾಜ್ಯಗಳ ಪುನರ್ ವಿಂಗಡಣೆ ಆದಮೇಲೆ ಬೊಂಬಾಯಿ ಮತ್ತು ಮದ್ರಾಸಿನಲ್ಲಿ ಇದ್ದಂತಹ ಕಾನೂನನ್ನು ಇಲ್ಲಿ ಜಾರಿಗೆ ತಂದು ನಿಮ್ಮನ್ನು ಇಲ್ಲಿ ಸ್ವರ್ಗದೋ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಪಾದಿಯಲ್ಲಿ ಇಡುತ್ತೇವೆಂದು ಹೇಳಿದರು. ಆದರೆ ಈಗ ಇದರಿಂದ ನಮಗೆ ತೊಂದರೆಯಾಗಿದೆ. ಭೂಮಾಲೀಕರಿಗೂ ಮತ್ತು ಗೇಣುದಾರರಿಗೂ ತಂದೆ, ಮಕ್ಕಳು, ಮೊಮ್ಮಕ್ಕಳ ಕಾಲದವರಿಗೂ ಒಂದು ಸರಿಯಾದ ಸಂಪರ್ಕ ಇತ್ತು. ಇದನ್ನು ನಾನು ನನ್ನ 50 ವರ್ಷಗಳ ಅನುಭವದಲ್ಲಿ ನೋಡಿದ್ದೇನೆ. ಗೇಣಿದಾರರಿಗೂ ಮತ್ತು ಭೂಮಾಲೀಕರಿಗೂ ಯಾವ ತೊಂದರೆಯೂ ಇಲ್ಲದೆ ಇದು ನಡೆದುಕೊಂಡು ಬಂದಿರುವುದನ್ನು ನಾನು ನೋಡಿದ್ದೇನೆ. ಇವೊತ್ತು ಈ ಸಭೆಯ ಮುಂದೆ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ. ಇವೊತ್ತಿನ ದಿವಸ ಏನಾಗಿದೆ ಎಂದರೆ, ನಮ್ಮ ಮಂಡ್ಯ ಜಿಲ್ಲೆಯಲ್ಲಿರತಕ್ಕ ಪರಿಸ್ಥಿಯನ್ನೇ ನಾನು ಉದಾಹರಣೆಗೆ ಹೇಳುವುದಾದರೆ ಅನೇಕರು ಸರ್ಕಾರಿ ಕೆಲಸಗಳಿಗೋಸ್ಕರ ಊರನ್ನು ಬಿಟ್ಟು ಬೇರೆ ಕಡೆ ಹೋಗಿ ಪುನಃ ವಾಪಸ್ಸು ಊರಿಗೆ ಬಂದು ಅವರು ಬೇರೆಯವರಿಗೆ ಗೇಣಿಗೆ ಕೊಟ್ಟಂಥ ಭೂಮಿಯನ್ನು ವಾಪಸ್ಸು ಪಡೆದು ಅವರು ಜೀವನ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಅವರ ಆ ಜಮೀನಿನ ವ್ಯವಹಾರದ ಬಗ್ಗೆ ತಹಶೀಲ್ದಾರರ ಆಫೀಸಿಗೆ ಹೋಗಿ ಕೇಳಿದರೆ ಆ ತಹಶೀಲ್ದಾರರಿಗೆ ಟೆನೆನ್ಸಿ ಕಾನೂನೇ ಸರಿಯಾಗಿ ಗೊತ್ತಿರುವುದಿಲ್ಲ. ಈ ರೀತಿಯಾಗಿ ಕೆಲವರು ತೊಂದರೆ ಪಡುತ್ತಿದ್ದಾರೆ. ಈ ಸಂಬಂಧವಲ್ಲಿ ಮದ್ರಾಸಿನಲ್ಲಿ ಒಂದು ಕಾನೂನನ್ನು ಜಾರಿಗೆ ತಂದಿದ್ದಾರೆ ಎಂದು ಶ್ರೀಮಾನ್ ವೆಂಕಟೇಗೌಡರು ಹೇಳಿದರು. ಆ ತರಹವಾದರೂ ಮಾಡಿದರೆ ಒಳ್ಳೆಯದೆಂದು ಕಾಣುತ್ತದೆ. ಯಾವುದನ್ನೂ ಸರಿಯಾಗಿ ಮಾಡದೆ ಸುಮ್ಮನೆ ಜನಗಳಿಗೆ ಸರ್ಕಾರದವರು ಹಿಂಸೆಯನ್ನು ಕೊಡುತ್ತಿದ್ದಾರೆ, ಜನಗಳನ್ನು ನೇಣುಹಾಕುತ್ತಿದ್ದಾರೆ. ಜನಗಳಿಗೆ ಅನುಕೂಲ ಇಲ್ಲದೆ ಇರತಕ್ಕಂಥ ಈ ಕಾನೂನನ್ನು ನಾನು ಒಪ್ಪುವುದಿಲ್ಲ. ಇವೊತ್ತು ನಮ್ಮ ಜನಗಳು ಆರ್ಥಿಕ ಸ್ಥಿತಿಯಲ್ಲಿ ಬಹಳ ಕಡಿಮೆ ಮಟ್ಟದಲ್ಲಿದ್ದಾರೆ. ವಾರ ಮತ್ತು ಗುತ್ತಿಗೆಗೆ ಮಾಡತಕ್ಕ ಭೂಮಿ ಎರಡು ಎಕರೆ ಮೂರು ಎಕರೆಗಳ ಮೇಲೆ ಇಲ್ಲ. ನಮ್ಮ ಹಳೆಯ ಮೈಸೂರಿನಲ್ಲಿ 20 ಎಕರೆ ಜಮೀನು ಇರತಕ್ಕವರು ದೊಡ್ಡ ಜಮೀನ್ದಾರರು ಎಂದು ಹೇಳಬಹುದು. ಬಾಕಿ ಕಡೆ ಹೇಗಿದೆಯೋ ಅದು ನನಗೆ ಗೊತ್ತಿಲ್ಲ. ಈಗ ಮಂಡ್ಯ ಜಿಲ್ಲೆಯಲ್ಲಿ ಪ್ಯಾಕೇಜ್ ಪ್ರೋಗ್ರಾಮ್ ಬಂದಿದೆ. ಇದರಲ್ಲಿ ಬೆಳೆ ಆಗಿರುವುದನ್ನು ನೋಡಿದರೆ ಅದರಲ್ಲಿ ರೈತರು ಸರ್ಕಾರಕ್ಕೆ ಕಂದಾಯವನ್ನು ಹೇಗೆ ಕೊಡಬೇಕೋ ಜೀವನವನ್ನು ಹೇಗೆ ಮಾಡಬೇಕೋ ಮತ್ತು ಬಾಕಿ ವ್ಯವಹಾರಗಳನ್ನು ಹೇಗೆ ಮಾಡಬೇಕೋ ಗೊತ್ತಿಲ್ಲ. ಇಂಥಾ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಬಡವರನ್ನು ಉದ್ಧಾರ ಮಾಡುತ್ತೇವೆ ಎಂದು ಹೇಳತಕ್ಕಂಥವರು ಈಗ ಯಾರ ಆಸ್ತಿಯನ್ನು ಯಾರಿಗೋ ಕೊಟ್ಟು ಅವರು ಬದುಕಿಕೊಳ್ಳಲಿ ಎಂದು ಹೇಳುವುದು ಸಮಾಜಕ್ಕೆ ನೆಮ್ಮದಿಯನ್ನು ತರತಕ್ಕಂಥ ಹೊಣೆಗಾರಿಕೆ ಇಲ್ಲದೆ ಇರುವ ಜನರು ಹೇಳುವ ಮಾತು ಎಂದು ನಾನು ಘಂಟಾಘೋಷವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

5-30 P. M.

ನೀವು 20–25 ಎಕರೆ ಎಂದು ಏನು ಲಿಮಿಟ್ ಮಾಡಿದ್ದೀರೋ, ಅದನ್ನೇ ಹಿಂದಿನಿಂದಲೂ ಯಾರು ಆಶ್ರಯ ಮಾಡಿಕೊಂಡು ಬಂದಿದ್ದಾರೋ, ಅವನಿಗೇ ಬಿಟ್ಟುಬಿಡಿ. ಭೂಮಿ ಇಲ್ಲದವನಿಗೆ ಬೇರೆ ಕೆಲಸ ಒದಗಿಸಿಕೊಡಿ, ಅಥವ ಬೇರೆ ಜಮೀನು ಕೊಡಿ ಮತ್ತು ಇತರ ಅನುಕೂಲಗಳನ್ನು ಒದಗಿಸಿಕೊಡಿ. 'ರಾಬ್‌ಪೀಟರ್, ಪೇಪಾಲ್' ಅನ್ನುವ ಹಾಗೆ ಮಾಡಬೇಡಿ. ಈ ನೀತಿ ಸರ್ವಸಮ್ಮತವೂ ಅಲ್ಲ, ನ್ಯಾಯವಾದುದೂ ಅಲ್ಲ. ನಮ್ಮ ಸಂಸ್ಕೃತಿ, ನಮ್ಮ ಧರ್ಮ ಒಬ್ಬರೊಬ್ಬರಿಗೆ ಜಗಳ ಹಚ್ಚುವುದಲ್ಲ, ಒಬ್ಬರೊಬ್ಬರೂ ಕೂಡಿ ಬಾಳತಕ್ಕದು. ಅನ್ಯೋನ್ಯವಾಗಿ ಬಾಳುವುದು ನಮ್ಮ ಧರ್ಮ. ಹಿಂಸೆ ಕೊಟ್ಟು ಯಾವ ರಾಜ್ಯವನ್ನೂ ಕಟ್ಟುವುದಕ್ಕಾಗುವುದಿಲ್ಲ ಎಂದು ಎಷ್ಟು ಬೇಗ ತಿಳಿದುಕೊಂಡರೆ ಅಷ್ಟು ಒಳ್ಳೆಯದು. ಸರಕಾರವೆ ಆಗಲಿ, ಸಮಾಜವೆ ಆಗಲಿ ಒಬ್ಬರಿಗೆ ಕೆಡುಕು ಆಗಬೇಕು ಎಂದು ಮಾಡಿದರೆ, ಆದರಿಂದ ಉತ್ತರೋತ್ತರ ಒಳ್ಳೆಯದಾಗುವುದಿಲ್ಲ. ಭೂಮಾಲೀಕರ ವಿರುದ್ಧ ಅಪಾಯಕಾರಿಯಾಗಿ ಮಾತನಾಡುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಅವರಲ್ಲಿ ಅಯೋಗ್ಯರು ಇಲ್ಲವೆಂದು ಹೇಳುವುದಿಲ್ಲ, ಎಲ್ಲರೂ ಎಲ್ಲಿಯೂ ಹರಿಶ್ಚಂದ್ರರಿರುವುದಿಲ್ಲ. ಆದ್ದರಿಂದ ಭೂಮಾಲೀಕರನ್ನೆಲ್ಲಾ ಸಾರಾಸಗಟು ಬಲಿ ಹಾಕಬೇಕೆಂದು ಕಾನೂನು ತರುವುದು ಸರ್ವಸಮ್ಮತವಲ್ಲ. ಜುಲೈ ತಿಂಗಳಿನಿಂದ ಏನು ಒಂದು ಅಮೆಂಡ್‌ಮೆಂಟ್ ಕಾನೂನಿಗೆ ದೇಶದಲ್ಲಿ ಜಾರಿಗೆ ತರುತ್ತೇವೆಂದು ಹೇಳಿದ್ದೀರೊ, ಆ ಅಮೆಂಡುಮೆಂಟು ಯಾವ ತರಹ ಇದೆಯೋ ನಮಗೆ ಗೊತ್ತಿಲ್ಲ. ಹಿಂದೆ ರಾಜರುಗಳಿಗೆ ನಶ್ಯ ತಿಕ್ಕಿದಂಥವನಿಗೆ, ದೊರೆಗಳಿಗೆ ಕಥೆ ಹೇಳುತ್ತಿದ್ದವನಿಗೆ ಜೋಡಿಗಳನ್ನು ಕೊಟ್ಟಿದ್ದರು; ಅಂಥವರಿಗೆ ಸಾವಿರಗಟ್ಲೆ, ಲಕ್ಷಗಟ್ಲೆ ಕಾಂಪೆನ್ಸೇಶನ್ ಕೊಟ್ಟಿದ್ದೀರಿ. ಅಂಥದರಲ್ಲಿ ಬೆವರು ಸುರಿಸಿ ಆಹಾರ ಹೆಚ್ಚು ಬೆಳೆಯುವುದಕ್ಕೆ ಪ್ರಯತ್ನಪಟ್ಟವರಿಗೆ, ಜಮೀನು ಬಿಟ್ಟುಬಿಡಿ, ಅಲ್ಪಸ್ವಲ್ಪ ಕಾಂಪೆನ್ಸೇಶನ್ ತೆಗೆದುಕೊಳ್ಳಿ ಅಂತ ಹೇಳುವುದು ಸರಿಯಲ್ಲ. ಐದು ಸಾವಿರ ರೂಪಾಯಿ ಬೆಲೆ ಬಾಳುವ ಜಮೀನಿಗೆ 500

ರೂಪಾಯಿ ಕೊಡುತ್ತೇವೆಂದು ಹೇಳಿದರೆ, ಇದು ಕಡಲೆಕಾಯಿ ವ್ಯಾಪಾರವೆ? ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಹೋಗಿ ಭೂಮಾಲೀಕರ ಕಷ್ಟವನ್ನು ಪರೀಕ್ಷೆ ಮಾಡಬೇಕು. ಜಮೀನು ಇರತಕ್ಕಂಥವರಿಗೆ ವಿಪರೀತ ಕಿರುಕುಳವಾಗಿದೆ. ಟೆನೆಂಟ್ಸ್ ಯೂನಿಯನ್ ಅಂತ ಮಾಡಿಕೊಂಡು ದೊಡ್ಡ ದರೋಡೆಕಾರರು ಹುಟ್ಟುತ್ತಿದ್ದಾರೆ. ಅವರಿಗೆ ಹೇಳುವವರು ಕೇಳುವವರೇ ಇಲ್ಲ. ಮಾನಸ್ತರು, ಮರ್ಯಾದಸ್ತ ಕುಟುಂಬಗಳು ಬಾಳತಕ್ಕದು ಬಹಳ ಕಷ್ಟವಾಗಿದೆ. ಸೋಶಿಯಲಿಜಂ ಜಾರಿಗೆ ತರುತ್ತೇವೆ ಎಂದು ಹೇಳಿ ಏನೇನೋ ಮಾಡಬಾರದು. ನಮ್ಮ ಪ್ರಧಾನ ಮಂತ್ರಿಯವರು ಒಂದು ಮಾತು ಹೇಳಿದ್ದಾರೆ: ಚುನಾವಣೆಯಲ್ಲಿ ಓಟು ಬರದಿದ್ದರೂ ಪರವಾಗಿಲ್ಲ, ಸತ್ಯವಾದ ಮಾತನ್ನು ಆಡಿ ಎಂದು. ಜನ ಒಪ್ಪಿಕೊಳ್ಳತಕ್ಕಂಥ ಮಾತನ್ನು ಆಡಬೇಕು. ನಾವು ಸೋಶಿಯಲಿಸ್ಟ್ ಸೊಸೈಟಿ ಜಾರಿಗೆ ತರುತ್ತೇವೆಂದು, ಆತ್ಮವಂಚನೆ ಮಾಡುವ ಕೆಲಸಗಳನ್ನು ಯಾರೂ ಮಾಡಬಾರದು. ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು 9–10 ಜನ ಮುಖ್ಯವಾಗಿ, ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಇನ್ನೊಂದು ಸಂದರ್ಭದಲ್ಲಿ ಅವುಗಳನ್ನು ಕೊಟ್ಟಿದ್ದರೆ, ಬಹುಶಃ ಅದು ಪ್ರಕೃತವಾಗುತ್ತಿತ್ತು. ಆದರೆ, ಈಗ ಅವು ಅಪ್ರಕೃತವಾಗಿತ್ತು, ಮತ್ತು ಅನಾವಶ್ಯಕವಾಗಿತ್ತು. ಅವರ ಮುಂದೆ ಇರುವ ರೆಸಲ್ಯೂಶನ್ ಏನು, ಬಿಲ್ ಏನು ಎಂದು ತಿಳಿದುಕೊಂಡು ಮಾತನಾಡಿದ ಹಾಗೆ ಕಾಣಲಿಲ್ಲ. ನಮ್ಮ ಮುಂದಿರುವ ಮಸೂದೆ, ಭೂ ಸುಧಾರಣೆ ಕಾನೂನು ಜಾರಿಗೆ ತರುವತನಕ ಗೇಣಿ ರೈತರನ್ನು ಒಕ್ಕಲೆಬ್ಬಿಸಿದ ಹಾಗೆ ಅವರಿಗೆ ರಕ್ಷಣೆ ಕೊಡುವುದಕ್ಕೆ ಹಿಂದಿನ ಸರ್ಕಾರ ಎವಿಕ್ಷನ್ನಿನಿಂದ ಏನೊಂದು ಟೆಂಪೊರರಿ ಪ್ರೊಟೆಕ್ಷನ್ ಪ್ರೊವೈಡ್ ಮಾಡಿತ್ತೋ, ಅದನ್ನು ಮುಂದುವರಿಸುವುದು. ಈ ಟೆನೆನ್ಸಿ ಲಾ ಅಮೆಂಡ್‌ಮೆಂಟ್ ಬಿಲ್ ಮೇಲೆ ಮಾತನಾಡುವುದು ಬಿಟ್ಟು, ಮಾನ್ಯ ಸದಸ್ಯರು ಅನೇಕರು ಭೂ ಸುಧಾರಣೆ ಮಸೂದೆ ಮೇಲೆ ಮಾತನಾಡಿದರೆ ಈಗ ಸಮಯ ಸಿಕ್ಕದೆ ಇನ್ನು 4-5 ತಿಂಗಳು ಅಧಿವೇಶನವನ್ನು ಕರೆಯುತ್ತಾರೋ ಇಲ್ಲವೋ, ಈಗಲೇ ಸರ್ಕಾರವನ್ನು ಬಯ್ದುಬಿಡೋಣ ಎಂಬ ಧೋರಣೆಯಿಂದ ಹಾಗೆ ಮಾಡಿದ್ದರೆ ನಾನು ಏನೂ ಜವಾಬು ಹೇಳುವುದಿಲ್ಲ. ಈ ಮಾನ್ಯ ಸಭೆ ಇನ್ನೂ 1½ ತಿಂಗಳು ಸೇರುತ್ತದೆ. ಆದ್ದರಿಂದ ಅಂಥ ಧೋರಣೆಯಿಂದ ಟೀಕೆ ಮಾಡಿದ್ದರೆ, ಬಹುಶಃ ಈ ಸಭೆಯ ಕಾಲ, ಹಣ ಅಷ್ಟೂ ನಷ್ಟವಾಗಿದೆ. ಈ ಕಾಂಗ್ರೆಸ್ ಸರಕಾರ 18 ವರ್ಷದಿಂದ ಇದೆ, ಅದು ಹೋಗುತ್ತದೇನೋ, ನಾವು ಅಧಿಕಾರಕ್ಕೆ ಹತ್ತಬೇಕು ಎಂದು ಆಸೆ ಇಟ್ಟುಕೊಂಡು ಕಾದುಕಾದು ಸಾಕಾಗಿಹೋಗಿ ಸಂಬಂಧಪಡದ ವಿಷಯಗಳನ್ನು ಹೇಳಿ ಖಂಡನೆ ಮಾಡಿದ್ದರೆ ಅದಕ್ಕೆ ಏನೂ ಹೇಳುವುದಕ್ಕಾಗುವುದಿಲ್ಲ. ಈ ಕಾಂಗ್ರೆಸ್ ಸರ್ಕಾರ ಯಾವಾಗ ಬೀಳುವುದು, ಎಲ್ಲಿಯವರೆಗೆ ಕಾಯುವುದು ಎಂದು ಕೆಲವರಿಗೆ ಆತುರವಾಗಿರಬಹುದು. ಯಾವುದೇ ಒಂದು ಕಾರಣ ಇಟ್ಟುಕೊಂಡು ಏನೇನೋ ಹೇಳಿದರೆ ಈ ಸಭೆಯ ಕಾಲವನ್ನು ವ್ಯರ್ಥಮಾಡಿದ ಹಾಗಾಗುತ್ತದೆ.

ಭೂ ಸುಧಾರಣೆ ಏಕೆ ನಿಧಾನವಾಗಿದೆ ಅನ್ನುವುದು ಎಲ್ಲರಿಗೂ ಗೊತ್ತಿದೆ. ಸಂವಿಧಾನಕ್ಕೆ 17ನೆ ಅಮೆಂಡ್‌ಮೆಂಟನ್ನು ಪಾರ್ಲಿಮೆಂಟಿನಲ್ಲಿ ತರುವವರೆಗೂ ನಾವು ಏನೂ ಮಾಡುವ ಹಾಗಿರಲಿಲ್ಲ. 17ನೇ ಅಮೆಂಡ್‌ಮೆಂಟಿನಿಂದ ರಾಜ್ಯಾಂಗ ಬದಲಾಯಿಸಬೇಕು ಎಂದು ಹೋದ ಸೆಪ್ಟೆಂಬರ್–ಅಕ್ಟೋಬರಿನಲ್ಲಿ ಹೋಯಿತು. 17ನೇ ಅಮೆಂಡ್‌ಮೆಂಟ್ ತಂದು ಕಾನ್‌ಸ್ಟಿಟ್ಯೂಷನ್ ಬದಲಾವಣೆ ಮಾಡುವವರೆಗೂ ಏನೂ ಮಾಡುವ ಹಾಗಿಲ್ಲವೆಂದು ಅನೇಕ ಸಲ ಹೇಳಿದ್ದೇನೆ. ಭೂ ಸುಧಾರಣೆ ಕಾನೂನಿಗೆ ರಾಷ್ಟ್ರಾಧ್ಯಕ್ಷರು ಒಪ್ಪಿಗೆ ಕೊಟ್ಟರೂ, ಅದಕ್ಕೆ ಅಡಿಶನಲ್ ಇನ್‌ಸ್ಟ್ರಕ್ಷನ್ಸ್ ಹಾಕಿದರು. ನಾವು ಅದರಂತೆ ಕೆಲವು ಬದಲಾವಣೆಗಳನ್ನು ಮಾಡೋಣವೆಂದು ಯೋಚನೆ ಮಾಡುತ್ತಿದ್ದ ಎರಡು ತಿಂಗಳಿನಲ್ಲಿಯೇ, ಕೇರಳ ಅಗ್ರಿಕಲ್ಚರಲ್ ರಿಲೇಶನ್ಸ್ ಆಕ್ಟಿನ ಕೆಲವು ಸೆಕ್ಷನ್ನುಗಳನ್ನು ಸುಪ್ರೀಂ ಕೋರ್ಟಿನವರು ರದ್ದುಗೊಳಿಸಿದರು. ಯಾವ ಕಾರಣದಮೇಲೆ ರದ್ದುಗೊಳಿಸಿದರೋ, ಆ ಕಾರಣಗಳು ನಮಗೂ ಅನ್ವಯಿಸುತ್ತವೆ. ಅದರಲ್ಲಿ ದಕ್ಷಿಣ ಕನ್ನಡದಲ್ಲಿ ಮಂಗಳೂರು ಏರಿಯಾದಲ್ಲಿ ಹಾಗೂ ಮದ್ರಾಸು ಭಾಗಗಳಿಂದ ನಮಗೆ ಬಂದ ಕೊಳ್ಳೇಗಾಲ ಮತ್ತು ಬಳ್ಳಾರಿಗೆ, ಯಾವ ಕಾನೂನನ್ನು ಮಲಬಾರಿನಲ್ಲಿ ಸ್ಟ್ರೈಕ್ ಡೌನ್ ಮಾಡಿದರೋ, ಅದು ಇಲ್ಲಿಗೂ ಅನ್ವಯಿಸುತ್ತದೆ. ನಾವೂ ಅವರ ಹಾಗೆ ಆತುರ ಆತುರವಾಗಿ ಭೂ ಸುಧಾರಣೆ ಜಾರಿಗೆ ತಂದಿದ್ದರೆ, ಕೇರಳದ ಗತಿಯೇ ನಮಗೂ ಬರುತ್ತಿತ್ತು. ಶ್ರೀ ಕಡಿದಾಳ್ ಮಂಜಪ್ಪನವರು ಬಹಳ ಬೇಗ ಭೂ ಸುಧಾರಣೆ ತರಬೇಕೆಂದು, ಬಹಳ ಕಷ್ಟಪಟ್ಟು ಆತುರವಾಗಿ ಭೂ ಸುಧಾರಣೆ ಶಾಸನವನ್ನು ಸಿದ್ಧಮಾಡಿದರು, ಅವರು ಸಿದ್ಧ ಮಾಡಿದ್ದನ್ನು ಜಾರಿಗೆ ತರುವುದಕ್ಕೆ ನನಗೆ ಏನು ತೊಂದರೆಯಿತ್ತು? ರಾಜ್ಯಾಂಗದ ತಿದ್ದುಪಡಿಯಾಗಿ ಇದ್ದ ತೊಂದರೆ ನಿವಾರಣೆಯಾಗಬೇಕಾಗಿತ್ತು. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಅಬಾಲಿಷನ್ ಆಫ್ ಹೆರೆಡಿಟರಿ ರೈಟ್ಸ್ ಆಫ್ ವಿಲೇಜ್ ಆಫೀಸರ್ಸ್ ಶಾಸನ ಮಾಡಿದರು; ವಂಶ

(ಶ್ರೀ ಎಂ. ವಿ. ಕೃಷ್ಣಪ್ಪ)

ಪಾರಂಪರ್ಯವಾಗಿ ಬಂದಿದ್ದ ಪಟೇಲ ಶಾನುಭೋಗರ ಹಕ್ಕುಗಳನ್ನು ರದ್ದುಪಡಿಸುವುದಕ್ಕೆ ಶಾಸನ ರೆಡಿ ಮಾಡಿಟ್ಟರು; ನಾವು ಅದನ್ನು ಜಾರಿಗೆ ಕೊಡೋಣವೆಂದು ಒಂದು ದಿನವನ್ನು ಗೊತ್ತುಮಾಡಿದಾಗ, ಅವರು ತಕ್ಷಣ ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದರು. ಅವರ ಕೇಸು ಸುಪ್ರೀಂ ಕೋರ್ಟಿಗೆ ಹೋಯಿತು. ಅವರು ರೆಡಿ ಮಾಡಿದ ಕಾನೂನಿನಿಂದ ಏನು ಪ್ರಯೋಜನವಾಯಿತು ? ಮೂರು ವರ್ಷದಿಂದ ಅದು ಹಾಗೆಯೇ ಇದೆ. ಅದು ತ್ರಿಶಂಕು ಸ್ವರ್ಗದೊಳಗಿದೆ. ಕೇಸು ಸುಪ್ರೀಂ ಕೋರ್ಟಿನಲ್ಲಿರುವುದರಿಂದ ಅನೇಕ ಶಾನುಭೋಗರಿಗೆ ತಾವು ಹೇಗೂ ಹೊರಟುಹೋಗುತ್ತೇವೆಂಬ ಭಾವನೆ ಬಂದು ನಮಗೆ ಹೇಗೆ ಸಹಕಾರ ಕೊಡುತ್ತಾರೆ? ಅವರಲ್ಲಿಯೂ ಒಳ್ಳೆಯವರಿದ್ದಾರೆ, ಇಂಥ ಪರಿಸ್ಥಿತಿಯಲ್ಲಿಯೂ ಸಹಕರಿಸುತ್ತಿದ್ದಾರೆ. ಹೀಗೆ ತ್ರಿಶಂಕು ಸ್ವರ್ಗದೊಳಗಿರುವುದಕ್ಕಿಂತ, ಕಾನೂನು ಭದ್ರಪಡಿಸಿಕೊಂಡು, ರಾಜ್ಯಾಂಗದ ಪ್ರಕಾರ ಏನೇನು ಅಮೆಂಡುಮೆಂಟುಗಳು ಬೇಕೋ ಅವುಗಳನ್ನು ಪಕ್ಕಾ ಆಗಿ ಮಾಡಿ, ಒಂದು ಡೆಫಿಕ್ಟ್ ಮಾಡಿ, ಭೂ ಸುಧಾರಣೆ ಜಾರಿಗೆ ತರಬೇಕೆಂದು ತೀರ್ಮಾನ ಮಾಡಿದ್ದೇವೆ. ಅಮೆಂಡ್‌ಮೆಂಟುಗಳನ್ನು ಹೋದ ಸೆಪ್ಟೆಂಬರ್-ಆಕ್ಟೋಬರು ತಿಂಗಳಿನಲ್ಲಿ ಪಾರ್ಲಿಮೆಂಟಿನಲ್ಲಿ ಮಾಡಿದ್ದಾರೆ. ಅವು ಮೈನರ್ ಅಮೆಂಡ್‌ಮೆಂಟುಗಳು. ಅದರಿಂದ ಏನೂ ವ್ಯತ್ಯಾಸ ಬರುವುದಿಲ್ಲ. ಆ ಮೈನರ್ ಅಮೆಂಡ್‌ಮೆಂಟುಗಳನ್ನು ಈ ಅಧಿವೇಶನದಲ್ಲಿಯೆ, ಇನ್ನು 2-3 ದಿವಸದೊಳಗೆ ಮಾನ್ಯ ಸಭೆಯ ಮುಂದಿಟ್ಟು, ಇದು ಕೊನೆಯಾಗುವುದರೊಳಗೇ ಅಂಗೀಕರಿಸಬೇಕೆಂದಿದೆ. ಅವರ ಚರ್ಚೆಗೆ ಹೆಚ್ಚು ಕಾಲ ಹಿಡಿಯುವುದಿಲ್ಲ; 2-3 ಗಂಟೆ ಆಗಬಹುದು. ಅದು ಪಾಸ್ ಆದ ತಕ್ಷಣ, ಜುಲೈ ಒಂದನೇ ತಾರೀಖಿಗೆಜಾರಿಗೆ ತರುವ ದಿನ ಎಂದು ನಿಗದಿ ಮಾಡಿ, ಡಿಕ್ಲೇರ್ ಮಾಡಬೇಕು, ಎಂದು ಯೋಚನೆ ಮಾಡಿದ್ದೇವೆ. ಅದಕ್ಕೆ ಲ್ಯಾಂಡ್ ಕಮಿಶನರು ಮತ್ತು ಟ್ರಿಬ್ಯುನಲ್ಲುಗಳು ಅಪಾಯಿಂಟ್ ಆಗಬೇಕು. A day has to be appointed under the law. ಜುಲೈ ಒಂದನೆಯ ತಾರೀಖು ಮಾಡುವುದು ಖಾಯಂ ಎಂದು ಹೇಳುತ್ತೇನೆ. ಈಗ ಅದಕ್ಕೆ ಅಡ್ಡಿ ಇದ್ದ ಎಲ್ಲಾ ತೊಂದರೆಗಳೂ ಹೋಗಿ, ಕ್ಲಿಯರ್ ಆಗಿದೆ; ಶಾಸನ ಜಾರಿಗೆ ತರುವುದಕ್ಕೆ ಗ್ರೀನ್ ಸಿಗ್ನಲ್ ಬಂದಿದೆ. ಇದ್ದ ತೊಂದರೆಗಳು ನಿವಾರಣೆಯಾಗಲಿ ಎಂದೇ, ಕುಂಟುನೆಪಗಳನ್ನು ಕೊಡುತ್ತಾ ಹೋಗುತ್ತಿದ್ದೆವು ಎಂದು ಕೆಲವರು ಅಂದುಕೊಂಡಿದ್ದರು. ಶಾಸನ ಜಾರಿಗೆ ತರುವುದಕ್ಕೆ ರಾಜ್ಯಾಂಗದ ಆತಂಕಗಳಿವೆಯೆಂದು, ಅದನ್ನು ಮುಂದೂಡುತ್ತಿದ್ದೇವೆ ವಿನಾ ಕುಂಟುನೆಪದಿಂದಲ್ಲ. ಸರಕಾರದವರು ಇದನ್ನು ಜಾರಿಗೆ ತರುವುದರಲ್ಲಿ ಅನುಮಾನವೇನೂ ಪಡಬೇಕಾಗಿಲ್ಲ. ಆದಷ್ಟು ಬೇಗ ಜಾರಿಗೆ ತಂದು ಜನಗಳ ಕಷ್ಟವನ್ನು ನಿವಾರಣೆ ಮಾಡಿ ಗೇಣಿದಾರರುಗಳಿಗೆ ರಕ್ಷಣೆ ಕೊಡಬೇಕೆಂದು ಇದ್ದೇವೆ. ತೊಂದರೆ ಕೊಡಬೇಕೆಂದೇನೂ ಇಲ್ಲ. ಮಾನ್ಯ ಸ್ನೇಹಿತರಾದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದ ಹಾಗೆ ಗೇಣೀದಾರರುಗಳು ಅನೇಕ ಕಷ್ಟ ನಷ್ಟಗಳಿಗೆ ಕೆಲವು ಕಡೆ ಸಿಕ್ಕಿಕೊಂಡಿದ್ದಾರೆ. ಭೂಮಾಲೀಕರು ಗೇಣೀ ರೈತರಿಗೆ ತೊಂದರೆ ಕೊಡುತ್ತಲಿದ್ದಾರೆ. ಕೆಲವು ಕಡೆ ಗೇಣಿ ಮಾಡುವ ರೈತರುಗಳು ಇಲ್ಲದ ತೊಂದರೆ ಭೂಮಾಲೀಕರಿಗೆ ಕೊಡುತ್ತಿದ್ದಾರೆ. ಆದರೆ ಕಾನೂನು ಈ ತಕ್ಷಣ ತರಬೇಕು ಎಂದಗೆ ಅದರಲ್ಲಿ ಕೆಲವು ತೊಡಕುಗಳು ಮಧ್ಯದಲ್ಲಿ ಬಂದುದರಿಂದ ಸ್ವಲ್ಪ ನಿಧಾನವಾಗಿದೆ. ಇದನ್ನು ಕೆಲವರು ನೋಡಿಕೊಂಡು ಜನರನ್ನು ಎಕ್ಸ್‌ಪ್ಲಾಯಿಟ್ ಮಾಡುತ್ತಿದ್ದಾರೆ. ಇದನ್ನು ನಾವೂ ಒಪ್ಪಿಕೊಳ್ಳಬಹುದು. ಇಂತಹ ತೊಂದರೆಗಳಿಗೆ ಸಿಕ್ಕಿರುವವರಿಗೆ ರಕ್ಷಣೆ ಕೊಡಬೇಕೆಂದೇ ಈ ಶಾಸನವನ್ನು ಮಾಡಿ ಜಾರಿಗೆ ತರಬೇಕೆಂದಿರುವುದು. ಇದರಲ್ಲಿ ಎರಡು ವಿಧಗಳೂ ಇವೆ. ಗೇಣಿ ರೈತರನ್ನು ಒಕ್ಕಲೆಬ್ಬಿಸುವುದು ಹಾಗೂ ಲ್ಯಾಂಡು ಲಾರ್ಡುಗಳಾಗಿರುವವರು ಕಾನೂನನ್ನು ಜಾರಿಗೆ ತಂದಿಲ್ಲ ಎಂದು ಟೆನೆಂಟುಗಳನ್ನು ಎವಿಕ್ಟು ಮಾಡುವುದು ಹೀಗೆಲ್ಲಾ ಮಾಡುತ್ತಿದ್ದಾರೆ. ಇದು ಬಹಳ ಪೂರ್ವಕಾಲದಿಂದಲೂ ಬಂದಿರುವ ಪದ್ಧತಿ. ಇದನ್ನು ಬೇಗನೆ ತಡೆಗಟ್ಟುವುದಕ್ಕೆ ಆಗುವುದಿಲ್ಲ. ಇದು ಹೇಗಿದೆ ಎಂದರೆ ಮಿನಿಸ್ಟರು ಕಾರು ದಾರಿಯಲ್ಲಿ ಹೋಗುವಾಗ ಒಬ್ಬ ಸೈಕಲ್ ಸವಾರನು ಬಂದು ಡ್ಯಾಷು ಮಾಡಿದಂತಾಗಿದೆ. ಮಿನಿಸ್ಟರು ಕಾರಿನಲ್ಲಿ ಸರಿಯಾಗಿಯೇ ಹೋಗುತ್ತಿದ್ದರೂ ಕೂಡ ಸೈಕಲ್ ಸವಾರನ ಮೇಲೆ ಮಿನಿಸ್ಟರವರ ಕಾರು ಡ್ಯಾಷು ಎಂದು ದೊಡ್ಡದಾಗಿ ಪೇಪರಿನಲ್ಲಿ ಬರುತ್ತದೆ. ಹಾಗೆ ಗೇಣಿದಾರರುಗಳು ಜಮೀನು ಮಾಲೀಕರ ಮೇಲೆ, ಜಮೀನಿರುವವರು ಗೇಣೀದಾರರ ಮೇಲೆ ಇಲ್ಲದ ತೊಂದರೆಗಳು ಆಗುತ್ತಿದೆ ಎನ್ನುವುದನ್ನು ನಾವೂ ಕೂಡ ಅನೇಕ ಕಡೆ ನೋಡಿದ್ದೇವೆ. ಇನ್ನು ಮುಂದೆ ಹಾಗೆ ಆಗುವುದಿಲ್ಲ. ಎಷ್ಟು ಬೇಗ ಇದನ್ನು ಜಾರಿಗೆ ತರಲು ಸಾಧ್ಯವೋ ಅಷ್ಟು ಬೇಗ ಅದನ್ನು ತರಬೇಕೆಂದಿದ್ದೇವೆ. ಜುಲೈ ಒಂದನೇ ತಾರೀಖಿನಿಂದ ಕಾನೂನನ್ನು ಖಾಯಂ ಆಗಿ ತರುತ್ತೇವೆಂದು ಇಲ್ಲಿ ಭರವಸೆ ಕೊಡಬಲ್ಲೆ. ತಮಗೆ ಈಗಾಗಲೇ ತಿಳಿದಿರುವಂತೆ ಸುಪ್ರೀಂ ಕೋರ್ಟಿಗೆ ಹೋಗಿರುವ ವಿಚಾರ ಗೊತ್ತಿದೆ, ಅದಕ್ಕೆ ತಕ್ಕಂತೆ ಇಲ್ಲಿಯೂ ಕೆಲವು ಅಮೆಂಡುಮೆಂಟುಗಳನ್ನು ತಂದು ಗೇಣಿದಾರರು

ಗಳಿಗೆ ರಕ್ಷಣೆ ಕೊಡಬೇಕೆಂದು ಇದ್ದೇವೆ. ತಮಗೆ ಯಾವ ರೀತಿ ಆಸೆ ಇದೆಯೋ ಅದರಂತೆ ಬಡ ರೈತರ ವಿಷಯದಲ್ಲಿ ನಮಗೂ ಇದೆ. ಅದಕ್ಕೋಸ್ಕರವೇ ನಾವು ಹೊಡೆದಾಡುತ್ತಿದ್ದೇವೆ. ಎಷ್ಟು ಬೇಗ ಕಾನೂನನ್ನು ಜಾರಿಗೆ ತರಲು ಸಾಧ್ಯವೋ ಅಷ್ಟು ಬೇಗ ಜಾರಿಗೆ ತರಬೇಕೆಂದು ಇದ್ದೇವೆ. ಯಾವಾಗಲೂ ಪ್ರಜಾಪ್ರಭುತ್ವದಲ್ಲಿ ಸ್ವಲ್ಪ ನಿಧಾನವಾಗಿ ಹೋಗಬೇಕು, ನಾವೇನೂ ಡಿಕ್ಟೇಟರು ಗಳಲ್ಲ. ರಾಜ್ಯದಲ್ಲಿ ಒಂದು ಒಳ್ಳೆಯ ಶಾಸನವನ್ನು ತರುವಾಗ ಅದನ್ನು ಜನಗಳಿಗೆ ವಿರೋಧವಾಗಿ ತರಲು ಹೋಗಬಾರದು, ಹಾಗೆ ತಂದರೆ ಹೈ ಕೋರ್ಟಿಗೆ ಹೋಗಿ ಸ್ಟೇ ಆರ್ಡರು ತರುತ್ತಾರೆ. ಹಿಂದಿನ ಕಾಲದಲ್ಲಿ ಇದ್ದಹಾಗೆ ಈಗ ಇಲ್ಲ. ಸೋಷಿಯಲಿಸಂ ಜಾರಿಗೆ ತರಬೇಕೆಂದು ಇರುವಾಗ ಪ್ರಜಾಪ್ರಭುತ್ವದಲ್ಲಿ ತರುವುದು ಸ್ವಲ್ಪ ನಿಧಾನವಾಗುತ್ತದೆ. ಅಂತಹ ಒಂದು ಮುಖ್ಯವಾದ ಸಮಸ್ಯೆ ಎಂದರೆ ಈ ಭೂಸುಧಾರಣೆ. ಅನೇಕ ಕಡೆಯಲ್ಲಿ ಜಮೀನುದಾರರುಗಳಿದ್ದಾರೆ, ಗೇಣಿ ದಾರರೂ ಇದ್ದಾರೆ. ಅವರಿಗೆ ತೊಂದರೆಯಾಗದಂತೆ ತರಬೇಕು. ಈಗಾಗಲೇ ಅನೇಕ ಕಡೆಗಳಲ್ಲಿದ್ದ ಇನಾಂ ರದ್ದಿಯಾತಿ, ಷಿಕ್ಮಿದಾರ ರದ್ದಿಯಾತಿ, ಜೋಡಿದಾರರುಗಳ ರದ್ದಿಯಾತಿ, ಹೀಗೆ ಎಷ್ಟೋ ದಾರರುಗಳಿದ್ದರು. ಅಂತಹ ಅನೇಕ ದಾರರುಗಳಲ್ಲೆಲ್ಲಾ ಹೋಗಿ ಈಗ ಒಂದೇ ಒಂದು ದಾರ ಮಾತ್ರ ಉಳಿದಿದೆ. ಈ ಒಂದು ದಾರವನ್ನೂ ಉಳಿಯದಂತೆ ಮಾಡುತ್ತಿದ್ದೇವೆ, ಅದಕ್ಕಾಗಿ ಕಾನೂನನ್ನು ಬೇಗನೆ ಜಾರಿಗೆ ತರಲು ಪ್ರಯತ್ನ ಮಾಡುತ್ತಿದ್ದೇವೆ ಎಂದು ಇಷ್ಟು ಭರವಸೆ ಕೊಟ್ಟು ಈ ಕಾನೂನನ್ನು ಸಭೆ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

Mr. DEPUTY SPEAKER.—The question is :

"That the Mysore Tenancy Laws (Amendment) Bill, 1965 be taken into consideration."

The motion was adopted.

CLAUSE 2.

Sri H. R. KESHAVA MURTHY (Gandasi).—I beg to move :

"That in the proposed Amendment of Mysore Act 13 of 1957, lines 4 and 5 for the words and figures 'thirty-first day of March 1966' the words 'on the day the Mysore Land Reforms Act is brought into force' shall be substituted."

Mr. DEPUTY SPEAKER.—Amendment moved :

"That in the proposed Amendment of Mysore Act 13 of 1957, lines 4 and 5 for the words and figures "thirty first day of March 1966' the words, 'on the day the Mysore Land Reforms Act is brought into force' shall be substituted."

†ಶ್ರೀ ಎಚ್. ಆರ್. ಕೇಶವ ಮೂರ್ತಿ.—ಸ್ವಾಮೀ, ನಾನು ಏತಕ್ಕಾಗಿ ಈ ಅಮೆಂಡ್‌ಮೆಂಟನ್ನು ತಂದಿದ್ದೇನೆ ಎಂದರೆ, 1952ನೇ ಒರಿಜಿನಲ್ ಆಕ್ಟಿನಲ್ಲಿರುವಂತೆ ಇಲ್ಲಿಯೂ ತರಬೇಕೆಂದು ಹೇಳುತ್ತಿದ್ದೇನೆ. 1952 ರಿಂದ 1957 ರವರೆಗೆ ಐದು ವರ್ಷಗಳಾಯಿತು. ಅದರಂತೆ ಇನ್ನೊಂದು ಅಮೆಂಡುಮೆಂಟಿನಲ್ಲಿ ನಾನು ತಂದಿರುವುದು ಇನ್ನೊಂದು ವರ್ಷ ಹೆಚ್ಚಿಗೆ ಇರಬೇಕು ಎಂದು ಮೈಸೂರು ಆಕ್ಟು 16 ರಲ್ಲಿ ಹೇಳಿರುವಂತೆ ಇಲ್ಲಿ ತಿದ್ದುಪಡಿ ತಂದಿದ್ದೇನೆ. ಇದರಲ್ಲಿ ನಾನು ಹೇಳುತ್ತಿರುವುದು ಯಾರು ಐದು ವರ್ಷಗಳ ಕಾಲದಿಂದ ಜಮೀನಿನ ಅನುಭವದಲ್ಲಿರುತ್ತಾರೋ ಅವರಿಗೆ ಐದು ವರ್ಷ ಕೊಡಿ. 1957 ರಿಂದಾಚೆಗೆ ಇನ್ನೂ ಒಂದು ವರ್ಷ ಮುಂದಕ್ಕೆ ಕೊಡಿ. 1947 ರಿಂದಲೇ ಈ ಕಾನೂನನ್ನು ಜಾರಿಗೆ ತರಬೇಕೆಂದು ಇದ್ದದ್ದು 1964 ರವರೆಗೂ ತರಲೇ ಇಲ್ಲ, ಎಂದರೆ 17 ವರ್ಷಗಳ ಕಾಲ ನಿಮ್ಮ ಕೈಯಲ್ಲಿ ಸ್ವರಾಜ್ಯ ಬಂದರೂ ಕೂಡ ಇಲ್ಲಿಯ ತನಕ 1957 ರಿಂದ ಮುಂದಕ್ಕೆ ಒಂದು ವರ್ಷ ಜೀವದಾನ ಬೇಕೆಂದು ವರ್ಷ ವರ್ಷವೂ ಕೇಳುತ್ತಲೇ ಬರುತ್ತಿದ್ದೀರಿ. ಇಂತಹ ಜೀವದಾನ 1958 ರಲ್ಲಿ ಒಂದು ಸಾರಿ, 1959ರಲ್ಲಿ ಒಂದು ಸಾರಿ ಮತ್ತು 1960 ರಲ್ಲಿ ಒಂದು ಸಾರಿ ಹೀಗೆ ಪ್ರತಿವರ್ಷವೂ ಜೀವದಾನವನ್ನು ಪಡೆದು ಮುಂದಕ್ಕೆ ಹೋಗುತ್ತಲೇ ಇದ್ದೀರಿ. ಹೀಗೆ ಈಗಾಗಲೇ 17 ವರ್ಷಗಳಾದವು. ಈಗೇನೋ ತಾವು ಮುಂದಿನ ಜುಲೈ ಒಂದನೇ ತಾರೀಖಿನಿಂದ

(ಶ್ರೀ ಎಚ್. ಆರ್. ಕೇಶವಮೂರ್ತಿ)

ಈ ಕಾನೂನನ್ನು ಜಾರಿಗೆ ತರುತ್ತೇವೆಂದು ಆಶ್ವಾಸನೆಯನ್ನೇನೋ ಕೊಟ್ಟಿದ್ದೀರಿ. ಇದನ್ನು ನಾವಾದರೂ ಹೇಗೆ ನಂಬುವುದು ಎಂದು ಇಲ್ಲಿ ನಾನು ಕೇಳುತ್ತಿದ್ದೇನೆ. ಇವೊತ್ತು ಒಂದು ದಿವಸವೆಲ್ಲ ಈ ಒಂದು ಸಣ್ಣ ಬಿಲ್ಲಿಗಾಗಿ ಈ ಸಭೆಯ ಕಾಲವನ್ನೆಲ್ಲಾ ವ್ಯರ್ಥ ಮಾಡಿದ್ದೀರಿ. ಒಂದು ದಿವಸ ಈ ಶಾಸನ ಸಭೆಯ ಅಧಿವೇಶನವನ್ನು ಕರೆದು ನಡೆಸಬೇಕಾದರೆ ಕನಿಷ್ಟ ಪಕ್ಷ 10 ಸಾವಿರ ರೂಪಾಯಿಗಳಷ್ಟು ಹಣ ಖರ್ಚಾಗುತ್ತದೆ. ಇಂತಹ ಒಂದು ಸಣ್ಣ ಅಮೆಂಡುಮೆಂಟು ಎಂದು ಹೇಳಿ 1957 ರಿಂದ ಇಲ್ಲಿಯವರೆಗೆ 17 ವರ್ಷಗಳಾದವು ಎಂದರೆ ಇದಕ್ಕಾಗಿ ಸುಮಾರು 1,70,000 ರೂಪಾಯಿಗಳಷ್ಟು ಹಣ ಖರ್ಚಾಯಿತು ಎಂದು ಲೆಕ್ಕಾಚಾರ ಮಾಡಬಹುದು. ಇದಕ್ಕೆ ಬದಲು ತಾವು ಲ್ಯಾಂಡು ರಿಫಾರ್ಮ್ಸ್ ಆಕ್ಟನ್ನು ಜಾರಿಗೆ ತಂದಿದ್ದರೆ ಈ ಖರ್ಚುಗಳನ್ನೆಲ್ಲಾ ತಡೆಯಬಹುದಾಗಿತ್ತು. ಆದರೆ ತಾವು ಇದುವರೆಗೂ ಈ ಕಾನೂನನ್ನು ಇಲ್ಲಿ ಜಾರಿಗೆ ತರಲಿಲ್ಲ. ಪ್ರತಿ ವರ್ಷವೂ ಹತ್ತು ಹತ್ತು ಸಾವಿರ ರೂಪಾಯಿಗಳಷ್ಟು ಹಣವನ್ನು ಇದಕ್ಕೆ ವೃಥಾ ಖರ್ಚು ಮಾಡುತ್ತಿದ್ದೀರಿ. ಇವೊತ್ತು ತಾವು ಈ ಸಭೆಯಲ್ಲಿರುವ ಸರಕಾರಿ ನೌಕರರುಗಳು ಮತ್ತು ಇನ್ನಿತರ ಸರಕಾರದ ಇಲಾಖೆಯ ನೌಕರರು ಗಳು ನಿನ್ನೆಯಿಂದ 'ಡಿಮ್ಯಾಂಡ್ಸ್ ಡೇ' ಎಂದು ಬ್ಲಾಕು ಬಾಡ್ಜ್‌ಗಳನ್ನು ಪ್ರೊಟೆಸ್ಟು ಮಾಡುವುದ ಕ್ಕಾಗಿ ಧರಿಸಿಕೊಂಡು ಓಡಾಡುತ್ತಿದ್ದಾರೆ. ಅವರ ಬೇಡಿಕೆಗಳು ನ್ಯಾಯವಾಗಿದ್ದರೂ ಕೂಡ ಸರಕಾರ ದವರು ಅವರಿಗೆ ಹಣ ಕೊಡಲು ನಮ್ಮಲ್ಲಿಲ್ಲ ಎಂದು ಹೇಳುತ್ತ ಬರುತ್ತಿದ್ದಾರೆ. ಇಂತಹ ಒಂದು ಸಣ್ಣ ತಿದ್ದುಪಡಿ ಕಾನೂನನ್ನು ತರಬೇಕೆಂದು ಇದಕ್ಕಾಗಿ ಸಾವಿರಾರು ರೂಪಾಯಿಗಳನ್ನು ಅನ್ಯಾಯವಾಗಿ ಖರ್ಚುಮಾಡುತ್ತ ಬರುತ್ತಿದ್ದಾರೆ. ಈ ಕಾನೂನನ್ನು ಇನ್ನೂ ಮುಂಚೆ ತಂದಿದ್ದರೆ ಸರಕಾರ ಎಷ್ಟೋ ದುಡ್ಡನ್ನು ಉಳಿಸಬಹುದಾಗಿತ್ತು. ಮತ್ತು ಅದನ್ನು ಬೇರೆ ಕೆಲಸಗಳಿಗಾಗಿ ಉಪಯೋಗಿಸಬಹು ದಾಗಿತ್ತು. ಆದುದರಿಂದ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು. ಆದಷ್ಟು ಬೇಗ ಕಾನೂನನ್ನು ಜಾರಿಗೆ ತನ್ನಿ. ಇದರ ಬಗ್ಗೆ ಹೇಳುವಾಗ ಚೈನಾದಲ್ಲಿ 1948 ರಲ್ಲಿ ಬರೆದ ಒಂದು ಪುಸ್ತಕದಲ್ಲಿ ಬರೆದಂತೆ ಒಂದು ಡ್ರಿಲ್ಲಿಂಗ್ ಮೆಷಿನರಿಯನ್ನು ಎಲೆಕ್ಟ್ರಿಕ್ ಮೆಷಿನರಿಯನ್ನಾಗಿ ರೀಪ್ಲೇಸು ಮಾಡಲು ಅಲ್ಲಿನ ಸರಕಾರದವರು ಮಾಡಿದಂತೆ ಮಾಡಬೇಡಿ. ರೈತನನ್ನು ಅನ್ಯಾಯವಾಗಿ ಹಾಳು ಮಾಡಬೇಡಿ. ಒಂದು ಕಡೆ ಕೋಟಿಗಟ್ಟಲೆಯಷ್ಟು ಹಣವನ್ನು ಶರಾವತಿಗಾಗಿ ಎಂದು ಖರ್ಚು ಮಾಡುತ್ತಿದ್ದೀರಿ, ಇನ್ನೊಂದು ಕಡೆ ಜನಕ್ಕೆ ಅನ್ಯಾಯವಾಗುವಂತೆ ಮಾಡುತ್ತಿದ್ದೀರಿ. ಆ ರೀತಿ ಮಾಡದೆ ನ್ಯಾಯವಾಗಿ ಎಲ್ಲವನ್ನೂ ಸರಿಯಾಗಿ ಮಾಡಿ ಎಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

(Mr. SPEAKER in the Chair).

ಲ್ಯಾಂಡ್ ರಿಫಾರ್ಮ್ಸ್ ಕಾನೂನು ಜಾರಿಗೆ ತರುವುದಕ್ಕೆ ಸರಕಾರಕ್ಕೆ ಎಷ್ಟು ದಿವಸ ಬೇಕು ? ಇಂಥ ಕಾನೂನು ತರುವುದಕ್ಕೆ ಇಂಡಿಯಾ ದೇಶದಲ್ಲಿ ಜನ ಪ್ರತಿನಿಧಿಗಳು ಇಲ್ಲವೇ ? ಐವತ್ತು ಕೋಟಿ ಜನ ಸಂಖ್ಯೆ ಇರತಕ್ಕ ಚೈನಾ ದೇಶದಲ್ಲಿ ಇಂಥ ಭೂಸುಧಾರಣೆ ಕಾನೂನನ್ನು 50 ದಿನಗಳಲ್ಲಿ ಜಾರಿಗೆ ತಂದಿದ್ದಾರೆ. 40 ಕೋಟಿ ಜನ ಸಂಖ್ಯೆಯ ಪ್ರತಿನಿಧಿಗಳು ಇರುವ ನಮ್ಮ ದೇಶದಲ್ಲಿ ಅದು ಸಾಧ್ಯ ವಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ದೇಶದಲ್ಲಿ ಅಸೆಂಬ್ಲಿ ಇಲ್ಲ. ಅಲ್ಲಿ ವಿರೋಧ ಪಕ್ಷ ಇಲ್ಲ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಆ ದೇಶದಲ್ಲಿ 50 ದಿನಗಳಲ್ಲಿ ಭೂಸುಧಾರಣೆ ಜಾರಿಗೆ ತಂದಿದ್ದಾರೆ. ಸರಕಾರ ಈ ಕಾನೂನನ್ನು ತಕ್ಷಣ ಜಾರಿಗೆ ತರದೆ ಬರೀ ಕಾನೂನುಗಳನ್ನು ಜಾಸ್ತಿ ಮಾಡಿದರೆ ಅದನ್ನು ಕೇಳುವವರೇ ಇರುವುದಿಲ್ಲ. ಈ ರೀತಿ ಕಾನೂನು ಜಾರಿಗೆ ತರುವುದನ್ನು ನಿಧಾನ ಮಾಡಿದರೆ ಅದು ಒಂದು ರೀತಿಯಲ್ಲಿ ಸ್ಲೋ ಪಾಯಿಜನ್ ಮಾಡಿದ ಹಾಗೆ ಆಗುತ್ತದೆ. ಇಂಥ ಕಾನೂ ನನ್ನು ಇಂಡಿಯಾ ದೇಶ ಮೊದಲು ಮಾಡಬೇಕಾಗಿದೆ. ಇದು ಸಮಗ್ರ ದೇಶಕ್ಕೆ ಅನ್ವಯಿಸುವಂತೆ ಇರಬೇಕು. ರಾಜ್ಯ ಸರಕಾರಕ್ಕೆ ಇದನ್ನು ಮಾಡಲು ಸಾಧ್ಯವಿಲ್ಲ, ಕೇಂದ್ರ ಸರಕಾರದವರೇ ಮಾಡಬೇಕು ಎಂದು ಕೇಂದ್ರ ಸರಕಾರಕ್ಕೆ ಕಾಗದ ಬರೆದು ತಿಳಿಸಬೇಕಾಗಿತ್ತು. ಈಗ ತಿದ್ದುಪಡಿ ತಂದು ಹೀಗೆ ವರ್ಷೇ ವರ್ಷೇ ಇದಕ್ಕೆ ಜೀವದಾನ ಮಾಡುವುದರಿಂದ ಜನತೆಯ ನಂಬಿಕೆ ಕಳೆದು ಹೋಗಿದೆ. ನೀವು ಹೇಳುವುದನ್ನು ಜನ ನಂಬುವುದಕ್ಕಾಗುವುದಿಲ್ಲ. ಈ ಒಂದು ತಿದ್ದುಪಡಿ ಮಸೂದೆ ಚರ್ಚೆಗಾಗಿ ಈ ಸಭೆ ನಡೆಸಲು ಹತ್ತು ಸಾವಿರ ರೂಪಾಯಿ ಜನತೆಯ ದುಡ್ಡು ಹಾಳಾಗುತ್ತಿದೆ. ಇದನ್ನು ದೃಷ್ಟಿಯಲ್ಲಿ ಇಟ್ಟುಕೊಳ್ಳಬೇಕು. ಈಗ ಒಂದು ವರ್ಷ ಜೀವದಾನ ಕೊಡಬೇಕೆಂಬುದು ಈ ಮಸೂದೆಯಲ್ಲಿದೆ. ಒಂದು ವರ್ಷ ಅವಧಿ ಎಂದು ಇರುವುದರ ಬದಲು ಭೂಸುಧಾರಣೆಯ ಕಾನೂನು ಜಾರಿಗೆ ಬರುವ ವರೆಗೆ ಇದಕ್ಕೆ ಜೀವದಾನ ಇರಬೇಕೆಂಬುದೇ ನನ್ನ ತಿದ್ದುಪಡಿಯ ಉದ್ದೇಶ. ತಡವಾಗದೆ ಒಂದು

ವರ್ಷಕ್ಕಿಂತ ಮೊದಲೆ ಅದು ಜಾರಿಗೆ ಬಂದರೂ ಕೂಡ ಈ ತಿದ್ದುಪಡಿಯಿಂದ ತೊಂದರೆಯಾಗುವುದಿಲ್ಲ. ಒಂದು ವೇಳೆ ತಡವಾದರೆ ಪುನಃ ತಿದ್ದುಪಡಿ ಮಸೂದೆ ತರಬೇಕಾಗಿಲ್ಲ. ಒಟ್ಟಿನಲ್ಲಿ ಜನತೆಯ ಹಣ ಉಳಿಸಬೇಕೆಂಬುದೇ ಈ ನನ್ನ ತಿದ್ದುಪಡಿಯ ಉದ್ದೇಶ. ಆದುದರಿಂದ ನನ್ನ ತಿದ್ದುಪಡಿಯನ್ನು ಸಭೆ ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

Sri G. V. GOWDA.—Sir, I am opposing the amendment. The intention of my friend is very good but it is not expressed correctly.

Mr. SPEAKER.—I am not allowing the intention to be supported.

Sri G. V. GOWDA.—We do not know when the Land Reforms Act is going to be brought into force. It is not definite ; it is vague. Anything that is not certain cannot be incorporated in the Statute.

Sri M. V. KRISHNAPPA.—I do not accept it.

Mr. SPEAKER.—The question is ;

"That in the proposed amendment of Mysore Act 13 of 1957, lines 4 and 5 for the words and figures 'thirty-first day of March 1966' the words 'on the day the Mysore Land Reforms Act is brought into force' shall be substituted."

The amendment was negatived.

Mr. SPEAKER.—The question is :

"That clause 2 stand part of the Bill"

The motion was adopted.

Clause 2 was added to the Bill.

HON'BLE MEMBERS.—None of the other amendments are to be moved.

Mr. SPEAKER.—Then I am putting the rest of the clauses to the vote. The question is:

"That clauses 3 to 6 both inclusive stand part of the Bill."

The motion was adopted.

Clauses 3 to 6, both clauses were added to the Bill.

Mr. SPEAKER.—The question is :

"That clause 1, the title and the preamble do stand part of the Bill."

The motion was adopted.

Clause 1, the title and the preamble were added to the Bill.

Motion to pass.

Sri M. V. KRISHNAPPA.—Sir, I beg to move:

"That the Mysore Tenancy Laws (Amendment) Bill, 1965 be passed."

Mr. SPEAKER.—The question is:

"That the Mysore Tenancy Laws (Amendment) Bill, 1965 be passed."

The motion was adopted.

The House will now adjourn and meet tomorrw at 8-30 A.M.

The House adjourned at Six of the Clock to meet again at Thirty Minutes past Eight of the Cloek on Saturday, the 27th February 1965.